

# ಅಪರಂಜಿ

ತಿಳಿನಗೆಯ ಕಾರಂಜಿ


ಜೂನ್–2024




ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
fbb
BHIMA
Reach us for your paper bag requirements
+91 89719 95599 | sales@bagfactory.co.in | bagfactory.co.in


ವ್ಯಂಗ್ಯಚಿತ್ರಕಾರರ ದಿನದ
ಶುಭಾಶಯಗಳು, ಡಿಯರ್ !
ಥಾಂಕ್ ಯು !
ಪ್ರಚಲಿತ ವಿದ್ಯಮಾನಗಳನ್ನು
ನೋಡಿದರೆ, ಪ್ರತಿದಿನವೂ
ವ್ಯಂಗ್ಯಚಿತ್ರಕಾರರ ದಿನವೇ,
ಅಲ್ವಾ ಡಿಯರ್ !
OK...I WILL COPY THE DATA ONTO A PEN DRIVE AND SEND IT TO YOU.
NO PEN DRIVE.. PRINT THE DATA AND GIVE IT TO ME !
MAY
5

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED — PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41
ಸಂಚಿಕೆ – 09
ಜೂನ್ – 2024

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ಶರಲೇಖನ ಪುನರಾಗಮನ | ವತ್ಸಸ | 3 |
| ನ್ಯಾನೋ ಕತೆಗಳು | ವಿ.ವಿಜಯೇಂದ್ರ ರಾವ್ | 8 |
| ಉದರ ನಿಮಿತ್ತಂ ಬಗೆ ಬಗೆ ರುಚಿಯಂ | ಕೆ.ಎಸ್.ಸೋಮೇಶ್ವರ | 10 |
| ಕ್ರಾಂತಿಯ ಕ್ರಿಕೆಟ್ ಕ್ರಶ್........ | ಸುಮನಾ | 13 |
| ಪುಸ್ತಕ ಪರಿಚಯ | ಗೌರಿ ಚಂದ್ರಕೇಶರಿ | 16 |
| ಬೆಲ್ಲಿನ ರುಚಿ ಮತ್ತ 'ಪ್ರತಿಧ್ವನಿ' | ಸಿ.ಎ. ವಿಲಾಸ ನಾ ಹುದ್ದಾರ | 17 |
| ನನ್ನಿಂದ ನೀವ್ ಕೆಡ್ಲಿಲ್ಲ ರೀ... | ಮಂಗಳ ಎಂ ನಾಡಿಗ್ | 19 |
| ಕವಿಗೋಷ್ಠಿ ಅಧ್ಯಕ್ಷತೆ | ಸುಮಾ ರಮೇಶ್ | 21 |
| ನೆನಪಿರಲಿ... | ನಳಿನಿ ಟಿ. ಭೀಮಪ್ಪ | 24 |
| ತುಂತುರು | ದಂನಅ | 26 |
| ಅಮ್ಮನ ನೆನಪು; ದೋಸೆಯ ಆಸೆ | ಜಿ. ವಿ. ಅರುಣ | 27 |
| ಹೆಂಡತಿ ಸಂತತಿ ಸಾವಿರವಾಗಲಿ... | ಗುಂಡುರಾವ್ ದೇಸಾಯಿ | 29 |
| ವೈಯಕ್ಕೆ | ಜೋಗಿ | 36 |


ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ಚುನಾವಣೆಗಳ ಬಗ್ಗೆ ಇನ್ನು ಕಿಡಿ ಹಾರಿಸಬೇಡಿ ಅಂತ
ಹಲವಾರು ಓದುಗರು ನಮಗೆ ಬರೆದಿದ್ದಾರೆ !!

* * *

ವಕೀಲ ವೃತ್ತಿಯು ವಿಶಿಷ್ಟವಾದದ್ದು ; ಅದನ್ನು ಬೇರೆ ಯಾವ
ವೃತ್ತಿಗೂ ಹೋಲಿಸಲು ಸಾಧ್ಯವಿಲ್ಲ

ಮಾನ್ಯ ನ್ಯಾಯಾಧೀಶರು

ಹೌದು, ನಮಗೂ ಹಾಗೇ ಅನ್ನಿಸುತ್ತೆ, ಯುವರ್ ಆನರ್ !!

* * *

ಒಬ್ಬರು ಮಹಿಳಾ ಸಿ. ಐ . ಡಿ ಅಧಿಕಾರಿ ಬಂಧನ;
ಎರಡು ಕೋಟಿ ವಸೂಲಿ.

ದಿನ ಪತ್ರಿಕೆ

ಸ್ತ್ರೀ ಶಕ್ತಿಯ ಕರಾಳ ದುರುಪಯೋಗ ?!

* * *

ಸಿಬ್ಬಂದಿಯ ಜೊತೆ ಸರಸ ; ಬಿಲ್ ಕಲೆಕ್ಟರ್ ಬಂಧನ

ಪತ್ರಿಕೆ

ಪಾಪ, ಆತನಿಗೆ ಸಮರಸವೇ ಜೀವನ ಎಂಬ ಅರಿವು ಇಲ್ಲ !!

* * *

ತ್ರಿಪುರ ಜೈಲಿನಿಂದ ಕೈದಿ ಪರಾರಿ ; ಬೇರೆ ಠಾಣೆಗಳಿಗೂ ಮಾಹಿತಿ

ದಿನಪತ್ರಿಕೆ

ಠಾಣೆಗಳ ಹತ್ತಿರ ಸುಳಿಯುವಷ್ಟು ಬೆಪ್ಪನಲ್ಲ ಆ ಕೈದಿ !!

* * *

ಮೋದಿ ಅವರಿಗೆ ಮಮತಾ, ಅಡಿಗೆ ಮಾಡಲು ಸಿದ್ಧ

ಪತ್ರಿಕೆ

ಖಾರ ಮತ್ತು ಕಹಿ ಪರಮಾನ್ನನವ್ವಾ ದೂರ ಇಡುವುದೇ ಸೂಕ್ತ
ಅಂತ ಅಪರಂಜಿ ನಕ್ಕಳಂತೆ !!

* * *

ಕೃಷ್ಣನ ದರ್ಶನ ಪಡೆದ ರವಿ ಶಾಸ್ತ್ರಿ

ಸುದ್ದಿ

ವರ್ಲ್ಡ್ ಕಪ್‌ಗೆ ತಯಾರಿ ಆಗುವಂತೆ ಕಾಣುತ್ತದೆ.

* * *

ಶಾಲೆ ಒಂದರಲ್ಲಿ ಹುಸಿ ಬಾಂಬ್ ಬೆದರಿಕೆ

ಪತ್ರಿಕೆ

ಮಕ್ಕಳೆಲ್ಲ ಭಯ ಮಿಶ್ರಿತ ಸಂತಸದಿಂದ ಓಡಿದರಂತೆ !!

■

# ಜಂಗಮವಾಣಿ ಪ್ರಕರಣ

ವತ್ಸನ

ಮೊನ್ನೆ ಏಪ್ರಿಲ್ ತಿಂಗಳ ಒಂದು ದಿನ ಬೆಂಗಳೂರಿನ ತಾಪಮಾನ 38 ಡಿಗ್ರಿಗೆ ಏರಿತ್ತಲ್ಲ, ಅವತ್ತಿನ ಸಂಜೆ ಶರಲೇಖ ಮತ್ತು ನಾನು ಹರಟುತ್ತ ಕುಳಿತಿದ್ದೆವು. ಬಹು ದಿನಗಳ ನಂತರ ನಮ್ಮ ಮಿತ್ರ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿಯವರೂ ನಮ್ಮೊಂದಿಗಿದ್ದರು.

"ಇದೆಲ್ಲಾ ಗ್ಲೋಬಲ್ ವಾರ್ಮಿಂಗ್ ಪ್ರಭಾವಾನ್ರಪಾ. ಮನುಷ್ಯ ಹಿಂಗ ಫಾಸಿಲ್ ಫ್ಯೂಯಲ್‌ನ ಗೊತ್ತು ಗುರಿಯಿಲ್ಲದಂಗ ಬಳಸ್ಲಿಕ್ಕ ಹತ್ತಿದ್ರ ಇನ್ನೇನಾಗ್ತೈತಿ?" ಅಂತ ಅಂದ್ರು ಉಳ್ಳಾಗಡ್ಡಿ. ಶರಲೇಖ," ನೋಡ್ರೀ, ಇವತ್ತಿನ ಉಷ್ಣಾಂಶ ಇಂದಿನದಲ್ಲ. ಏಪ್ರಿಲ್ 2016 ರಲ್ಲಿ ಉಷ್ಣಾಂಶ ಇಷ್ಟೇ ಇತ್ತಂತೆ. ಅದಕ್ಕೂ ಹಿಂದೆ 1916ನೇ ಇಸವೀಲಿ ಈ ತಾಪಮಾನ ದಾಖಲಾಗಿತ್ತು ಅಂತ ಗೂಗಲಪ್ಪ ಹೇಳ್ತಾನೆ. ಹಾಗಾದ್ರೆ ಆವಾಗಿನಿಂದ್ಲೂ ಫಾಸಿಲ್ ಫ್ಯೂಯಲ್ ಸುಡ್ತಾ ಇದ್ರೆ? ಇಷ್ಟೊಂದು ಕಾರುಗಳೇ ಇರಲಿಲ್ವಲ್ಲಾರಿ ಆಗ." ಅಂತ ಪ್ರತಿ ಸವಾಲನ್ನೆಸೆದ. ಅಂದಹಾಗೆ ಮೊನ್ನೆ ನಾನು ಈ ಬಿಸಿಲಿನ ಬೇಗೆ ಇದುರಿಸಲು ಅಮೆಜಾನ್‌ನಿಂದ ಒಂದು ಪುಟ್ಟ ಟೇಬಲ್ ಏರ್‌ಕೂಲರ್ ತರಿಸಿ ಶರಲೇಖನಿಗೆ ಕೊಟ್ಟಿದ್ದೆ. "ಶರಲೇಖ, ನಾನು ಕೊಟ್ಟ ಏರ್ಕೂಲರ್ ಹೇಗೆ ಕೆಲಸ ಮಾಡ್ತಾ ಇದೆ?" ಅಂತ ಪ್ರಶ್ನಿಸಿದೆ. "ಶ್ರೀರಾಮಚಂದ್ರ ಮತ್ತು ಲಕ್ಷ್ಮಣ ಇಬ್ಬರೂ ಸೇರಿ ಶೂರ್ಪನಖಿಯ ಮೂಗು ತರಿದು ಕಳಿಸಿದ ನಂತರ ಆಕೆ ಲಂಕೆಗೆ ಓಡಿಹೋಗಿ, ತನ್ನ ಅಂತಃಪುರದಲ್ಲಿ ಕುಳಿತು ದುಃಖದಿಂದ ನಿಟ್ಟುಸಿರು ಬಿಟ್ಟಳಲ್ಲಾ. ಆ ಉಸಿರು ನಿನ್ನ ಏರ್‌ಕೂಲರ್ ಗಿಂತ ಜೋರಾಗಿತ್ತು !" ಅಂತ ನಗಾಡುತ್ತಾ ಒಂದು ಮಹೋಪಮೆ ಎಸೆದ. ಸ್ವಲ್ಪ ಹೊತ್ತು ಐಪಿಎಲ್ ವೀಕ್ಷಿಸಿ ಉಳ್ಳಾಗಡ್ಡಿ ಹೊರಟು ನಿಂತರು. ಹೋಗುಕ್ಕೆ ಮುಂಚೆ, "ಶರಲೇಖ ಸಾಹೇಬ್ರಾ, ನಮ್ಮ ಪರಿಚಯದ ಒಬ್ಬ ಹುಡುಗ, ಏನೋ ತ್ರಾಸದ, ನಿಮ್ಮನ್ನ ಕಾಣಬೇಕು ಅಂತಿದ್ದ. ನಾಳೆ ನಿಮ್ಮ ಬಳಿ ಕಳಿಸ್ಲೇನ್ರಿ ?" ಅಂತ ಕೇಳಿ, ಶರಲೇಖನ ಒಪ್ಪಿಗೆ ಪಡೆದು ವಿದಾಯ ಹೇಳಿದರು.

ಮಾರನೆಯ ಸಂಜೆ ಆ ಹುಡುಗ ಕ್ಷಿತಿಜ್ ನಮ್ಮ ಬಳಿಗೆ ಬಂದು ಕುಳಿತಿದ್ದ. ಎತ್ತರದ ನಿಲುವು. ಸುಮಾರು ಮೂವತ್ತರ ಪ್ರಾಯ. ನೋಡುಕ್ಕೆ ಬಹು ಚುರುಕಾಗಿ ಕಾಣುತ್ತಿದ್ದ. ಯಾವುದೋ ಮಲ್ಟಿ ನ್ಯಾಷನಲ್ ಕಂಪನಿಯಲ್ಲಿ ಸಿ.ಇ.ಓ. ಅಂತೆ. ಶರಲೇಖ ಅವನನ್ನು ಬಹು ಆದರದಿಂದ ಬರಮಾಡಿಕೊಂಡು, "ಏನಪ್ಪ ನಿನ್ನ ಸಮಸ್ಯೆ? ಎಲ್ಲಾ ವಿವರವಾಗಿ ಹೇಳು." ಅಂತ ಅಂತಃಕರಣ ಪೂರ್ವಕವಾಗಿ ಕೇಳಿದನಂತರ, ಕ್ಷಿತಿಜ್ ತನ್ನ ಮಾತನ್ನು ಪ್ರಾರಂಭಿಸಿದ.

"ನೋಡಿ ಅಂಕಲ್, ನಾನು ಮತ್ತು ನನ್ನ ಪತ್ನಿ ಹೊಸಕೆರೆ ಹಳ್ಳಿ ಬಡಾವಣೆಯಲ್ಲಿನ ಒಂದು ಗೇಟೆಡ್ ಕಮ್ಯೂನಿಟಿಯಲ್ಲಿ ವಾಸವಾಗಿದ್ದೇವೆ. ನಮ್ಮ ತಂದೆ ಪ್ರಭಾಕರ್ ರಾವ್ ಕಳೆದ ವರ್ಷ ತೀರಿಹೋದಮೇಲೆ ನಮ್ಮಮ್ಮ ಹುಳಿಮಾವಿನಲ್ಲಿರೋ ನಮ್ಮ ತಾತ ಕಟ್ಟಿಸಿದ ಮನೆಯಲ್ಲೇ ವಾಸವಾಗಿದ್ದಾರೆ. ಅವರ ಹೆಸರು ಡಾ. ಪಂಕಜಾ ರಾವ್. ಟಾಟಾ ಇನ್ಸ್ಟಿಟ್ಯೂಟಿನಲ್ಲಿ ಪ್ರೊಫೆಸರ್ ಆಗಿದ್ದರು. ಈಗ ನಿವೃತ್ತಿಹೊಂದಿದ ನಂತರ ಮನೆಯಿಂದಲೇ ಕನ್ಸಲ್ಟೆನ್ಸಿ ಮಾಡ್ತಿದಾರೆ. ನನ್ನ ತಂಗಿ ರಶ್ಮಿ ಕೂಡಾ ತುಂಬಾ ಪ್ರತಿಭಾವಂತೆ. ಎಲೆಕ್ಟ್ರಾನಿಕ್ ಸಿಟಿಯ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಚ್. ಆರ್. ಡೈರೆಕ್ಟರ್. ಕೆಲಸಕ್ಕೆ ಹತ್ತಿರ ಅಂತ ಅಲ್ಲೇ ಒಂದು ಫ್ಲಾಟ್ ನಲ್ಲಿ ವಾಸ. ಇಷ್ಟೇ ನೋಡಿ ನಮ್ಮ ಕುಟುಂಬ.

ಈಗ ಸಮಸ್ಯೆ ಬಗ್ಗೆ ಹೇಳ್ತೀನಿ. ಸುಮಾರು ಕಳೆದ ಮೂರು ವಾರಗಳಿಂದ ಪ್ರತಿ ರಾತ್ರಿ, ರಾತ್ರಿ ಏನು ಬಂತು, ಬೆಳಗಿನ ಜಾವ ಮೂರು ಘಂಟೆಯ ಸುಮಾರಿಗೆ ನಮ್ಮ ತಾಯಿಯವರಿಗೆ ಒಂದು ಅಪರಿಚಿತ ಫೋನ್ ಕಾಲ್ ಬರುಕ್ಕೆ ಶುರು ಆಗಿದೆ. ಫೋನ್ ಎತ್ತಿದರೆ ಆ ಕಡೆಯಿಂದ ಏನೂ ಸದ್ದೇ ಇರೋದಿಲ್ಲ. ಮೊದಲು ಮೊದಲು ನಮ್ಮ ತಾಯಿ "ಇದು ಯಾವುದೋ ಪ್ರಾಂಕ್ ಕಾಲ್ ಇರಬೇಕು. ಕಾಲ್ ರಿಸೀವ್ ಮಾಡ್ದೇ ಇದ್ರೆ ಅದೇ ಸರಿಹೋಗತ್ತೆ" ಅಂತ ಅಂದುಕೊಂಡು ಕಾಲ್ ರಿಸೀವ್ ಮಾಡಲಿಲ್ಲ. ಫೋನ್ ಹತ್ತು ಬಾರಿ ರಿಂಗ್ ಆಗಿ ನಿಂತುಹೋಗೋದು. ಮತ್ತೆ ಹತ್ತು ನಿಮಿಷದ ನಂತರ ಪುನಃ ಕಾಲ್ ಬರೋದು. ನಮ್ಮ ತಾಯಿಯವರಂತೂ ತುಂಬಾ ನರ್ವಸ್ ಆಗಿಬಿಟ್ಟಿದಾರೆ. ದೊಡ್ಡ ಮನೆ. ಆಸುಪಾಸಿನಲ್ಲಿ ಮನೆಗಳೂ ಇಲ್ಲ. ಕೊನೆಗೆ ತಡೆಯಲಾರದೆ ಮೂರು ವಾರದ ನಂತರ ಅವರು ನನಗೆ ಇದನ್ನ ಹೇಳಿದಾಗ ನಮ್ಮ ಫ್ಯಾಮಿಲಿ ಫ್ರೆಂಡ್ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಅವರೊಂದಿಗೆ ಸಮಾಲೋಚನೆ ಮಾಡಿದೆವು. ಅವರು ನಿಮ್ಮ ಸಹಾಯ ಕೊಡಿಸುವುದಾಗಿ ಹೇಳಿದರು. ಈಗ ಇಲ್ಲಿ ಬಂದಿದ್ದೇನೆ." ಅಂತ ಚಿಕ್ಕದಾಗಿ ಚೊಕ್ಕವಾಗಿ ಹೇಳಿದ. ಶರಲೇಖ, "ನನ್ನಲ್ಲಿಗೆ ಬಂದದ್ದು ಒಳ್ಳೆಯದಾಯಿತು. ನಿಮ್ಮ ತಾಯಿಯವರನ್ನು ಭೇಟಿಮಾಡುವುದು ಮೊದಲ ಕೆಲಸ. ನಾಳೆ ಬೆಳಗ್ಗೆ ಹತ್ತು ಗಂಟೆಗೆ ನಮ್ಮಿಬ್ಬರನ್ನು ಅವರಲ್ಲಿಗೆ ಕರೆದೊಯ್ಯಲಾದೀತೇ?" ಎಂದು ಕೇಳಿ ಅವನ ಅನುಮೋದನೆ ಪಡೆದು ಅವನನ್ನ ಬೀಳ್ಕೊಂಡ.

ಕ್ಷಿತಿಜ್ ಹೊರಟಮೇಲೆ ನಾನು, "ಇದೇನು ಅಂತಹ ದೊಡ್ಡ ಸಮಸ್ಯೆನೇ ಆಗಬಾರದು. ಕಾಲರ್ ಐಡಿ ಯಿಂದ ಫೋನ್ ಮಾಡ್ತಿರೋರು ಯಾರು ಅಂತ ಗೊತ್ತಾಗಲ್ವೇ? ಗೊತ್ತಿಲ್ದೇ ಇರೋ ನಂಬರ್ ಆಗಿದ್ರೆ ಫೋನ್ ಕಂಪನಿಯಿಂದ ತಿಳ್ಕೊಳ್ಳೋದು ಏನು ಕಷ್ಟ. ಇಲ್ಲಾ ಅಂದರೆ ಕಾಲ್ ನಂಬರ್‌ನ ಬ್ಲಾಕ್ ಮಾಡಬಹುದು. ಉಳ್ಳಾಗಡ್ಡಿನೇ ತಮ್ಮ ಪೋಲೀಸ್ ಡಿಪಾರ್ಟ್ಮೆಂಟ್ ಮೂಲಕ ಇದನ್ನ ಒಂದು ನಿಮಿಷದಲ್ಲಿ ಪರಿಹರಿಸಬಹುದಲ್ವೆ?" ಅಂತೆಲ್ಲಾ ಪ್ರಶ್ನಿಸಿದೆ.

ಶರಲೇಖ ನಸುನಕ್ಕು, "ಸಮಸ್ಯೆ ಅಷ್ಟು ಸುಲಭ ಆಗಿದ್ರೆ ನನ್ನ ವರೆಗೂ ಬರ್ತಾನೇ ಇರ್ಲಿಲ್ಲ. ಉಳ್ಳಾಗಡ್ಡಿನೇ ಬಗೆಹರಿಸ್ತಾ ಇದ್ರು. ಇಂತಹ ವಿಚಿತ್ರ ನಡವಳಿಕೆ ಯಾರಾದ್ರೂ ತೋರಿಸಿದ್ರೆ ಅದಕ್ಕೆ ಯಾವುದಾದರೂ ಪ್ರಬಲವಾದ ಕಾರಣ ಇರುತ್ತೆ. ಸಿಮ್ ಕಾರ್ಡ್ ಬದಲಿಸ್ಬಿಡಿ, ಫೋನ್ ಆಫ್ ಮಾಡಿ ಇಟ್ಬಿಡಿ ಅಂತೆಲ್ಲಾ ಹೇಳೋದು ಆಳವಾದ ಗಾಯಕ್ಕೆ ಬ್ಯಾಂಡ್‌ಏಡ್ ಅಂಟಿಸಿದಂತೆ. ಅದರಿಂದ ಗಾಯ ಮಾಯೋದಿಲ್ಲ. ಯಾರು ಮಾಡ್ತಾ ಇದಾರೆ, ಯಾತಕ್ಕೆ ಮಾಡ್ತಾ ಇದಾರೆ ಅಂತ ಕಂಡು ಹಿಡೀಬೇಕು. ಇರಲಿ, ಮಾಹಿತಿ ಇಲ್ದೇ ಏನೂ ಯೋಚಿಸುಕ್ಕೆ ಆಗುಲ್ಲ. ನಾಳೆ ಪಂಕಜಮ್ಮನವರನ್ನ ಮಾತಾಡ್ಸಿ ಆಮೇಲೆ ಮುಂದಿನ ಹೆಜ್ಜೆ." ಮಾರನೆಯ ದಿನ ಕ್ಷಿತಿಜ್ ಕಾರಿನಲ್ಲಿ ಕುಳಿತು ನಾವಿಬ್ಬರೂ ಹುಳಿಮಾವಿನತ್ತ ಪ್ರಯಾಣ ಬೆಳೆಸಿದೆವು.

ಪಂಕಜಮ್ಮನವರ ಮನೆ ಒಂದು ಫಾರ್ಮ್‌ಹೌಸ್. ಒಂದು ಎಕರೆ ತೋಟದ ಮಧ್ಯೆ ಕಟ್ಟಿದ ಅಚ್ಚುಕಟ್ಟಾದ ಹಳೆಯ ಕಾಲದ ಮನೆ ಅದು. ಸುತ್ತ ಮುತ್ತ ಎಲ್ಲಾ ಖಾಲಿ ನಿವೇಶನಗಳು. ತೋಟದಲ್ಲಿ ಹೊರವಾಗಿ ಬೆಳೆದು ನಿಂತಿದ್ದ ಗಿಡಮರಗಳು ನಿಜಕ್ಕೂ ಮನೋಹರವಾಗಿದ್ದವು. ಪಂಕಜಮ್ಮನವರು ನಮ್ಮನ್ನು ಆದರದಿಂದ ಬರಮಾಡಿಕೊಂಡರು. ಸುಮಾರು ಅರುವತ್ತರ ಪ್ರಾಯ. ಆಧುನಿಕ ವೇಷಭೂಷಣಗಳು. ಬಹುಕಾಲದಿಂದ ತಮ್ಮ ಕಾಲಮೇಲೆ ನಿಂತು ತಮ್ಮ ಜೀವನವನ್ನು ಶಿಸ್ತಿನಿಂದ ನಡೆಸುತ್ತಿದ್ದಂತೆ ಕಾಣಿಸಿತು. ಒಳಗೆ ಕುಳಿತು, ಲಘು ಉಪಹಾರವನ್ನು ಸೇವಿಸಿದ ಬಳಿಕ, ಶರಲೇಖ ನೇರವಾಗಿ ಅವರ

ಸಮಸ್ಯೆಯ ಬಗ್ಗೆ ಮಾತು ಪ್ರಾರಂಭಿಸಿದ.

"ಕ್ಷಿತಿಜ್ ನಿಮಗೆ ಬರ್ತಿರೋ ಅಪರಿಚಿತ ದೂರವಾಣಿ ಕರೆಗಳ ಬಗ್ಗೆ ಸ್ಥೂಲವಾಗಿ ತಿಳಿಸಿದ್ದಾನೆ. ಈಗ ನೀವೇ ಎಲ್ಲವನ್ನು ಚಾಚೂ ತಪ್ಪದೇ ಹೇಳಿಬಿಡಿ. ಆಮೇಲೆ ನನಗೆ ಬೇಕಾದ ವಿವರಗಳನ್ನ ಕೇಳುತ್ತೇನೆ" ಅಂತ ಹೇಳಿದ.

"ಇದೆಲ್ಲಾ ಶುರುವಾದದ್ದು ಮೂರು ವಾರಗಳ ಹಿಂದೆ. ನಾನು ದಿನವೆಲ್ಲಾ ಕೆಲಸ ಮುಗಿಸಿ, ಸಂಜೆ ಊಟದ ನಂತರ ಸ್ವಲ್ಪ ಟಿ.ವಿ. ನೋಡಿ ಹತ್ತೂವರೆಗೆ ಮಲಗುವುದು ನನ್ನ ದಿನನಿತ್ಯದ ದಿನಚರಿ. ಸುದೈವದಿಂದ ನನಗೆ ಚೆನ್ನಾಗಿ ನಿದ್ದೆ ಬರುತ್ತೆ. ಕುಂಭಕರ್ಣನ ನಿದ್ದೆ ನಿನಗೆ ಅಂತ ರಶ್ಮಿ ರೇಗಿಸ್ತಾ ಇರ್ತಾಳೆ. ರಾತ್ರಿ ಮಲಗಿದರೆ ಬೆಳಗ್ಗೆ ಆರಕ್ಕೇ ನಾನು ಎಚ್ಚರಗೊಳ್ಳೋದು. ಮೂರು ವಾರದ ಹಿಂದೆ ಬೆಳಗಿನ




ಜಾವ ಮೂರು ಗಂಟೆಯ ಸುಮಾರಿಗೆ ನನ್ನ ಮೊಬೈಲ್ ರಿಂಗಾಯಿತು. ಯಾವುದೋ ಅಪರಿಚಿತ ನಂಬರು. ರಾಂಗ್ ನಂಬರ್ ಇರಬಹುದು ಅಂದುಕೊಂಡು ಫೋನ್ ಎತ್ತಿ ಹಲೋ ಎಂದೆ. ಆ ಬದಿಯಿಂದ ನಿರುತ್ತರ. ಉಸಿರಾಟ ಮಾತ್ರ ಕೇಳಿಸುತ್ತಿತ್ತು. ಯಾರು ನೀವು ಅಂತ ಎಷ್ಟು ಕೂಗಿದರೂ ಏನೂ ಪ್ರತಿಕ್ರಿಯೆ ಇಲ್ಲ. ಕೊನೆಗೆ ಸಾಕಾಗಿ ಫೋನ್ ಕೆಳಗಿಟ್ಟೆ. ಆಮೇಲೆ ನಿದ್ದೆ ಬರಲಿಲ್ಲ ಮಾರನೆಯ ದಿನವೂ ಇದೇ ಮರುಕಳಿಸಿದಾಗ ನನಗೆ ಗಾಬರಿಯಾಗಲು ಶುರುವಾಯಿತು. ಯಾರಾದರೂ ಕಳ್ಳಕಾಕರು ಮನೆ ದೋಚಲು ಹುನ್ನಾರ ನಡೆಸಿದ್ದಾರೇನೋ ಅಂತ ದಿಗಿಲಾಯಿತು. ಬೆಳಗಾದ ಮೇಲೆ ಇದನ್ನೆಲ್ಲಾ ಕ್ಷಿತಿಜನಿಗೆ ಹೇಳೋಣ ಅಂದುಕೊಂಡು ಮಲಗಿದೆ. ಬೆಳಗಿನ ಬಿಸಿಲಿನ ಸುರಕ್ಷತೆಯಲ್ಲಿ ಹಿಂದಿನ ರಾತ್ರೆಯ ಗಾಬರಿ ಇರಲಿಲ್ಲ. ಕ್ಷಿತಿಜನಿಗೆ ಯಾಕೆ ತೊಂದರೆ ಕೊಡಬೇಕು. ಅವನದ್ದೇ ಸಾವಿರ ತಾಪತ್ರಯ ಇರುತ್ತೆ ಅಂತ ಸುಮ್ಮನಾದೆ. ಮೂರು ವಾರ ಇದೇ ಮುಂದುವರಿದ ನಂತರ, ವಿಧಿಯಿಲ್ಲದೇ ಅವನಿಗೆ ಹೇಳಬೇಕಾಯಿತು. ಅವನು ನಮ್ಮ ಸನ್ಮಿತ್ರರಾದ ಉಳ್ಳಾಗಡ್ಡಿಯವರಿಗೆ ಹೇಳಿದ. ಅವರು ನಿಮ್ಮನ್ನ ಪರಿಚಯಿಸಿದ್ದಾರೆ."

"ಈ ಮನೆ ಯಾರ ಹೆಸರಿನಲ್ಲಿದೆ?"

"ನನ್ನ ಹೆಸರಿನಲ್ಲೇ ಇರೋದು. ಅನೇಕ ವರ್ಷಗಳ ಹಿಂದೆಯೇ ಪ್ರಭಾಕರ್ ಇದನ್ನ ನನಗೆ ಹಸ್ತಾಂತರಿಸಿದ್ದರು. ಅವರಿಗೆ ಇದು ಪಿತ್ರಾರ್ಜಿತ ಆಸ್ತಿ. "

"ನಿಮ್ಮ ಪತಿಗೆ ಅಣ್ಣ ತಮ್ಮಂದಿರು ಅಕ್ಕ ತಂಗಿಯರು?"

"ಯಾರೂ ಇಲ್ಲ. ನಮ್ಮ ಅತ್ತೆ ಮಾವಂದಿರಿಗೆ ಅವರು ಒಬ್ಬನೇ ಮಗ"

"ಪಂಕಜಮ್ಮ, ನೀವು ವೃತ್ತಿ ಜೀವನದಲ್ಲಿದ್ದಾಗ ನಿಮ್ಮ ಮೇಲೆ ಯಾರಿಗಾದರೂ ಅಸಮಾಧಾನವಿದ್ದಿರಬಹುದೇ?"

"ಖಂಡಿತ ಇಲ್ಲ. ನನ್ನದು ರೀಸರ್ಚ್ ಕೆಲಸ. ಜನ ಸಂಪರ್ಕ ತೀರ ಕಡಿಮೆ."

ಇಷ್ಟು ಹೇಳಿದ ಮೇಲೆ ಶರಲೇಖ ಅವರ ಮೊಬೈಲ್ ಪಡೆದು ಅದನ್ನ ಬಹು ಕೂಲಂಕಷವಾಗಿ ಪರಿಶೀಲಿಸಿ ಅದನ್ನ ಹಿಂತಿರುಗಿಸಿದ.

"ಆಯಿತು. ನಾನು ಉಳ್ಳಾಗಡ್ಡಿಯವರೊಂದಿಗೆ ಮಾತನಾಡಿ ಮುಂದಿನ ಕೆಲಸ ನಿರ್ಧರಿಸುವೆ. ಇಂದು ರಾತ್ರಿ ಕಾಲ್ ಬಂದರೆ, ಕಾಲ್ ರಿಸೀವ್ ಮಾಡಿ ಅನಂತರ ನಿಮ್ಮ ಲ್ಯಾಂಡ್‌ಲೈನಿನಿಂದ ನನ್ನ ಮೊಬೈಲ್‌ಗೆ ಕಾಲ್ ಮಾಡಿ. ನಾನು ಹೇಳುವವರೆಗೂ ಆ ಕಾಲ್‌ನ ಡಿಸ್ಕನೆಕ್ಟ್ ಮಾಡಬೇಡಿ"

ಎಂದು ಹೇಳಿದನಂತರ ನಾವಿಬ್ಬರೂ ಅಲ್ಲಿಂದ ಹೊರಟೆವು. ಕ್ಷಿತಿಜ್‌ನ ಡ್ರೈವರ್ ನಮ್ಮನ್ನು ಊರಿಗೆ ಕರೆತಂದ.

ಇದಾದ ಹಲವು ದಿನಗಳು ಶರಲೇಖ ಬಹುಮಟ್ಟಿಗೆ ಕಾರ್ಯಮಗ್ನನಾಗಿದ್ದ. ನಾನೂ ನನ್ನ ಹವ್ಯಾಸಗಳಲ್ಲಿ ಮುಳುಗಿದ್ದೆ. ಸುಮಾರು ಒಂದು ವಾರದ ನಂತರ ಒಂದು ಬೆಳಗ್ಗೆ ಶರಲೇಖನಿಗೆ ಕ್ಷಿತಿಜನ ಕರೆ ಬಂತು. ಅವನೊಂದಿಗೆ ಮಾತನಾಡುತ್ತಿರುವಾಗ, ಶರಲೇಖ ನನ್ನ ಕಡೆ ತಿರುಗಿ, "ಇಂದು ಮಧ್ಯಾಹ್ನ ಪಂಕಜಮ್ಮನವರು ನಮ್ಮನ್ನು ಊಟಕ್ಕೆ ಕರೆದಿದ್ದಾರೆ. ಆಗುತ್ತಾ?" ಅಂತ ನನ್ನನ್ನ ಕೇಳಿ ನನ್ನ ಒಪ್ಪಿಗೆ ಪಡೆದು ಕ್ಷಿತಿಜನಿಗೆ ಕನ್ಫರ್ಮ್ ಮಾಡಿದ.

ಪಂಕಜಮ್ಮನವರ ಫಾರ್ಮ್‌ಹೌಸಿನ ತೋಟದಲ್ಲಿದ್ದ ಚಪ್ಪರದ ಕೆಳಗೆ ಬೂಫೆ ವ್ಯವಸ್ಥೆ ಮಾಡಿದ್ದರು. ರಶ್ಮಿ, ಕ್ಷಿತಿಜ್, ಅವನ ಪತ್ನಿ ದೇವಯಾನಿ, ಉಳ್ಳಾಗಡ್ಡಿ ಮತ್ತು ಅವರ ಮಗಳು ಸೀಮಾ ಇವರೆಲ್ಲಾ ಅಲ್ಲಿದ್ದರು. ಸಾಂಪ್ರದಾಯಿಕವಾದ ಅಡುಗೆ, ಬಹು ರುಚಿಯಾಗಿತ್ತು. ಊಟ ಮುಗಿಸಿ ಎಲ್ಲರಿಗೂ ವಿದಾಯ ಹೇಳಿ, ಶರಲೇಖ ಮತ್ತು ನಾನು ಊಬರ್ ಹತ್ತಿದೆವು. ದಾರಿಯಲ್ಲಿ, "ಏನಾಯಿತು ಪಂಕಜಮ್ಮನವರ ಪಡಿಪಾಟಲು ?" ಅಂತ ಪ್ರಾಸಬದ್ಧವಾಗಿ ಕೇಳಿದೆ.

ಶರಲೇಖ ನಸುನಕ್ಕು ತನ್ನ ಹೇಳಿಕೆ ಪ್ರಾರಂಭಿಸಿದ.

"ನೀನು ಹೇಳಿದ ಹಾಗೆ ಕಾಲ್ ನಂಬರ್ ಗುರುತಿಸೋಕ್ಕೆ ಸರ್ವಿಸ್ ಪ್ರೊವೈಡರ್ ಸಹಾಯ ಪಡೆಯಬೇಕಾದರೆ ಪೋಲೀಸ್ ಪರ್ಮಿಷನ್ ಬೇಕಾಗುತ್ತೆ. ಪಂಕಜಮ್ಮ ನಿವೃತ್ತ ಹೆಂಗಸು. ಅವರನ್ನು ಪೋಲೀಸ್ ವ್ಯವಹಾರದಲ್ಲಿ ಸಿಲುಕಿಸುವುದು ಈ ಹಂತದಲ್ಲಿ ಬೇಡ ಅಂತ ನಿರ್ಧರಿಸಿದೆ. ಹಾಗಾಗಿ ನಾನು ಉಳ್ಳಾಗಡ್ಡಿ ಸಹಾಯ ಪಡೆದು ಕಾಲ್ ಐಡೆಂಟಿಫಿಕೇಷನ್ ಪ್ರಕ್ರಿಯೆ ಪ್ರಾರಂಭಿಸಿದೆ. ಈ ವಿಧಾನದಲ್ಲಿ ಫೋನ್ ಕಾಲ್ ಮಾಡುತ್ತಿರುವ ಲೊಕೇಷನ್ ಅನ್ನು ಒಂದು ಬ್ಲಾಕ್ ವರೆಗೆ ಮಾತ್ರ ಗುರುತಿಸಬಹುದು. ಆ ಬ್ಲಾಕಿನಲ್ಲಿ ಫೋನ್ ಎಲ್ಲಿದೆ ಎಂಬುದನ್ನು ಪೋಲೀಸರ ಸಹಾಯದಿಂದಲೇ ಗುರುತಿಸಬೇಕಾಗುತ್ತದೆ. ಆ ರಾತ್ರಿ ಕಾಲ್ ಬಂದಾಗ ಪಂಕಜಮ್ಮ ನನಗೆ ಫೋನ್ ಮಾಡಿದರು. ನಾನು ಆಗ ಸರ್ವಿಸ್ ಪ್ರೊವೈಡರ್ ಆಫೀಸಿನಲ್ಲೇ ಇದ್ದೆ. ಜೊತೆಗೆ ಉಳ್ಳಾಗಡ್ಡಿಯವರೂ ಇದ್ದರು. ಫೋನ್ ಕಾಲ್‌ನ ಎಲೆಕ್ಟ್ರಾನಿಕ್ ಸಿಟಿಯಲ್ಲಿನ ಒಂದು ರೆಸಿಡೆನ್ಷಿಯಲ್ ಬ್ಲಾಕ್‌ಗೆ ಟ್ರೇಸ್ ಮಾಡಿದೆವು. ಉಳ್ಳಾಗಡ್ಡಿ ನನ್ನ ಮುಖವನ್ನ ನೋಡಿದರು. ಆ ಬ್ಲಾಕಿನಲ್ಲೇ ರಶ್ಮಿ ಇರೋದು.

"ಇನ್ನು ಪೋಲೀಸರ ಅಗತ್ಯ ಇಲ್ಲ. ನೀವು ಪಂಕಜಮ್ಮನವರ ಹತ್ತಿರ ಮಾತನಾಡಿ ಇದನ್ನ ಇತ್ಯರ್ಥಮಾಡಿ." ಅಂತ ಉಳ್ಳಾಗಡ್ಡಿಯವರಿಗೆ ಹೇಳಿದೆ. ಅವರು, "ಇದೆಲ್ಲಾ ಸೂಕ್ಷ್ಮದ ವಿಷಯ. ನಾವು ಪೊಲೀಸ್ ಮಂದಿಗೆ ಅದೆಲ್ಲಾ ಸೂಕ್ಷ್ಮ ತಿಳೀವಲ್ದು. ನೀವೇ ಬಂದು ಮಾತಾಡ್ರಿ ಸಾಹೇಬ್ರಾ" ಅಂತ ಕೇಳಿಕೊಂಡ ಮೇಲೆ, ನಾವಿಬ್ಬರೂ ಪಂಕಜಮ್ಮನವರ ಹತ್ತಿರ ಹೋದೆವು.

ನಾನು ಅವರನ್ನು ಕುರಿತು, "ನೋಡೀಮ್ಮಾ, ಈ ಕಾಲ್ ಮಾಡ್ತಿರೋದು ರಶ್ಮಿ. ಅವಳೊಂದಿಗೆ ನಿಮ್ಮ ಸಂಬಂಧ ಹೇಗಿದೆ?" ಅಂತ ನೇರವಾಗಿ ಕೇಳಿದೆ. ಅವರು ಗದ್ಗದಿತರಾದರು.

"ಅದೊಂದು ದೊಡ್ಡ ಕಥೆ. ಮೊದಲಿನಿಂದಲೂ ನಾನು ಕ್ಷಿತಿಜನ ಪಕ್ಷಪಾತಿ ಅಂತ ಅವಳಿಗೆ ನನ್ನ ಮೇಲೆ ಮುನಿಸು. ಕ್ಷಿತಿಜನ ಮದುವೆ ಆದಮೇಲಂತೂ, ನಾನು ದೇವಯಾನಿಯನ್ನು ವಿಶ್ವಾಸದಿಂದ ಮಾತನಾಡಿಸಿದಾಗಲೆಲ್ಲಾ ಇವಳಿಗೆ ಅಸೂಯೆ. ನಾನು ಸಹಾ ನನ್ನ ವೃತ್ತಿ ಜೀವನದಲ್ಲಿ ಮುಳುಗಿದ್ದು ಅವಳ ಇಂತಹ ಕರುಬಿಗೆಲ್ಲಾ ಸೊಪ್ಪು ಹಾಕುತ್ತಿರಲಿಲ್ಲ. ಕ್ರಮೇಣ ಇಬ್ಬರೂ ಒಬ್ಬರಿಂದೊಬ್ಬರು ದೂರವಾದೆವು. ದೂರ ಆದರೇನು, ಎಲ್ಲಾದರೂ ಸುಖವಾಗಿರಲಿ ಅಂದುಕೊಂಡು ನಾನು ನನ್ನ ಕನ್ಸಲ್ಟೆನ್ಸಿ ಕೆಲಸದಲ್ಲಿ ನೆಮ್ಮದಿ ಕಂಡುಕೊಂಡಿದ್ದೆ. ನಾನು ಚೆನ್ನಾಗಿ ನಿದ್ದೆ ಮಾಡಿದಾಗಲೆಲ್ಲಾ "ನಿನಗೇನು, ನನ್ನ ಬಗ್ಗೆ ಏನೂ ಕಾಳಜಿ ಇಲ್ಲ. ಅದಕ್ಕೆ ಸುಖವಾಗಿ ರಾಣಿ ತರಹಾ ನಿದ್ದೆ ಮಾಡ್ತೀಯಾ "ಅನ್ನೋಳು" ಈಗೇನು ಮಾಡೋಣ. ನನಗೇನೂ ತೋಚ್ತಾ ಇಲ್ಲ" ಎಂದರು ಪಂಕಜಮ್ಮ.

"ನೋಡಿ ಮೇಡಮ್, ರಶ್ಮಿ ಕೆಲಸದಲ್ಲಿ ಪ್ರತಿಭಾವಂತೆ ಇರಬಹುದು. ಕೈ ತುಂಬಾ ಸಂಪಾದನೆ ಇರಬಹುದು. ಆದರೆ ಕೆಲವರಿಗೆ ಪ್ರೇಮ, ಪ್ರೀತಿ ವಾತ್ಸಲ್ಯ ಇವೆಲ್ಲಾ ಒನ್ ವೇ. ಇನ್ನೊಬ್ಬರು ತಮಗೆ ವಾತ್ಸಲ್ಯ ತೋರಿಸ್ಬೇಕು ಅಷ್ಟೇ. ತಾವು ಅದಕ್ಕೆ ಸ್ಪಂದಿಸ್ಬೇಕು ಅನ್ನೋದು ತಿಳಿಯುಲ್ಲ. ಈಗ ಈ ಫೋನ್ ಕಾಲ್ ವಿಚಾರ ಮರೆತ್ಬಿಡಿ. ರಶ್ಮಿಗೆ ನಿಮ್ಮ ಪ್ರೀತಿ ಬೇಕಾಗಿದೆ. ನೀವು ತಿಳಿದವರು. ಅವಳಿಂದ ಏನನ್ನೂ ನಿರೀಕ್ಷಿಸದೇ ನಿಮ್ಮ ಪ್ರೀತಿ ವಾತ್ಸಲ್ಯದಲ್ಲಿ ಅವಳನ್ನು ಮುಳುಗಿಸಿಬಿಡಿ."

ಅದಾದ ನಂತರ ಇವತ್ತೇ ಅವರನ್ನು ಪುನಃ ಭೇಟಿ ಮಾಡಿದ್ದು. ರಶ್ಮಿ ನಗು ನಗುತ್ತಾ ಓಡಾಡ್ತಾ ಇದ್ದದ್ದು ನೋಡಿದ್ರೆ ಎಲ್ಲಾ ಸರಿಹೋಯ್ತು ಅಂತ ಕಾಣುತ್ತೆ." ಎಂದ ಶರಲೇಖ. ■

**ಮಿಂಚಿಕೆ**

**ಪ್ರೆಶ್ನೆ – ಹುತ್ತರ**

ಹಲ್ಪ ಪ್ರಾಣ ಮ ಆ ಪ್ರಾಣ ಹೇನೆಂಬುದು

ಹರಿವಿಲ್ಲದ ಹಿವನೊಬ್ಬ ಕೋಣ.

ಸಿಸ್ಯನಾಗಿ ಹನುಗ್ರಯಿಸಿ ನೀಡಿ ಹೊಳ್ಳೆಯ ಸಿಕ್ಷಣ

ಆಗೆಯೇ ಹಾಗಲಿ, ಎದರಬೇಡ

ಹೀವೊತ್ತಿನಿಂದಲೇ ಹೋದು ಪ್ರಾರಂಭಿಸೋಣ

**–ಕೆ.ಎಸ್. ನಿಸಾರ್ ಅಹಮದ್**

# ನ್ಯಾನೋ ಕತೆಗಳು

ಎ.ವಿಜಯೇಂದ್ರ ರಾವ್

1) ಅಂದಿನ ಕಷ್ಟದ ದಿನಗಳಲ್ಲಿ ನಾನು ಹೈಸ್ಕೂಲಿನಲ್ಲಿ ಓದುವಾಗ ನಮ್ಮಪ್ಪ ನಾನು ಕೇಳಿದರೂ ಕೊಡಿಸಲಾಗದೆ ಇದ್ದ ಸೈಕಲನ್ನು, ನನ್ನ ಮಗ ಕೇಳುವುದಕ್ಕೆ ಮುಂಚೆಯೇ ಸೈಕಲ್ ಕೊಡಿಸಲು ತಯಾರಾಗುತ್ತಿದ್ದಂತೆ, ಅವನು ಬೈಕ್ ಕೊಡಿಸಪ್ಪ ಎಂದು ಕೇಳಿಯೇಬಿಟ್ಟನು....!

2) ಎ ಟಿ ಎಂ ನಲ್ಲಿ ದುಡ್ಡು ತೆಗೆಯುವುದಕ್ಕೆ ಮುಂಚೆ, ಭಾಷೆಯ ಆಯ್ಕೆ ಅದು ಕೇಳಿದಾಗ, ಇಂಗ್ಲೀಷನ್ನು ಒತ್ತಿ ಸರಸರನೆ ಅದರಿಂದ ದುಡ್ಡು ತೆಗೆದು ಎಣಿಸುತ್ತಾ ಹೊರಬಂದನು ಕನ್ನಡ ರಕ್ಷಣಾ ವೇದಿಕೆಯ ಅಧ್ಯಕ್ಷ....!

3) ಒಂದು ದಿನದಲ್ಲಿ ಐದು ಡ್ರೆಸ್ ಬದಲಾಯಿಸಲು ಅವರು ಶ್ರೀಮಂತರಾಗಿರಬೇಕು ಅಂತೇನಿಲ್ಲ.ಅವರ ಮನೇಲಿ ಪುಟ್ಟ ಮಕ್ಕಳು ಇದ್ದರೂ ಸಾಕು. ಬದಲಾಯಿಸಿ ಆನಂದಪಡಲು...!

4) ನಾನು ಸುಮಾರು ಸರ್ತಿ ನೋಡಿದ್ದೀನಿ, ಅದ್ಯಾಕೊ ಮದುವೆ, ಇನ್ನಿತರ ಸಮಾರಂಭದಲ್ಲಿ ನನ್ನ ಪಕ್ಕದಲ್ಲಿ ಊಟಕ್ಕೆ ಕೂತವನಿಗೆ ಸಿಹಿ ಪೊಂಗಲ್ ನಲ್ಲಿ, ಪಾಯಸದಲ್ಲಿ ಯಥೇಚ್ಛವಾಗಿ ದ್ರಾಕ್ಷಿ, ಗೋಡಂಬಿ ಬಿದ್ದಿರುತ್ತೆ, ಅದೇ ಪಲಾವ್, ಬಿಸಿ ಬೇಳೆ ಬಾತ್ ಬಡಿಸುವಾಗ ನನ್ನ ಎಲೆಯಲ್ಲಿ ಪಕ್ಕಕ್ಕೆ ತೆಗೆದಿಡುವ ಪಲಾವ್ ಎಲೆ, ಚಕ್ಕೆ, ಕರಿಬೇವು, ಒಣ ಮೆಣಸಿನಕಾಯಿಗಳು ಧಾರಾಳವಾಗಿ ಬಿದ್ದಿರುತ್ತೆ....!

5) "ಇರಲಿಲ್ಲ" ಎನ್ನುವುದಕ್ಕಿಂತ "ಇತ್ತು.. ಈಗಿಲ್ಲ" ಎನ್ನುವುದರ ನೋವು ಜಾಸ್ತಿ...!

6. ಯಮ ಧರ್ಮಿಣಿಯ ದುಸ್ಸಾಹಸ"




ಚೈತನ್ಯ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್ ಇಡೀ ನಗರದಲ್ಲೇ ಹೆಸರುವಾಸಿಯಾಗಿತ್ತು. ಎಲ್ಲಾ ಪ್ರತಿಷ್ಠಿತರು ಇಲ್ಲಿ ಚಿಕಿತ್ಸೆಗೆ ಬರುವುದನ್ನೇ ಪ್ರತಿಷ್ಠೆ ಅಂದುಕೊಂಡಿದ್ದರು. ದೇಶ ವಿದೇಶಗಳಿಂದ ವೈದ್ಯಕೀಯ ನಿಪುಣರು ಬಂದು ಹೋಗಿ ಮಾಡುತ್ತಿದ್ದರು.ಇಂಥಾ ವೈಶಿಷ್ಟಗಳಿದ್ದ ಆಸ್ಪತ್ರೆಗೆ ಇತ್ತೀಚೆಗೆ ಒಂದು ನಿಗೂಢವಾದ ಸವಾಲು ಎದುರಾಗಿತ್ತು. ಏನೆಂದರೆ......ಪ್ರತಿ ಭಾನುವಾರ ಬೆಳಿಗ್ಗೆ ಹನ್ನೊಂದು ಗಂಟೆಯ ನಂತರ ಐದು ನಿಮಿಷಕ್ಕೆ ಐ.ಸಿ.ಯು.ವಿನ ಬೆಡ್ ನಂಬರ್ 13 ರ ಪೇಷಂಟ್, ಆಪರೇಷನ್ ನಂತರ ಚೇತರಿಸಿಕೊಂಡು ಇನ್ನೆರಡು ದಿನಗಳಲ್ಲಿ ವಾರ್ಡಗೆ ಹಾಕುವ ಸ್ಥಿತಿಯಲ್ಲಿರುತ್ತಿದ್ದವನು ದಿಢೀರನೆ ಮರಣ ಹೊಂದುತ್ತಿದ್ದನು. ಪೋಸ್ಟ್ ಮಾರ್ಟಮ್ ನಲ್ಲೂ ನಿರ್ದಿಷ್ಟ ಕಾರಣ ದೊರಕದೆ, ಇದು ಒಂದು ಬಿಡಿಸಲಾಗದ ಕಗ್ಗಂಟಾಗಿತ್ತು. ಹೀಗೆ ಸುಮಾರು ಐದು ವಾರಗಳು ಹನ್ನೊಂದು ಗಂಟೆ ಐದು ನಿಮಿಷಕ್ಕೆ ಸರಿಯಾಗಿ ಚೇತರಿಕೊಳ್ಳುತ್ತಿದ್ದವನು ಯಮಲೋಕ ಸೇರುತ್ತಿದ್ದದ್ದು ಆ ಆಸ್ಪತ್ರೆಯ ಘನತೆಗೆ ಕುಂದು ತರುವಂತದ್ದಾಗಿತ್ತು. ದೇಶ, ವಿದೇಶಗಳ ನುರಿತ ಡಾಕ್ಟರ್‌ಗಳಿಗೆ ರಿಪೋರ್ಟ್ ಕಳಿಸಿದಾಗ,

ಎಲ್ಲರ ಅಭಿಪ್ರಾಯವು ಯಾವುದೇ ನಿರ್ದಿಷ್ಟ ಕಾರಣ ಗೊತ್ತಾಗುತ್ತಿಲ್ಲ ಎನ್ನುವುದೇ ಆಗಿತ್ತು. ಹೀಗಿರುವಾಗ, ಅಲ್ಲಿಯ ಹಿರಿಯ ವೈದ್ಯರುಗಳೆಲ್ಲಾ ಸೇರಿ, ಬರುವ ಭಾನುವಾರ ಈ ರಹಸ್ಯವನ್ನು ಹೇಗಾದರೂ ಕಂಡು ಹಿಡಿಯಲೇ ಬೇಕೆಂದು ಪಣತೊಟ್ಟರು.

ಭಾನುವಾರ ಸರಿಯಾಗಿ ಹತ್ತು ಗಂಟೆ ಐವತ್ತು ನಿಮಿಷಕ್ಕೆ ಆ ಎಲ್ಲಾ ಹಿರಿಯ ವೈದ್ಯರುಗಳು ಐ.ಸಿ.ಯು ವಿನ ಬೆಡ್ ನಂಬರ್ 13 ನಲ್ಲಿ, ಒಬ್ಬ ಡಮ್ಮಿಪೇಷಂಟನ್ನು ಮಲಗಿಸಿ, ಅದರ ಸುತ್ತಮುತ್ತಲೂ ಮರೆಯಲ್ಲಿ ನಿಂತು ಏನಾಗುವುದು ನೋಡೇಬಿಡೋಣವೆಂದು ಕುತೂಹಲದಿಂದ ಕಾಯುತ್ತಿದ್ದರು.ಸರಿಯಾಗಿ ಹನ್ನೊಂದು ಗಂಟೆಗೆ, ಭಾನುವಾರ ಮಾತ್ರ ಐ.ಸಿ.ಯು ಹಾಲ್ ನ್ನು ಕಸಗುಡಿಸಿ, ಒರೆಸುವ ಜವಾಬ್ದಾರಿ ಇದ್ದ ಮುನಿಯಮ್ಮ ಬಂದ ತಕ್ಷಣವೇ ಬೆಡ್ ನಂಬರ್ 13 ರ ಪಕ್ಕದಲ್ಲಿದ್ದ ಆಕ್ಸಿಜನ್ ಸಪ್ಲೈ ಮಾಡುವ ಪ್ಲಗ್ಗನ್ನು ಅದರ ಸಾಕೆಟ್ಟಿನಿಂದ ತೆಗೆದು, ತನ್ನ ಮೊಬೈಲ್ ನ್ನು ಚಾರ್ಜಿಂಗ್ ಗೆ ಹಾಕಿ, ತನ್ನ ಗುಡಿಸುವ, ಒರೆಸುವ ಕಾರ್ಯವನ್ನು ನಿಯತ್ತಾಗಿ ಮಾಡಲು ಶುರು ಮಾಡಿದಳು....! ರಹಸ್ಯ ಬಯಲಾಗಿದ್ದಕ್ಕೆ ಸಂತಸ ಪಟ್ಟು, ಮುನಿಯಮ್ಮನನ್ನು ಕರೆದು ಬುದ್ದಿವಾದ ಹೇಳಿ, ಎಲ್ಲಾ ಹಿರಿಯ ವೈದ್ಯರು ಸಂತಸದಿಂದ ನಿಟ್ಟುಸಿರು ಬಿಟ್ಟರು....!

## ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




" ನಾನು ಹೇಳಿದ ಹಾಗೆ ಕಿಟಕಿಗಳನ್ನೆಲ್ಲಾ ತೆರೆದಿಟ್ಟು ಮಲಗಿಕೊಂಡೆಯಾ ನೆನ್ನೆ ರಾತ್ರಿ?"

" ಹೂಂ"

" ಹಾಗಾದರೆ ಈಗ ತಲೆನೋವು ಮಾಯವಾಗಿರಬೇಕಲ್ಲಾ"

" ಆಗಿದೆ ಸಾರ್. ತಲೆಯನೋವಿನ ಜೊತೆಗೆ ನನ್ನ ಕನ್ನಡಕ, ಗಡಿಯಾರ, ಪರ್ಸು ಎಲ್ಲಾ ಮಾಯವಾಗಿದೆ."

# ಉದರ ನಿಮಿತ್ತಂ ಬಗೆ ಬಗೆ ರುಚಿಯುಂ

**ಕೆ.ಎಸ್.ಸೋಮೇಶ್ವರ**

ಅದೊಂದು ಕಾಲ, ಬೆಂಗಳೂರಿನಲ್ಲಿ ಉಪಾಹಾರ ಕೇಂದ್ರಗಳೆಂದರೆ ಈಗಿನಂತೆ ರಸ್ತೆಗೆ ಮೂರು ಇರುತ್ತಿರಲಿಲ್ಲ. ಒಂದು ವಿಷ್ಣು ಭವನ, ಒಂದು ಉಡುಪಿ ಕೃಷ್ಣ ಭವನ, ಮಲಬಾರ್ ಲಾಡ್ಜ್ (ಇದು ಈಗ ಮುಚ್ಚಿದ ಬಾಗಿಲು) ಅಲ್ಲಲ್ಲಿ ಕಾಮತ ಗಳು, ಬಿಟ್ಟರೆ ಎಂ.ಟಿ.ಆರ್. ಆಗಾಗ್ಗೆ ರುಚಿಯಾದ ಚಹಾ ಕುಡಿಯಲು ಗೌಸಿಯಾ ಹೊಟೆಲ್, ಎನ್.ಎಮ್.ಹೆಚ್ ಹಾಗೇ ಗಾಂಧಿಬಜಾರಿನ ವಿದ್ಯಾರ್ಥಿ ಭವನ, ಸರ್ಕಲ್ ಲಂಚ್ ಹೋಂ, ಗೀತಾ ರೆಸ್ಟೊರೆಂಟ್, ದ್ವಾರಕ . ಇನ್ನು ಸ್ವಲ್ಪ ಮುಂದೆ ಜಯನಗರಕ್ಕೆ ಬನ್ನಿ ಅಂಬಾ ಭವಾನಿಯ ಖಾಲಿ ದೋಸೆ, ಕಲ್ಪನ ಹೋಟೆಲ್, ದೋಸೆ ಕ್ಯಾಂಪ್. ಮ;ಲ್ಲೇಶ್ವರದ ಕೃಷ್ಣ ಭವನ ರೆಸ್ಟೊರೆಂಟ್ (ಇವರೂ ಸಹ ಕಳೆದ ಡಿಸೆಂಬರ್ ನಿಂದ ಟಾಟಾ ಮಾಡಿದ್ದಾರೆ), ಜನತಾ ಹೋಟೆಲ್ ಇದೇ ರೀತಿ ಹಳೆಯ ಬಡಾವಣೆಗಳಾದ ಉಲಸೂರು ಶಿವಾಜಿನಗರಗಳಲ್ಲಿ ಸಹ ನಮ್ಮನ್ನು ತಾನೇ ತಾನಾಗಿ ಬರಮಾಡಿಕೊಳ್ಳುತ್ತಿದ್ದವು.. ಇವೆಲ್ಲಕ್ಕೂ ಮೇಲಿನ ಗಟ್ಟಿ ಮೊಸರಿನಂತೆ ಇರುವ ಸಿಟಿ ಮಾರ್ಕೆಟ್ ಹತ್ತಿರದ ರಾಘವೇಂದ್ರ ಪ್ರಸನ್ನ. ಇಲ್ಲಿ ಇಡ್ಲಿ, ನೀರು ಚಟ್ನಿಯ ರುಚಿ ಹಿಂದೆ ಸಿಕ್ಕಿಲ್ಲ ಮುಂದೆ ಸಿಗಲ್ಲ.

ಆಗೆಲ್ಲ ಸ್ಟ್ರೀಟ್ ಫುಡ್ ಕಲ್ಪನೆ ನಿಯಮಿತವಾಗಿತ್ತು. ಮಧ್ಯಾಹ್ನದ ವೇಳೆಯಲ್ಲಿ ವಿಧಾನ ಸೌಧದ ಮುಂದಿನ ಕಬ್ಬನ್ ಉದ್ಯಾನದಲ್ಲಿ ಬಗೆ ಬಗೆಯ ಸವಿರುಚಿಯನ್ನು ಹೊತ್ತ ಕೈಗಾಡಿಗಳು ರಾರಾಜಿಸುತ್ತಿದ್ದವು. ಇವುಗಳ ಮುಖ್ಯ ಉದ್ದೇಶ ಅಲ್ಲಿ ನಮ್ಮ ಸರಕಾರಿ ನೌಕರರ ಹಸಿವು ಇಂಗಿಸುವ ಕರ್ಮಪಾಲನೆ ಮಾಡುತ್ತಿದ್ದವು. ಅವರ ಉದರಭರಣವಾದರೆ ತಾನೇ ದೇವರ ಕೆಲಸ ಸಾಗುವುದು (ಸರಕಾರಿ ಕೆಲಸ ದೇವರ ಕೆಲಸ ಎಂಬ ಫಲಕ ಕಂಡು ಇದನ್ನು ನಾನು ಹೇಳಬೇಕಾಗಿದೆ.). ಇನ್ನು ಎಂಜಿ ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿರುವ ತಿಂಡಿ ಮನೆಗಳೆಲ್ಲ ಹೈ ಟೆಕ್. ಇಲ್ಲಿ ಹಣವೇ ರಸನ ತೃಪ್ತಿಗೆ ಮೂಲವಾಗಿತ್ತು (ಕೋಶಿಸ್, ಸ್ಪೆನ್ಸರ್ಸ್ ಇತ್ಯಾದಿ)

ಇನ್ನು ಕೆಲವೆಡೆ ಸಂಜೆ ಸುಮಾರಿಗೆ ಈಗಿನ ಚಾಟ್‌ಗಳ ಮೂಲ ಸ್ವರೂಪ ಅಲ್ಲಲ್ಲಿ ಕಾಣ ಬಹುದಿತ್ತು. ನಾ ಕಂಡಂತೆ ನ್ಯಾಷನಲ್ ಹೈಸ್ಕೂಲಿನ ಮುಂಭಾದಗಲ್ಲಿ ಒಬ್ಬ ಕಾಕಾನ ಕೈ ಗಾಡಿ ಅವಲಕ್ಕಿ ಪುರಿ, ಟೊಮ್ಯಾಟೊ, ಈರುಳ್ಳಿ ಮಿಶ್ರಿತ ಹದವಾದ ತಿನಿಸು ಮತ್ತದರ ವಿವಿಧ ಸ್ವರೂಪಗಳು ತಮ್ಮ ಘಮದಲ್ಲೇ ಸೆಳೆಯುತ್ತಿದ್ದವು. ಅದೇ ರೀತಿ ವಿಶ್ವೇಶ್ವರ ಪುರದ ಬೀದಿ ತಿನಿಸುಗಳು. ಇವೆಲ್ಲಕ್ಕೂ ಮುಕುಟಪ್ರಾಯವಾಗಿದ್ದವು ಸಂಜೆ ಎಂಟರ ನಂತರ ಕೆಂಪೇಗೌಡ ರಸ್ತೆಯ ಆರಂಭದಲ್ಲೇ ಎಂದರೆ, ಅಂದಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಟ್ಟಡದ ಮುಂಭಾಗದಲ್ಲಿ. ಕಾಣುತ್ತಿದ್ದ ತಿಂಡಿ ಗಾಡಿಗಳು ಅಲ್ಲೇ ರೆಡಿ ಮೇಡ್ ಆಗಿರುತ್ತಿದ್ದ ಇಡ್ಲಿ ವಡೆ, ಬೋಂಡ, ಚಿತ್ರಾನ್ನ ಇತ್ಯಾದಿ. ಇದು ಸುಮಾರು ಮಧ್ಯ ರಾತ್ರಿಯವರೆಗೂ ಇರುತ್ತಿದ್ದು ನಗರಕ್ಕೆ ಬಂದು ಹೋಗುವ ಊರಿಂದ ಓಡಿ ಬಂದ ಸತ್ಯಾನೋ ಇಲ್ಲ ಮೈಲಾಪುರದ ಮೈಲಾರಿಯೋ ಅಂಥಹವರಿಗಾಗಿಯೇ ಹೇಳಿ ಮಾಡಿಸಿದ್ದಂತೆ ಇದ್ದವು. ನಮ್ಮವರೂ ಅಗಾಗ್ಗೆ ಅಲ್ಲಿ ಕಾಲಾಡಿಸಿ ಬಾಯಾಡಿಸಿ ಬರುತ್ತಿದ್ದುದೂ ಇತ್ತು. ಇರಲೇ ಬೇಕಲ್ಲವೇ. ಇಂತಹವುಗಳು ನಮ್ಮ ನಗರ ರೈಲು ನಿಲ್ದಾಣ, ದಂಡು ರೈಲು ನಿಲ್ದಾಣ ದ ಹೊರಗೆ ವಿಶೇಷವಾಗಿ ಕಾಣಬಹುದು. ಇಂತಹ ಗಾಡಿ ತಿನಿಸುಗಳನ್ನು ಮೈಸೂರಿನ ದೊಡ್ಡ ಗಡಿಯಾರದ ಬಳಿಯೂ ದಶಕಗಳ ಹಿಂದೆಯೇ ಕಂಡಿದ್ದೇನೆ.

ಇನ್ನು ಸರಿ ಸುಮಾರು 2000 ನೇ ಇಸವಿಯಿಂದ ಈ ಸ್ಟ್ರೀಟ್ ಫುಡ್ ಗಾಡಿಗಳ




ನಾಗಾಲೋಟ ಎಲ್ಲೆಲ್ಲೂ ನಾನೇ ಎನ್ನುವಂತಾಗಿದೆ. ಮೊದ ಮೊದಲು ಕಂಡದ್ದು ಜೆ.ಪಿ ನಗರದ ಮಿನಿ ಫಾರೆಸ್ಟ್ ಬದಿಯ ರಸ್ತೆ. ಇಲ್ಲಿಯ ತಿಂಡಿಯ ಘಮಲು ಇಡೀ ಫಾರೆಸ್ಟ್ ಅನ್ನೇ ಅರೆಸ್ಟ್ ಮಾಡಿ ಬಿಟ್ಟಿದೆ. ಈಗಂತೂ ಅದರ ಸುತ್ತಲೂ ಇರುವ ಹಲವು ಉದ್ಯೋಗ ಕೇಂದ್ರಗಳ ಯುವಕ ಯುವತಿಯರಿಗೆ ಇವುಗಳು ನೆಚ್ಚಿನ ತಾಣಗಳಾಗಿವೆ. ಇಂತಹವು ಒಂದಲ್ಲ ಎರಡಲ್ಲ ನೂರಾರು ನಗರದೆಲ್ಲೆಡೆ ಬೀಡು ಬಿಟ್ಟಿವೆ. ಅದಕ್ಕೆ ಚಾಟ್ ತಿನಿಸುಗಳೆಂಬ ಅನ್ವರ್ಥನಾಮದ ಅಲಂಕಾರ ಬೇರೆ. ಇದನ್ನು ನೋಡಿ ಮೂಗೆಳೆಯುವವರು ಜಂಕ್ ಫುಡ್ ಅಂತ ಮೂಗು ಮುರಿಯುತ್ತಾರೆ. ಅದು ಹೆಸರಿಗೆ ಮಾತ್ರ. ಅದೇನೇ ಇರಲಿ ಯುವ ಜನಾಂಗದ ಅಚ್ಚು ಮೆಚ್ಚು ಅನ್ನುವುದಂತೂ ಸೂರ್ಯ ಚಂದ್ರರಷ್ಟೇ ಸತ್ಯ. ಅದೊಂದು ತರಹ ಚಪಲ ಚನ್ನಿಗರಾಯ ಮಾಡಿಬಿಡುತ್ತದೆ. ಅದನ್ನು ಜೀರ್ಣಿಸಲು ಬಗೆ ಬಗೆಯ ಆಸನಗಳ ಕೈ ಕಾಲು ಎತ್ತುವಿಕೆ ನಡೆಯುತ್ತದೆ. ಅದಕ್ಕೆ ಗೌರವವಾಗಿ ಯೋಗ ಮುದ್ರೆ ಕೊಟ್ಟಿದ್ದೇವೆ.

ಈ ಸ್ಟ್ರೀಟ್ ಫುಡ್ ಎಂಬುವ ಫಲಾಹಾರ ಮಂದಿರಗಳಾಗಲಿ, ರಸ್ತೆ ಬದಿಯವಾಗಲಿ ಅದಕ್ಕೆ ಸಮಯದ ಮಿತಿ ಇಲ್ಲ. ಬೆಳೆದಿದೆ ನೋಡಾ ಬೆಂಗಳೂರು ನಗರ ಎನ್ನುವಂತೆ ಅವೂ ಸಮಯದ ಪರಿವೆಯೇ ಇಲ್ಲದೇ ಕೆಲಸ ಮಾಡುತ್ತವೆ. ಕೆಲ ಹೋಟೆಲ್‌ಗಳಲ್ಲಿ ಅಲ್ಲಿಯೇ ಹೋಗಿ ತಿನ್ನುವ ದರ್ದು ಇಲ್ಲ. ಅಂದರೆ, ಅವರಾರೊ ಜೊಮ್ಯಾಟೊ, ಡೆಂಜೊ ಮತ್ತಿತರರು ಹೊತ್ತಿನ ಪರಿವೆಯೇ ಇಲ್ಲದೇ ತಿನ್ನುಗರ ಬಳಿಗೇ ಹೊತ್ತೊಯ್ದು ಕೊಡುತ್ತವೆ. ಕೆಲವು ರೆಸ್ಟೋರೆಂಟ್ ಗಳಲ್ಲಿ ಸ್ಟ್ರೀಟ್ ಫುಡ್ ಕೆಫೆ ಅಂತ ಫಲಕವಿರತ್ತೆ. ಬೀದಿ ಬದಿ ತಿಂಡಿ ತಿನ್ನಲು ಇಲ್ಲಿ ಒಳ ಹೊಕ್ಕು ಏಕೆ ಜೇಬು ಖಾಲಿ ಮಾಡಿ ಕೊಳ್ಳಬೇಕು ಎಂಬುದು ಕೆಲ ಚಪಲ ಪ್ರಿಯರ ನಾಲಿಗೆ ಯ ನುಡಿ. ಕೆಲ ಹೋಟೆಲ್ ಗಳಲ್ಲಿ ಮನೆ ಊಟ ದೊರೆಯುತ್ತದೆ ಅಂತ ಫಲಕವಿರತ್ತೆ, ಅದನ್ನು ಓದಿದ ಕೆಲವರು ಮನೆಯೂಟ ತಿನ್ನಲು ಇಲ್ಲಿಗ್ಯಾಕೆ ಬರಬೇಕು ಅಂತಾರಂತೆ. ಇನ್ನು ಅನೇಕ ಹೋಟೆಲ್ ಗಳಲ್ಲಿ ಬೀದಿಯೇ ಗ್ರಾಹಕರಿಗೆ ಈಟಿಂಗ್ ಸ್ಪಾಟ್, ಇದಕ್ಕೆ ದರ್ಶಿನಿ ಸಮೂಹಗಳೇ ಅತ್ಯುತ್ತಮ ಉದಾಹರಣೆ. ಒಳಗೆ ಒಂದೆರಡು ಸ್ಟಾಂಡಿಂಗ್ ಮೇಜುಗಳಿದ್ದರೆ ಬಹುಪಾಲು ಫುಟ್ ಪಾತೇ ಗತಿ. ಇದನ್ನ ನೋಡಿದಾಗ ಫುಟ್ ಪಾತ್ ಗ್ರಾಹಕ ಮಂಡಲಿ ಮಾಡಬಹುದೆನಿಸುತ್ತದೆ. ಅದು ನಿಖರವಾಗಿ ಇಲ್ಲದಿದ್ದರೂ ಒಂದು ರೀತಿಯಲ್ಲಿ ತಂತಾನೇ ಹುಟ್ಟಿಕೊಂಡಿದೆ. ಏಕೆಂದರೆ, ಅಲ್ಲಿ ಬರುವ ಗ್ರಾಹಕರಾರೂ ಎಲ್ಲಿ ತಿನ್ನುತ್ತೇವೆ ಎಂಬ ಬಗ್ಗೆ ಎಲ್ಲೂ ಗೊಣಗಿದ ವಾರ್ತೆ ಕೇಳಿಲ್ಲ. ಇಲ್ಲೆಲ್ಲ ಸಪ್ಪೈ ಮಾಡುವಿಕೆ ಮಾತ್ರ ಛಾವಡಿಯ ಕೆಳಗೆ ಇರುತ್ತದೆ. ಉಳಿದದ್ದೆಲ್ಲಾ ಫುಟ್ ಪಾತ್ ಗಳೇ ಐದು / ಏಳು ನಕ್ಷತ್ರದ ಗ್ರಾಹಕ ಸೇವೆ. ನಮ್ಮಲ್ಲಿ ಆಗಾಗ್ಗೆ ಬೀದಿ ಬದಿ ವ್ಯಾಪಾರಿಗಳ ಮೇಲೆ ಧಾಳಿ ನಡೆಸಿ ಎತ್ತಂಗಡಿ ಮಾಡಿಸುವುದು ಸಂಬಂಧಿಸಿದ ಸರಕಾರಿ ಸಂಸ್ಥೆಗಳ ಆಗಾಗಿನ ಉದ್ಯೋಗ. ಆದರೆ, ಎಲ್ಲೂ ಬೀದಿ ಬದಿ ತಿನ್ನುಗರ ಎತ್ತಂಗಡಿ ಮಾಡಿದ ಸಂಗತಿ ವರದಿಯಾಗಿಲ್ಲ. ನಮ್ಮ ಜಯನಗರದ ದೋಸೆ ಕ್ಯಾಂಪ್ ಈಗ ಹೊಸ ಅಲಂಕಾರದಲ್ಲಿ ಬೀದಿ ಬದಿ ವ್ಯಾಪಾರಿಯಾಗಿದೆ. ಆಗೊಂದು ಕಾಲದಲ್ಲಿ ನನ್ನಿಬ್ಬರು ಜೊತೆಗಾರರ ಮಾತು ಹೀಗಿತ್ತು. ಒಬ್ಬರು ಇಲ್ಲಿ ದೋಸೆ ಬಹಳ ರುಚಿಯಾಗಿರುತ್ತದೆ ಎಂದರೆ, ಇನ್ನೊಬ್ಬರು ಹೌದೌದು ಅಲ್ಲಿ ಅದರ ಮೇಲೆ ಬೀಳುವ ಧೂಳು ನಿನಗೆ ಅದರ

ರುಚಿ ಚಪ್ಪರಿಸುವಂತೆ ಮಾಡುತ್ತದೆ ಎಂದರು.

ಈ ತಿಂಡಿಪೋತ ಕೇಂದ್ರಗಳು ಬೆಳಗಿನ ಝಾವದಲ್ಲೂ ಹದವಾಗಿ ಹೊಗೆಯಾಡುತ್ತಿರುತ್ತದೆ. ಸಮಯ ಬೆಳಗಿನ ಸುಮಾರು ಮೂರು ಅಥವಾ ನಾಲ್ಕು ಘಂಟೆ. ನಮ್ಮ ಅನೇಕ ಪರಿಚಯದ ಮನೆಗಳಲ್ಲಿನ ನವ ತರುಣ ತರುಣಿಯರು ಆ ಸಮಯದಲ್ಲಿ ಅಲ್ಲಿಗೇ ಹೋಗಿ, ಕಾದು ಬಿಸಿ ಬಿಸಿ ಇಡ್ಲಿ, ವಡೆ ಅಥವ ಮತ್ತೊಂದೋ ಕತ್ತರಿಸಿ ಗವ್ ಎಂದು ತೇಗಿ ಮನಗೆ ಬಂದು ಪವಡಿಸು ಪರಮಾತ್ಮ ಆಗುತ್ತಾರೆ. ಈ ತರಹೆ ಗ್ರಾಹಕ ಕೇಂದ್ರ ಅನೇಕ ರಿಂಗ್ ರೋಡುಗಳಲ್ಲಿ ಪ್ರಶಸ್ತವಾಗಿರುತ್ತದೆ. ಈ ರೀತಿ ಕಾಯುವಿಕೆ ಮೊದಲೆಲ್ಲ ಎಂ.ಟಿ.ಆರ್ ಅಂತಹ ಕೇಂದ್ರಗಳಲ್ಲಿ ಕಾಣುತ್ತಿದ್ದೆವು. ಈಗ ಅದೇ ವಾಡಿಕೆ ಎಂಬಂತಾಗಿದೆ. ಜೆ.ಪಿ ನಗರ ಎರಡನೇ ಹಂತದ ರಿಂಗ್ ರಸ್ತೆಯಲ್ಲಿ ರಾಮೇಶ್ವರ ಕೆಫೆ ಅಂತಿದೆ. ಇಲ್ಲಿ ನೀವು ಕಂಡಾಗಲೆಲ್ಲಾ ಜನ ಜಾತ್ರೆಯೇ ಸರಿ. ಬೆಳಿಗ್ಗೆ ಎಂಟಾದರೂ ಸರಿಯೇ ರಾತ್ರಿ ಒಂಭತ್ತಾದರೂ ಸರಿಯೆ ಅದೇ ಫುಟ್ ಪಾತ್ ಕಲರವ. ಪಾಪ ಆ ರಾಮ ಮತ್ತು ಈಶ್ವರರು ದೂರದ ಬಂಗಾಳ ಕೊಲ್ಲಿಯಲ್ಲಿನ ಸಮುದ್ರ ತಟದಲ್ಲಿ ಕುಳಿತು ಜಂಟಿವರಸೆಯ ಜುಗಲಬಂದಿ ಮಾಡುತ್ತಿದ್ದರೆ ಈ ರಾಮೇಶ್ವರ ಕುಬೇರನ ಗಲ್ಲಾ ಪೆಟ್ಟಿಗೆಯ ಅಧಿಪತಿಯಾಗುತ್ತಿದ್ದಾನೆ. ಇಲ್ಲಿಯೂ ಅಷ್ಟೆ ಹೆಸರು ಉದಾಹರಣೆಗೆ ಮಾತ್ರ. ಎಲ್ಲಿಯೂ ಗ್ರಾಹಕರಿಲ್ಲದೇ ಕೈ ಕಟ್ಟಿ ಕುಳಿತಿರುವ ಸೇವಾ ಕರ್ತರ ದೃಶ್ಯ ಕಂಡಿಲ್ಲ ಇದೇ ನೋಡಿ ಬೀದಿ ಬದಿ ತಿಂಡಿಯ ಮಹತ್ವ.

ಇಷ್ಟೆಲ್ಲ ಹೇಳಿದ ಮೇಲೆ ಇಂದಿನ ಮಾಲ್‌ಗಳ ಮಾಲಾ ಮಾಲ್ ಬಗ್ಗೆ ಹೇಳಲೇ ಬೇಕಲ್ಲವೇ. ಇದೊಂದು ರೀತಿ ಮಲ್ಟಿ ಕ್ಯೂಸಿನ್ ಉದರ ಭರಣ. ತಿನ್ನಲು ಒಂದು ದೊಡ್ಡ ಹಜಾರ. ಸುತ್ತಲೂ ರಸನದ ಚಪಲ ಚೆನ್ನಿಗರಿಗಾಗಿಯೇ ಇರುವ ತರಹೆ ವಾರಿ ತಿಂಡಿ ಮನೆಗಳು. ಇಲ್ಲಿ ಅಖಂಡ ಭಾರತದ ಎಲ್ಲ ಮೂಲೆಯ ರುಚಿಗಳೇ ಅಲ್ಲದೇ ಚೈನೀಸ್, ಮಂಗೋಲಿಯನ್, ಕೆಂಚುಕಿ. ಇಲ್ಲಿ ಬಂದರೆ ಮೊದಲು ಮೆನು ಕಾರ್ಡ್ ಉರು ಹೊಡೆಯಬೇಕು. ಇನ್ನು ಕೆಲವು ತಿಂಡಿ ಮನೆಗಳ ಹೆಸರೇ ನಿಮಗೆ ಒಳಗೇನಿದೆ ಎಂಬ ಕುತೂಹಲ ತರಿಸುತ್ತದೆ. ಒಂದೆಡೆ **'ಪೈಲ್ವಾನ್ ಪಲಾವ್'** ಆದರೆ ಇನ್ನೊಂದೆಡೆ **'ಪಿಂಡ ಬಲೂಚಿ'** ಅದ್ಯಾವ ಪೈಲ್ವಾನರಿಗಾಗಿಯೋ, ಅದಾರ ಪಿಂಡವೋ ಅಲ್ಲಿನ ನಳ ಮಹರಾಜರನ್ನೇ ಸಂದರ್ಶಿಸಬೇಕು. ಇನ್ನು ತಿಂಡಿ ಊಟ ಎಂದಾಕ್ಷಣ ನಳಪಾಕ ಎನ್ನುತ್ತಾರೆ. ಪಾಪ ಭೀಮ (ವಲಲ) ನಿಗೆ ಪಾಕವೇ ಇಲ್ಲದೇ ಗಟ್ಟಿ ಕಲಗಚ್ಚಾಗಿದೆ. ಅದೇ ರೀತಿ ದ್ರೌಪದಿಯ 'ಅಕ್ಷಯ ಪಾತ್ರೆ' ಎಲ್ಲೂ ಕಾಣ ಸಿಗುವುದಿಲ್ಲ. ಬಹುಶಃ ಆ ಕೃಷ್ಣ ಪರಮಾತ್ಮ ಅದು ನಾನ್–ರಿಟರ್ನಬಲ್ ಅಲ್ಲ ಅಂತ ಆಕೆಗೆ ಹೇಳಿ ಕೊಟ್ಟಿದ್ದನೇನೋ. ಹಾಗಾಗಿ ಅವರ ವನವಾಸ, ಅಜ್ಞಾತವಾಸ ಎಲ್ಲ ಸಕ್ಸಸ್ ಫುಲ್ ಆಗಿ ಮುಗಿಸಿದ ನಂತರ ಅವನಿಗೇ ರಿಟರ್ನ್ ವಿತ್ ಥ್ಯಾಂಕ್ಸ್ ಅಂತ ಹೇಳಿ ವಾಪಸ್ ಕೊಟ್ಟು ಬಂದಳೇನೋ. ಏಕೆಂದರೆ, ಮುಂದೆ ಅವಳು ಮಹಾರಾಣಿ ಆದಾಗ ಕಿಚನ್ ಮ್ಯಾನೇಜ್ ಮೆಂಟ್ ಬೇರೆಯವರ ಕೈ ರುಚಿಯಲ್ಲಿರುತ್ತದೆ. ಇಲ್ಲೊಂದು **'ಕುಣಿಗಲ್ ಕೆಫೆ'** ಅಂತ ಇದೆ. ಇಲ್ಲಿ ಕುದುರೆಯೇ ಖುರಪುಟ ಸದ್ದು ಮಾಡುತ ನಿಮಗೆ ಕೆಟಲ್ ನಲ್ಲಿನ ಕಾಫಿ ವಿತರಿಸ ಹೋಗಬಹುದೇನೋ. ಹೀಗೆಯೇ ವರಾಹ, ನೈವೇದ್ಯಂ ಹೆಸರಿನ ತರಹೆವಾರಿ ತಿಂಡಿ ಮನೆಗಳು ನಮ್ಮನ್ನು ಸವಿ ಸವಿ ರುಚಿಯಿಂದ ಸೆಳೆಯುತ್ತವೆ. ಇವೆಲ್ಲ ಇರಲಿ ನಮ್ಮಲ್ಲಿ ಹೋಟೆಲ್ ಎಂದರೆ ಇಬ್ಬರ ಹೆಸರುಗಳು ಮಾತ್ರ ಸರ್ವೇ ಜನ ಸುಖಿನೋಭವಂತು ಎಂಬಂತೆ. ಶ್ರೀ ಕೃಷ್ಣನ ವಿವಿಧ ನಾಮಾವಳಿ ಮತ್ತು ರಾಘವೇಂದ್ರರು ಬಗೆ ಬಗೆಯ ನಾಮಗಳಲ್ಲಿ ನಮಗಳ ಬಾಯಲ್ಲಿ ಇದ್ದೇ ಇರುತ್ತಾರೆ.

ಇರಲೇ ಬೇಕಲ್ಲವೇ ನಮಗೆಲ್ಲ ಜಗನ್ನಿಯಾಮಕರು ಅವರೇ ಅಲ್ಲವೇ.!! ■

# ಕ್ರಾಂತಿಯ ಕ್ರಿಕೆಟ್ ಕ್ರಶ್..."ಅಡಿಗೆಮನೆಯಿಂದ ಅರ್ಜುನ ಪ್ರಶಸ್ತಿವರೆಗೆ"

ಸುಮನಾ

"..ಓ..ಬನ್ನಿ ..ಬನ್ನಿ..ಬಹಳ ದಿನಗಳಾಯ್ತು..ನಮ್ಮನೆಗೆ ಬಂದು ಅಂತ ಅನಸೂಯ ಅತಿಥಿಗಳನ್ನು ಒಳಗೆ ಕರೆದರು.

ಏನು ಮಾಡೋದು, ಯಾವಾಗ ನೋಡಿದ್ರೂ ಎಲ್ಲರ ಕೈಲೂ ಮೊಬೈಲು, ಪಾಪ ಮೊಬೈಲ್ ಎಲ್ಲಿ ಬೇಜಾರು ಮಾಡಿಕೊಂಡು ಅಳುತ್ತೋ ಅಂತ ಅದನ್ನು ಎತ್ಕೊಂಡು ಅದ್ರ ಜೊತೆಗೇ ಕಾಲ ಕಳೀತಾರೆ..ಅದೇ ಅವರ ಸಂಗಾತಿ ಕೂಡಾ ಆಗಿದೆ ನಾವು ಹಳೇ ಕಾಲ್ದವ್ರು, ಈಗ ಕಣ್ಣಿಗೂ ವಯಸ್ಸಾಯ್ತು, ಜಾಸ್ತಿ ಸ್ಟ್ರೇನ್ ಮಾಡಬೇಡಿ ಅಂದ್ರು ಕಣ್ಣಿನ ಡಾಕ್ಟರಮ್ಮ, ಸರಿ.. ನಮಗೂ ಮನೆಗೆ ಬಂದು ನಿಮ್ಮನ್ನು ನೋಡಿ ಹೋದರೇನೇ ಸಮಾಧಾನ ನೋಡಿ, ಅದಕ್ಕೆ

ನೀವು ಇರ್ತೀರೋ ಇಲ್ವೊ, ನೀವೂ ಮೊಬೈಲ್ ನ ಆಪ್ತರಾಗಿದೀರೇನೋ ಅಂತ ವಿಚಾರಿಸಿ ಬಂದ್ವಿ ಅಂದ್ರು ಅತಿಥಿ ಜಾನಕಮ್ಮ, ರಾಮರಾಯರು. ಛೇ, ಛೇ, ಹಾಗೇನೂ ಇಲ್ಲ ಬಂದೇ ಒಂದು ನಿಮಿಷ ಅಂತ ಸೀರೆ ಸೆರಗಿನೊಳಗೆ ಮಗುವಿನಂತೆ ಅವರ ಕೈಲಿದ್ದ ಮೊಬೈಲ್ ಮುಚ್ಚಿಟ್ಟು ಕೊಂಡು, ರೂಮಿಗೆ ಹೋಗಿ ಶೆಲ್ಫ್‌ನಲ್ಲಿಟ್ಟು ಬರಿಗೈಯಲಿ ಬಂದರು.

ಮುಖದಲ್ಲಿ ಅಷ್ಟೇನೂ ಸಂತಸವಿರಲಿಲ್ಲ, ಬಲವಂತದ ಮಾಘ ಸ್ನಾನದಂತೆ.. ಮಾತುಕತೆ.. ಜೊತೆಗೆ ಓ..ಹೋ..ಇವರ ಕಣ್ಣಿಗೆ ಪ್ರಾಬ್ಲಂ ಅಂತ ಈ ನಾಟಕಾನಾ ಅಂತ ಮನಸ್ಸಿನಲ್ಲೇ ಗೊಣಗಿದ್ರು ಅನುಸೂಯ. ಎಲ್ಲಿ..??. ಮಗಳು?? ಕಾಣ್ತಾ ಇಲ್ಲ ಅಂದ್ರು ಜಾನಕಮ್ಮ ಮತ್ತೆ ಅವರೇ ಮುಂದುವರಿದು.....

ಅಯ್ಯೋ ಇರ್ಲಿ ಬಿಡಿ, ಗೊತ್ತೇ ಇದೆ,ಅವಳೂ ಮೊಬೈಲ್‌ನ ಪ್ರೀತಿಯಿಂದ ನೋಡ್ಕೋತಿರ್ತಾಳೆ.. ಬಿಡಲಾರದ ನಂಟು, ಅವಿನಾಭಾವ ಸಂಬಂಧ ಪಾಪ, ಅಂತ ವ್ಯಂಗ್ಯ ವಾಡಿದ್ರು.

"..ಇಲ್ಲ, ಇಲ್ಲ ನೀವು ತಪ್ಪು ತಿಳಿದಿದೀರಿ..ಮೊದಲು ಈ ತಂಪು ಪಾನೀಯ, ಮಿಕ್ಚರ್ ತೊಗೊಳಿ ಅಂತ ತಟ್ಟೆಯಲಿಟ್ಟು ಕೊಟ್ಟು..

ಹ್ಞಾ, ಹೌದು, ಮೊದ್ಲು ಹಾಗೇ ಇದ್ಲು ಆದ್ರೆ ಈ ಮಹಿಳಾ ಆರ್‌ಸಿಬಿ ತಂಡ ಕ್ರಿಕೆಟ್ ಪಂದ್ಯ ಗೆದ್ದಷ್ಟು ದಿನದಿಂದ ಅವಳ್ಗೂ ಕ್ರಿಕೆಟ್ ಕ್ರೇಜ್ ಹಿಡ್ದಿದೆ.

ಇದಕ್ಕೂ ಮೊದ್ಲೆಲ್ಲ ಯಾವಾಗ್ಲಾದ್ರೂ ಅಪರೂಪಕ್ಕೆ ಅಡಿಗೆ ಮಾಡ್ತೀನಿ ಅಂತ ಬಂದಾಗ್ಲೆಲ್ಲ ಮಾಡೋ ರೆಸಿಪಿಗಳ ಜೊತೆ, ಪಾತ್ರೆ, ಚಮಚಗಳ ಜೊತೆಗೆ ತುಂಬ ಕ್ರಿಕೆಟ್ ಆಡ್ತಿದ್ಲು..ಅಂದಾಗ ಅತಿಥಿಗಳಿಗೆ ಶಾಕ್ ಆಯ್ತು.. ಹೌದಾ ಅದು ಹೇಗೆ ಅನ್ನುತ್ತಿರುವಂತೆ ಒಂದು ಕುಂಬಳಕಾಯಿಯ ದಪ್ಪ ಹೋಳೊಂದು ಬಂದು ಇವರಿದ್ದಲ್ಲಿಗೆ ಬಂದು ಬಿತ್ತು.. ಸಧ್ಯಕ್ಕೆ ಕೆನ್ನೆಗೆ ತಗುಲಿ ಕುಂಬಳದ ಕಪಾಳ ಮೋಕ್ಷ ಆಗಲಿಲ್ಲ,

ಪಾಪ.. ಅತಿಥಿಗಳು.. ಅಂದುಕೊಂಡ್ರು..ಅಲ್ಲಾ, ಇಷ್ಟ ಇಲ್ದಿದ್ರೆ ಬನ್ನಿ ಅಂತ ಯಾಕೆ ಕರೀಬೇಕಿತ್ತು??

"ಹೋಗು ಅನ್ಲಾರ್ದೆ ಹೊಗೆ ಹಾಕಿದ್ರು" ಅಂತ ಅಂದ್ಕಾಗೆ ಘಂ ಅಂತ ಹೋಳನ್ನು ಹುರಿದು, ನಮ್ಕಡೆ ಬಿಸಿಯಾಗಿ ಎಸೀತಾ ಗೇಟ್ ಪಾಸ್ ಯಾಕೆ ಕೊಡ್ಬೇಕೋ ಅಂತ ಅಂದುಕೊಳ್ತಿದ್ದಂತೆ ಅಮ್ಮ ಅಂದ್ರು

"..ಅಯ್ಯೋ ನೋಡಿ, ಇದೇ ಅವಳ ಕ್ರಿಕೆಟ್ ಆಟ, ಏ..ಕ್ರಾಂತಿ, ಸ್ವಲ್ಪ ನೋಡ್ಕೊಂಡು

ಬಾಂಡ್ಲೆಲಿ ತರಕಾರಿ ಹುರಿಯಮ್ಮ, ಅಡಿಗೆ ಮನೇಲಿ ಕ್ರಿಕೆಟ್ ಆಡ್ತಾ ಫೋರು, ಸಿಕ್ಸರ್ ಹೊಡೀಬೇಡ, ಇಲ್ಲಿ ಗೆಸ್ಟ್ ಇದಾರೆ ಅಂತ ಮುಸಿ ಮುಸಿ ನಕ್ಕರು.. ಮಗಳು ಹೊರಗೆ ಬಂದು,".. ನೋಡಿ ಮಾಮಿ, ಅಮ್ಮ ನನ್ನನ್ನು ತಮಾಷೆ ಮಾಡ್ತಾರೆ.. ನಾನು ಬಾಣಲೆಯಲ್ಲಿ ಹುರಿಯುವಾಗ ಸ್ವಲ್ಪ ಜೋರಾಗಿ ದೊಡ್ಡ ಚಮಚಗಳೊಂದಿಗೆ ಹೀಗೆ ಆಗುತ್ತೆ.. ಅನ್ನುತ್ತಿರುವಂತೆ.. ತಮ್ಮ ದೀಪು ಬಂದ.

"ಹ್ಞೂ..ಹೌದಕ್ಕ, ಹೌದ್ಹೌದು ಆಡಿಸುವಾತನ ಕೈ ಚಳಕದಲೀ ಎಲ್ಲ ಅಡಗಿದೇ, ಅಂತ ಚಪ್ಪಾಳೆ ತಟ್ಟುತ್ತ,, ಮಾಮೀ ..ಇಲ್ನೋಡಿ ಈಗ ಅಕ್ಕ ಹೊಡೆದದ್ದು ಫೋರ್ ಅಂತ ಕ್ರಿಕೆಟ್ ಅಂಪೈರ್ ನಂತೆ ಕೈಯಲ್ಲಿ ಎನಾಕ್ಟ್ ಮಾಡ್ತಾ ತಮ್ಮದೀಪು, ಇದೇನೂ ಇಲ್ಲ ಮಾಮೀ, ಮೊನ್ನೆ ಅದೇನೋ ಹೊಸರುಚಿ ಆಲೂ ಮಸಾಲೆ ಕರಿ ಮಾಡ್ತೀನಿ ಅಂತ ದೋಸೆ ತಿರುಗಿಸೋ ಮಗಚೋ ಕೈಯಲ್ಲಿ ಬಾಣಲೇಲಿ ಹುರಿದ ಆಲೂಗಡ್ಡೆಯ ದೊಡ್ಡ ಬಿಸಿ ಬಿಸಿ ಪೀಸ್ ಸೀದಾ ಮನೆ ಬಾಗಿಲಿಂದ ಹೊರಗೆ ಗೇಟ್ ದಾಟಿಹೋಗಿತ್ತು, ಪುಣ್ಯಕ್ಕೆ ಅವತ್ತು ಅಲ್ಲಿದ್ದ ಎದುರು ಮನೆ ಅಂಕಲ್ ಟೋಪಿ ಹಾಕಿ ಕೊಂಡಿದ್ರು, ಇಲ್ದಿದ್ರೆ ಇವಳು ಹೊಡೆದ ರಭಸ ಸಿಕ್ಸರ್ ನಂತಿತ್ತು, ಅವರು ಮೊದ್ಲೇ ಬಾಲ್ದೀ, ಬಾಂಡ್ಲಿತಲೆ, ಇನ್ನೇನಾದ್ರು ಅನಾಹುತ ಆಗೋದು ತಪ್ಪಿತು ಸಧ್ಯ..ಅಂತ ಚೆನ್ನಾಗಿ ಅಕ್ಕನನ್ನು ಕಿಚಾಯಿಸಿದ." ಏ, ಹೋಗೋ, ತರ್ಲೆ, ಜಾಸ್ತಿ ಗಲಾಟೆ ಮಾಡಬೇಡ, "ನಾವು ಹೆಣ್ಮಕ್ಳೇ ಸ್ಟ್ರಾಂಗು ಗುರೂ" ಅನ್ನೋದು ಮೊನ್ನೆ ನಡೆದ ಆರ್ಸಿಬಿ ಕ್ರಿಕೆಟ್ ಆಟದಲ್ಲಿ ಪ್ರೂವ್ ಆಯ್ತಲ್ಲಾ, ಅಂದಾಗ ದೀಪು, ಕೋಮಾಗೆ ಹೋದವನಂತೆ ಸಡನ್ ಸೈಲೆಂಟ್ ಆದ.. ತೊಟ್ಟಿಲು ತೂಗೋ ಕೈ ಜಗವನ್ನೇ ಆಳಬಹುದು, ಎಂಬಂತೆ ಬಾಣಲೇಲಿ ಹುರಿಯುವ ಕೈ ಕ್ರಿಕೆಟ್ ಕ್ರಾಂತಿಯ ರಣ ಕಹಳೆ ಊದಬಹುದು ಅಲ್ವೇ ಅಂದ್ರು ಜಾನಕಮ್ಮ.. ಹೌದ್ಹೌದು..ನಮ್ಮ ಕರ್ನಾಟಕದ ಹೆಮ್ಮೆಯ ಮಹಿಳಾ ಕ್ರಿಕೆಟ್‌ನ ಅದ್ಭುತ ತಾರಾ ಪ್ರತಿಭೆಗಳು ಕ್ರಿಕೆಟ್ ಕ್ಷೇತ್ರದಲ್ಲಿ ಮಿನುಗುತ್ತಿದ್ದಾರೆ. ಅಂದ್ರು ಅಮ್ಮ.

ಹ್ಞೂ.. ನನ್ನ ಅಕ್ಕ ಹಿರಿಯ,ಗೌರವಾನ್ವಿತ ಕ್ರಿಕೆಟ್ ಕ್ರೀಡಾಪಟುಗಳು ಶಾಂತಾ ರಂಗಸ್ವಾಮಿ, ಮಿಥಾಲಿ ರಾಜ್, ರಂತೆ ಈ ಕ್ರೀಡೆಯಲ್ಲಿ ಮುಂದುವರಿದು, ಸ್ಮೃತಿ ಮಂದಾನಾ ರೀತಿ ಸ್ಮಾರ್ಟ್ ಪ್ಲೇಯರ್ ಆಗಿ, ಶ್ರೇಯಾಂಕ ಪಾಟೀಲ್ ನಂತೆ ಶ್ರೇಷ್ಠ ಆಟಗಾರ್ತಿಯಾಗಿ, ಅನೇಕ ಮಹಿಳಾ ಕ್ರಿಕೆಟಿಗರಂತೆ ಯಶಸ್ಸಿನ ಮೆಟ್ಟಿಲೇರಿ..ಎದುರಾಳಿಗಳನ್ನು ಥರ, ಥರ ನಡುಗಿಸಿ ಸೆಂಟ್ ಪರ್ಸೆಂಟ್ ಅಂಕ ತೊಗೋತಾಳೆ ಅಂತ ಕನಸು ಕಾಣ್ತಿದಾಳೆ..ಜೊತೆಗೆ ನಮ್ಮಕ್ಕ ಕ್ರಾಂತಿ, ಆ ಆರ್ಸಿಬಿ ಕಪ್ ಎಲ್ಲಾ ಇವಳದೇ, ಅದರಲ್ಲೇ ಕಾಫಿ, ಟೀ, ಜ್ಯೂಸ್, ಎಳನೀರು, ಬೇಸಿಗೆಗೆ ಬೆಲ್ಲದ ಪಾನಕ, ಕಡೆಗೆ ಔಷಧೀನೂ ಕುಡೀಬಹುದು ಅಂತ ಕುಣೀತಿದಾಳೆ ಅಂತ ಸೈಲೆಂಟಾಗಿದ್ದ ತಮ್ಮ ಮತ್ತೆ ಕಿಚಾಯಿಸಲಾರಂಭಿಸಿದ..

"ಆಹಾ, ಸಾಕು ಸುಮ್ನಿರೋ ಕೀಟಲೆಸುಬ್ಬ, ದಿಲ್ಲಿ ಕ್ಯಾಪಿಟಲ್ಸ್‌ನ ಸೋಲಿಸಿದ ಕಾರಣ ಇನ್ಮೇಲೆ ಭಾರತದ ರಾಜಧಾನಿ ಯಾವುದಕ್ಕಾ?? ಅಂತ ಕೇಳಬೇಡ ಕಣೋ ದಡ್ಡ ಶಿಖಾಮಣೀ, ಅಂತ ಅಕ್ಕನೂ ಸರಿಯಾದ ಬಾಣ ಬಿಟ್ಟಳು..

ಓ..ಹೌದು, ನೀನೂ ಕ್ರಿಕೆಟ್ ಕ್ರಶ್ ಗೆ ಒಳಗಾಗಿದೀಯ ಕ್ರಿಕೆಟ್ ಆಡಿ ಛಾಂಪಿಯನ್ ಆಗಬೇಕು, ಕ್ರಶ್ ಮಾಡಿ ಪುಡಿ ಮಾಡುಕ್ಕೆ ಅದು ಚಟ್ನಿ ಪುಡಿ, ಅಲ್ಲಣಕ್ಕೋ ಅಂದಾಗ ಅಮ್ಮಏ.. ಸುಮ್ನಿರೋ ಸಾಕು ಅಂತ ಹೇಳಿದರೂ ಬಿಡದೇ..ಮುಂದುವರಿಸಿದ..

ನಮ್ಮ ಕರ್ನಾಟಕದ ಹೆಮ್ಮೆಯ ಪುಟ್ಟಿ ಶ್ರೇಯಾಂಕ ಪಾಟೀಲ್ ನಂತೆ ಕ್ರಿಕೆಟ್‌ಗೆ ನೀನು ಯಶಸ್ಸು, ಶ್ರೇಯಸ್ಸು, ಕೀರ್ತಿ ತಂದಾಗ ನೀನು ಅಡಿಗೆ ಮನೇಲಿ ಶುರುಮಾಡಿದ ಕ್ರಿಕೆಟ್ ಫೇಮಸ್ ಆಗುತ್ತೆ..ನೋಡಕ್ಕ, ಯೋಚ್ನೆ ಮಾಡು, ಕ್ರಿಕೆಟ್ ಪಿಚ್ ನಲ್ಲಿ ಬ್ಯಾಟಿಂಗ್

ಮಾಡ್ತೀಯೋ, ಇಲ್ಲ ಅಮ್ಮ ಮಾಡೋ "ಬಿಸಿಬೇಳೆ ಭಾತ್, ಖಾರಾಬೂಂದಿ, ಹೀರೇಕಾಯಿ ಬೋಂಡಾ, ಶಾವಿಗೆ ಪಾಯಸ, ಬಾದೂಷಾ, ಸಕ್ರೆಪೊಂಗಲು, ಹಣ್ಣಿನರಸಾಯನ, ಮೊಸರನ್ನ, ಹಪ್ಪಳ ಸಂಡಿಗೆ, ಮಿಡಿಮಾವಿನಕಾಯಿ ಉಪ್ಪಿನಕಾಯಿಯ ಬ್ಯಾಟಿಂಗ್ ಮಾಡ್ತೀಯೋ..?? ನೀನು ಯಾವುದು ಮಾಡಿದ್ರೂ ನೋಡಕ್ಕ... "ಅಡಿಗೆ ಮನೆಯಿಂದ ಕ್ರಾಂತಿಯ ಕ್ರಾಂತಿಕಾರಿ ಬೌಲಿಂಗ್, ಬ್ಯಾಟಿಂಗ್, ಆಲ್ ರೌಂಡರ್ ಆಟಗಾರ್ತಿ ಅಂತ ಫೇಸ್ಬುಕ್, ಇನ್ಸ್ಟಾ, ವಾಟ್ಸ್ ಯಾಪ್ ನಂಥ ಎಲ್ಲಾ ಜಾಲತಾಣದಲ್ಲಿ ಈ ಲೈನ್ಸ್ ವೈರಲ್ ಆಗಿ ಸೂಪರ್ ಫೇಮಸ್ ಆಗೋದಂತೂ ನಿಜ, ಹಾಗೇ ನೀನು ಮೊದಲೇ ಭೋಜನ ಪ್ರಿಯೆ, ತಟ್ಟೇಲಿ ಊಟ ಮಾಡಿ ಸೆಂಚುರಿ ಬ್ಯಾಟಿಂಗ್ ಮಾಡುವುದು ಮತ್ತಷ್ಟು ಗ್ಯಾರಂಟಿ.

ಹ್ಞಾ..ಇನ್ನೊಂದು ಮರ್ತಿದ್ದೆ..ಹಬ್ಬ ಅಂತ ಬಾಳೆಎಲೆ ಯಲ್ಲಿ ಊಟ ಮಾಡ್ದಾಗ.. ತಿಳಿಸಾರು, ಪಾಯಸ, ಮೊಸರು ಬಜ್ಜಿ ಇತ್ಯಾದಿ ಬಾಳೆಎಲೆ ಬೌಂಡರಿ ದಾಟಿಹೋಗ್ದಂತೆ.. ಮಾತ್ರ "ಫಸ್ಟ್ ಕ್ಲಾಸ್ ಫೀಲ್ಡಿಂಗ್" ಮಾಡ್ತೀಯ...ನೋ ಡೌಟ್ ಅಂತ ಮತ್ತಷ್ಟು ತಮಾಷೆ ಮಾಡ್ತಾ ಅಕ್ಕನನ್ನು ಕಿಚಾಯಿಸಿದಾಗ ಈವರೆಗೂ ಸಾಕಷ್ಟು ನಗುತ್ತಿದ್ದ ಅತಿಥಿಗಳು, ಅಮ್ಮನೂ ಸೇರಿದಂತೆ ದೀಪುವಿನ ಹಾಸ್ಯಕ್ಕೆ ಜೋರಾಗಿ ಸೂರು ಹಾರಿಹೋಗುವಂತೆ ಮತ್ತಷ್ಟು ನಗುತ್ತಿದ್ದಾಗ..ಹಾಸ್ಯ ವೆಂದರೆ ಬಲು ಪ್ರೀತಿಯಿದ್ದ ಕ್ರಾಂತಿ ತಾನೂ ನಗುತ್ತಾ "ನೋಡಿ ಮಾಮಿ, ನಂಗೆ ಹೊಸರುಚಿ ಮಾಡೋದು ಅಂದ್ರೆ ತುಂಬಾಇಷ್ಟ, ನೋಡ್ತಿರಿ ಈ ಹೊಸರುಚಿ ಸ್ಪರ್ಧೆಯಲ್ಲಿ ಭಾಗವಹಿಸಿ, ಇನೋವೇಟಿವ್ ಅಡಿಗೆ ಮಾಡಿ, "ನಳ ಮಹಾರಾಣಿ "ಅಂತ ಫೇಮಸ್ ಮಹಿಳಾ ಷೆಫ್ ಆಗ್ತೀನಿ, ಜೊತೆಗೆ ನನಗಿರುವ ಕ್ರಿಕೆಟ್ ಕ್ರಶ್ ನಿಂದ ಮಹಿಳಾ ಕ್ರಿಕೆಟಿಗರ ದಾಖಲೆಗಳನ್ನು ಮೀರಿ ಮತ್ತಷ್ಟು ಹೊಸ ಹಿಸ್ಟರಿ ಕ್ರಿಯೇಟ್ ಮಾಡ್ತೀನಿ...


"ಮಾಮಿ, ಅಡಿಗೆಮನೆಯಿಂದ ಶುರುವಾದ ನನ್ನ ಪ್ರೀತಿಯ ಕ್ರಿಕೆಟ್ ನನ್ನ ಕೈನಲ್ಲಿ ಕ್ರಾಂತಿಕಾರಿ ಆಟವಾಗಿ "ಅಡುಗೆ ಮನೆಯಿಂದ.. ಅರ್ಜುನ ಪ್ರಶಸ್ತಿ "ಅಂತ ಅವಾರ್ಡ್ ತೊಗೋಳೋವರೆಗೆ ಇನ್ನು ಈ ಕ್ರಾಂತಿಗೆ ಊಟ, ತಿಂಡಿ, ಆಟ ಪಾಠ ಎಲ್ಲವೂ ಕ್ರಿಕೆಟ್ಟೇ. ದೇಶ, ವಿದೇಶಗಳಲ್ಲಿ ಕ್ರಿಕೆಟ್ ಗೆದ್ದು, ಬೀಗಿ ನಮ್ಮ "ತ್ರಿವರ್ಣ ಧ್ವಜ"ವನ್ನೇರಿಸಿ, ಜನಗಣಮನ ರಾಷ್ಟ್ರ ಗೀತೆಹಾಡಿ ನಮ್ಮ ಭಾರತಾಂಬೆಯ ಹೊನ್ನ ಕಿರೀಟಕ್ಕೆ ಮತ್ತೊಂದು ಹೊನ್ನ ಗರಿ ತೊಡಿಸೋವರ್ಗೂ, ಕ್ರಿಕೆಟ್ ನಾಮ ಜಪಿಸ್ತಾ, ಕ್ರಿಕೆಟ್ಟನ್ನೇ ಉಸಿರಾಡ್ತೀನಿ.. ಅಂತಿದ್ದಂತೆ ಅಪ್ಪ ಬಂದ್ರು, ಅಪ್ಪನ ಕೈಲಿದ್ದ ಹೊಚ್ಚ ಹೊಸ ಕ್ರಿಕೆಟ್ ಬ್ಯಾಟು,ಬಾಲು, ಪೂರ್ತಿ ಸೆಟ್ಟು.. ನೋಡಿ ಸಿಕ್ಕಾಪಟ್ಟೆ ಖುಷಿಯಾದಳು. ನೋಡು, ಕ್ರಾಂತಿ..ನಿನ್ನ ಇಷ್ಟದಂತೆ ಈ ಕ್ರಿಕೆಟ್ಸೆಟ್ ತಂದಿದೀನಿ.. "ಅಡಿಗೆ ಮನೆಯಿಂದ ಕ್ರಿಕೆಟ್ – ಕ್ರಾಂತಿಯ..ರಣಕಹಳೆ ಮೊಳಗಲಿ.. ಅಂತ ಹೇಳುತಿದ್ದ ಹಾಗೆ ಕ್ರಾಂತಿ ಮನೆಯೆದುರಿಗಿದ್ದ ಆಟದ ಮೈದಾನದಲ್ಲಿ ಗೆಳತಿಯರೊಂದಿಗೆ. ಆಟವಾಡಲು, ಅಪ್ಪ ತಂದ ಕ್ರಿಕೆಟ್ ಸೆಟ್ ಹಿಡಿದು ನಗು, ನಗುತ್ತಾ ಹೊರಟಳು.. ಜೊತೆಗೆ ಮಾಮೀ, ಇವತ್ತಿನ "ಕ್ರಿಕೆಟ್ ಕ್ರೀಂ "ಅಂತ ಹೊಸ ರುಚಿಯ ಸ್ವೀಟು, ನಾನೇ ಬಂದು ಮಾಡ್ತೀನಿ, ಅದನ್ನು ಟೇಸ್ಟ್ ಮಾಡಿದ ಮೇಲೇನೇ ನೀವಿಬ್ರೂ ಮನೆಗೆ ಹೊರಡಬೇಕು ಸರೀನಾ?? ಅಂದಾಗ, ಆಯ್ತಮ್ಮ ಹಾಗೇ ಆಗಲಿ, ಬರುವ ವಿಶ್ವ ಮಹಿಳಾ ಕ್ರಿಕೆಟ್ ಟೂರ್ನಿಯ ಗೆಲುವಿನ ಕಿರೀಟ, ಕಪ್ ನಿನ್ನಿಂದಲೇ ದೊರೆಯಲಿ ಅಂತ ಅತಿಥಿಗಳೂ ಖುಷಿಯಿಂದ ಕ್ರಾಂತಿಯನ್ನು ಹಾರೈಸಿದರು.

ಇದು ನಿಜವಾಗಲೂ ನಡೆಯುತ್ತಾ ಅಂತ ಇದ್ದ ದೀಪುವಿನ ಡೌಟಿನ ಮಧ್ಯೆ ಇಷ್ಟೆಲ್ಲಾ ನಡೆದುದರ ಬಗ್ಗೆ ಮತ್ತೆ, ಮತ್ತೆ ನೆನಪು ಮರುಕಳಿಸಿ ನಗು ಮಾತ್ರ ಎಲ್ಲರ ಮುಖಗಳಲ್ಲೂ ಸೂಪರ್ ಆಗಿ ಮಿನುಗುತ್ತಿತ್ತು.

■

## ಪುಸ್ತಕ ಪರಿಚಯ

**ಕೃತಿ : ಬಣ್ಣ ಬದಲಿಸುವ ಚಹರೆಗಳು (ಕಥಾ ಸಂಕಲನ)**
**ಲೇಖಕಿ : ನಳಿನಿ ಟಿ. ಭೀಮಪ್ಪ**
**ಪ್ರಕಾಶಕರು : ಸಾಹಿತ್ಯ ಲೋಕ ಪಬ್ಲಿಕೇಷನ್ಸ್, ಬೆಂಗಳೂರು**




ಒಂದು ಕಪ್ ಕಾಫೀ ಹಾಗೂ ಸೆಲ್ಫೀ ಪ್ರಬಂಧ ಸಂಕಲನಗಳ ಮೂಲಕ ಓದುಗರ ಗಮನ ಸೆಳೆದಿರುವ ನಳಿನಿ ಟಿ. ಭೀಮಪ್ಪ ಅವರು ಇದೀಗ "ಬಣ್ಣ ಬದಲಿಸುವ ಚಹರೆಗಳು" ಎಂಬ ಕಥಾ ಸಂಕಲನದ ಮೂಲಕ ಕಥಾ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದ್ದಾರೆ. ಪ್ರಬಂಧ ಕಟ್ಟುವುದರಲ್ಲಿ ಸಿದ್ಧಹಸ್ತರಾದ ನಳಿನಿ ಅವರಿಗೆ ಕತೆ ಹೆಣೆಯುವ ಕಲೆಯೂ ಕರಗತವಾಗಿದೆ.

ನಳಿನಿ ಅವರ ಕಥಾ ವಸ್ತುವಿನ ಹರಿವಿನಲ್ಲಿ ಪ್ರಚಲಿತ ಸಾಮಾಜಿಕ ಸಮಸ್ಯೆಗಳು, ಅಸಹಜ ವ್ಯಕ್ತಿತ್ವಗಳು, ಹೆಣ್ಣಿನ ಸೂಕ್ಷ್ಮ ಸಂವೇದನೆಗಳಂತಹ ವಿಷಯಗಳು ಕಂಡು ಬರುತ್ತವೆ. ಹೆಣ್ಣಿಗೂ ಒಂದು ಮನಸಿದೆ ಎಂಬುದನ್ನು ಮರೆತು ಅವಳ ಬಯಕೆಗಳು ಹಾಗೂ ಅಂತಃಸತ್ವವನ್ನು ಹತ್ತಿಕ್ಕುವ ಸಮಾಜ, ಹಣ ಬಲದಿಂದ ಏನನ್ನಾದರೂ ಕೊಳ್ಳಬಹುದೆಂಬ ಹಣವಂತರ ಅಹಂಭಾವಗಳನ್ನು ತೆರೆದಿಡುವಂತಹ ಪ್ರಯತ್ನವನ್ನು ಲೇಖಕಿ ಮಾಡಿದ್ದಾರೆ.

ಒಟ್ಟು ಹದಿನೇಳು ವಿಭಿನ್ನ ಕಥಾ ವಸ್ತುವನ್ನೊಳಗೊಂಡ "ಬಣ್ಣ ಬದಲಿಸುವ ಚಹರೆಗಳು" ಈ ಕೃತಿಯು ಆಸ್ಥೆಯಿಂದ ಓದಿಸಿಕೊಳ್ಳುತ್ತದೆ. ಹಾಗೆಯೇ ಕತೆಗಳು ಹಾಗೂ ಕಥಾ ಪಾತ್ರಗಳು ನೆನಪಿನಲ್ಲಿ ಉಳಿಯುತ್ತವೆ. ಮುಂದಿನ ಅವರ ಬರಹದ ಪಯಣ ಮತ್ತಷ್ಟು ಯಶಸ್ಸಿನಿಂದ ಕೂಡಿರಲೆಂದು ಹಾರೈಸುತ್ತ ...

**ಗೌರಿ ಚಂದ್ರಕೇಸರಿ, ಶಿವಮೊಗ್ಗ.**

## ಬೆಲ್ಟಿನ ರುಚಿ ಮತ್ತ 'ಪ್ರತಿಧ್ವನಿ'

ಸಿ.ಎ. ವಿಲಾಸ ನಾ ಹುದ್ದಾರ

ನಾನ ಗದಗಿನೊಳಗ ಅಜ್ಜನ( ತಾಯಿಯ ತಂದೆ) ಕಡೆ ಇದ್ದ ಎಸ್.ಎಸ್.ಎಲ್.ಸಿ. ಮುಗಿಸಿದೆ. ಮುಂದ ಕಾಲೇಜ ವಿದ್ಯಾಭಾಸಕ್ಕ ಅಂತ ಬೆಳಗಾವಿಯಲ್ಲಿದ್ದ ನನ್ನ ತಂದಿ–ತಾಯಿ ಕಡೆಬಂದೆ( 1971). ಅಲ್ಲೆ ನಾನು ಕಾಮರ್ಸ ಮಾಡ್ಲಿಕ್ಕೆ ಗೋಗಟೆ ಕಾಲೇಜ್‌ನೊಳಗ ಪಿ.ಯು.ಸಿ. ಮೊದಲನೇ ವರ್ಷಕ್ಕ ಸೇರಿದೆ. ಎಲ್ಲಾರಿಗೂ ಗೊತ್ತಿದ್ದಂಗ ಕಾಮರ್ಸ ಅಂದ್ರ ವರ್ಷ ಎಲ್ಲಾ ಚೈನಿ ಹೊಡದು, ಕಡೀ ಒಂದ ತಿಂಗಳ ಅಭ್ಯಾಸ ಮಾಡಿ ಪರೀಕ್ಷಾ ಬರೆಯೋದು. ಹಿಂಗಾಗಿ ಮೊದಲೇಕ ಸ್ವಲ್ಪ ಇದ್ದ ಸಿನೆಮಾ ಚಟಾ (ಛೊಲೊ) ನಾ ಕಾಲೇಜಿಗೆ ಬಂದ ಮ್ಯಾಲೆ ಹೆಚ್ಚಿಗೀನ ಆತು. ನನ್ನ ತಮ್ಮ ಶರದ, ತಂಗಿ ಶೈಲಾ ಯಾವಾಗಲೂ ತಂದೆ–ತಾಯಿ ಜೋಡೀ ಇದ್ರ ನಾ ಯಾವಾಗಲೂ ಗೆಳ್ಯಾರ ಜೋಡಿ ತಿರಗತಿದ್ದೆ. ಗೆಳ್ಯಾರೂ ಛೊಲೋ ಸಿಕ್ರು. ಸಿನೆಮಾ ನೋಡೋ ಬಾಬ್ತಿಯೊಳಗ ನನ್ನ ಗೆಳ್ಯಾರ ಗುಂಪನ್ನ ಮೂರು–ನಾಲ್ಕು ಉಪಗುಂಪು ಮಾಡಬಹುದು.

ಮೊದಲನೇ ಗುಂಪು ಹಳೇ ಸಿನೆಮಾ, ಅಂದ್ರ 1950–70 ರ ದಶಕದ ಸಿನೆಮಾ ನೋಡೋ ಗುಂಪು. ಇದರೊಳಗ ಮದನ ಕರ್ಜಗಿ, ರವಿ ಬುರ್ಲಿ, ವಿಠಲ ಕಟ್ಟಿ ಮತ್ತಿತರು ಇದ್ದರು. ಕೃಷ್ಣಾ ಟಾಕೀಜ್‌ದೊಳಗ ಮಧ್ಯಾಹ್ನದ ಶೋಕ್ಕ (12.00 ರಿಂದ 3.00) ಯಾವಾಗಲೂ ಹಳೇ ಸಿನೆಮಾ ಹಚ್ಚತಿದ್ರು. ಅಲ್ಲೇ ನಾವು ಚೋರಿ ಚೋರಿ, ತೆರೆ ಘರ ಕೆ ಸಾಮನೆ, ಬರಸಾತ, ಹಮರಾಹಿ, ಸಿ,ಐ.ಡಿ., ಜಿಸ ದೇಶ ಮೇಂ ಗಂಗಾ ಬೆಹತಿ ಹೈ ಮುಂ. ಸಿನಾಮಾ ನೋಡಿದ್ದು.

ಎರಡನೇ ಗುಂಪಿನೊಳಗ ಮ್ಯಾಲಿನ ಗೆಳ್ಯಾರ ಅಲ್ಲದ ಹಿರೇಕೆರುರ, ಬೆಳ್ಳುಬ್ಬಿ, ಇದ್ದರು. ಹೊಸಾ ಪಿಕ್ಚರ್‌ಗೆ ಇವರೆಲ್ಲಾರ ಜೋಡಿ ಹೋಗ್ತಿದ್ದೆ. ಅಲ್ಲದ ನಾನು ರಾಜೇಶ ಖನ್ನಾನ ಕಟ್ಟಾ ಭಕ್ತನಾಗಿದ್ದೆ. ಅವನ ಪಿಕ್ಚರ್ ಎಷ್ಟ ವಾರ ನಡೀತದ ಅಷ್ಟ ಸರೆ ಆ ಪಿಕ್ಚರ್ ನೊಡ್ತಿದ್ವಿ, ನೋಡಲೇ ಬೇಕು. ಪ್ರೇಮ ನಗರ ಹದಿನೈದ ವಾರ ನಡೀತು. ಅಂದ್ರ ಹದಿನೈದ ಸರ್ತೆ ಅದನ್ನ ನೋಡೀದ್ವಿ. ರಾಜೇಶ ಖನ್ನಾನ ಪಿಕ್ಚರ್ ನೊಡಲಿಕ್ಕೆ ಸಾಮಾನ್ಯವಾಗಿ ಪ್ರಕಾಶ ಅಧ್ಯಾಪಕ ಮತ್ತ ರಾಯಚೂರ ಜೋಡಿ ಇರ್ತಿದ್ರು.

ಏನಪಾ ಇಂವಾ, ಲೇಖನದ ತಲೆಬರಹನ ಬ್ಯಾರೇನ ಅದ, ಇಂವಾ ಬ್ಯಾರೇ ಏನೇನೋ ಬರೀಲಿಕತ್ತಾನ ಅಂತ ಬಯ್ಕೊಬ್ಯಾಡ್ರಿ. ನನಗ ಸಿನೆಮಾದ್ದ ಹುಚ್ಚ ಎಷ್ಟ ಇತ್ತ ಅಂತ ತಿಳೀಲಿ ಅಂತ ಇದೆಲ್ಲಾ ಬರದೆ. ಈಗ ಅಸಲೀ ವಿಷಯಕ್ಕ ಬರತೇನಿ. ಒಂದಿವಸ ಕಾಲೇಜಿನಿಂದ ಬರೋಮುಂದ ಮಧ್ಯಾಹ್ನದಾಗ ನಮ್ಮೆಲ್ಲರ ಮೆಚ್ಚಿನ ವರನಟ ಡಾ.ರಾಜಕುಮಾರ ಅವರ ಕೌಬೊಯ್ ವೇಷ ಹಾಕ್ಕೊಂಡ "ಪ್ರತಿಧ್ವನಿ" ಪಿಕ್ಚರ್‌ದ ಪೋಸ್ಟರ್ ಕಣ್ಣಿಗೆ ಬಿತ್ತ. ಅದ ವಾರ "ಪ್ರತಿಧ್ವನಿ" ಪಿಕ್ಚರ್ ರಿಲೀಜ್ ಆಗಿತ್ತ. ಮತ್ತೇನ ಕೇಳಬೇಕ. ಅವರ ಕೌಬೊಯ್ ಅವತಾರ ನೋಡಬೇಕಂತ ಮನಸ್ಸ ಚಡಪಡಿಸಲಿಕ್ಕತ್ತು. ಆಗ ನನ್ನ ಜೋಡಿ ದ್ರುವ ದೇಸಾಯಿ ಅಂತ ಹೊಸದಾಗಿ ಆದ ಗೆಳ್ಯಾ ಇದ್ದಾ. ಅಂವಾ ನನ್ನ ಮನಸ್ಸ ಓದಿದಾ ಅಂತ ಅನಸ್ತದ. "ಹೆಂಗಿದ್ರೂ ಇನ್ನಮ್ಯಾಲೆ ಯಾವದೂ ಕ್ಲಾಸ ಇಲ್ಲಾ, ಹೋಗೋಣ ನಡೀಲೇ?" ಅವನ ಮಾತ ಕೇಳಿ, "ನಾನು ಮನೀಗೆ ಹೋಗಿ ಪುಸ್ತಕ ಇಟ್ಟ ಬರ್ತೀನಿ" ಅಂತ ಹೇಳಿ ಮನೀ ಕಡೆ ನಡದೆ.

ಆದ್ರ ನನ್ನ ಆತಂಕ ಬ್ಯಾರೆ ಇತ್ತು. ತಿಂಗಳ ಪಾಕೆಟ್ ಮನೀ ಮುಗದಿತ್ತು. ನಮ್ಮ ತಂದಿ ಊಟಕ್ಕ ಬಂದಿರತಾರ. ಅವರ ಕಡೀಂದ ರೊಕ್ಕಾ ಇಸಕೊಂಡ ಬರಬೇಕ. ಎಲ್ಲಿ ಬಯ್ತಾರ ಅಂತ ಹೆದ್ರಿಕಿ. ಆದ್ರ ಪಿಕ್ಚರ್ ನೋಡೋ ಆಸೆ(ದುರಾಸೆ)? ಮನೀಗೆ ಬಂದೆ,




ನಮ್ಮ ತಂದೆ ನಾರಾಯಣರಾಯರು, ಊಟಾ ಮಾಡಿ ಕೂತಿದ್ರು. ಇನಮ್ಯಾಲೆ ಆಫೀಸ್‌ಗೆ ಹೋಗಬೇಕು. ನನ್ನ ಕೈಯಾಗ ಪುಸ್ತಕ ಇತ್ತು. ನಾ ಹಂಗ ಹೋಗಿ ಅವರ ಮುಂದ ನಿಂತೆ.

"ಏನಾತು, ಪುಸ್ತಕ ಇಟ್ಟ ಕೈಕಾಲ ತೊಳ್ಕೋ ಹೋಗು... ನನ್ನ ಮುಂದ ಗೊಂಬಿ ಹಂಗ ಯಾಕ ನಿಂತಿ?"

"ನನಗ ಪಿಕ್ಚರ್‌ಗೆ ಹೋಗಲಿಕ್ಕೆ ರೊಕ್ಕಾ ಬೇಕು."

"ಈಗೆಂಥಾ ಪಿಕ್ಚರ್, ಮೊನ್ನೆ ಹೋಗಿದ್ದೆಲ್ಲಾ, ಮತ್ತ ನಿನ್ನ ಪೊಕೆಟ್ ಮನೀ ಏನಾತು? ಆಗಲೇ ತೀರ್ತೇನ?"

"ಪೊಕೆಟ್ ಮನೀ ಎಲ್ಲಾ ಮುಗದದ... ನನ್ನ ಗೆಳ್ಯಾಗ ಬರ್ತೇನಿ ಅಂತ ಹೇಳಿ ಬಂದೇನಿ..."

"ಏನ ನನ್ನ ಕೇಳಿ ಹೇಳಿ ಬಂದೀ ಏನ.?"

"ಅಂವಾ ಹಾದೀ ಕಾಯ್ತಿರತಾನ..."

ನಾ ಇಷ್ಟ ಅನ್ನೋದಕ್ಕ ರುದ್ರಾವತಾರ ತಾಳಿ ತಮ್ಮ ಬೆಲ್ಟ್ ತಗದು ಜೋರಾಗಿ ನನ್ನ ಮ್ಯಾಲೆ  ಒಗದ್ರು. (ತಿಂಗಳ ಕೊನೆ, ಅವರ ಕಡೇನ ಜಾಸ್ತ ರೊಕ್ಕಾ ಇರ್‍ತಿರಲಿಲ್ಲಾ .... ಆ ಸಿಟ್ಟೂ ಇತ್ತು ). ಆ ಬೆಲ್ಟಿನ ಹುಕ್ ಬಂದ ನನಗ ಜೋರಾಗಿ ಬಡದು ಪೆಟ್ಟ ಬಿದ್ದ ಉರೀಲಿಕ್ಕತ್ತು.. ಅದನ್ನ ನೋಡಿ ನನ್ನ ಸಿನೆಮಾ ನೋಡೋ ನಿರ್ಧಾರ ಮತ್ತಷ್ಟ ಘಟ್ಟಿ ಆತ. ಹೊಡತಾ ತಿಂದೇನ ಅಂದಮ್ಯಾಲೆ ಪ್ರತಿಫಲ ಸಿಗಲೇ ಬೇಕಲ್ಲಾ.

"ಬೆಲ್ಟಿನ ರುಚಿ ನೋಡೇನ ಅಂದಮ್ಯಾಲೆ ನನಗ ರೊಕ್ಕಾ ನೀವ ಕೊಡಲೇ ಬೇಕ, ನಾನು ಪಿಕ್ಚರ್‌ಗೆ ಹೋಗಲಿಕ್ಕೇ ಬೇಕು."

ನಾರಾಯಣರಾಯರು ಅಲ್ಲೇ ನಿಂತಿದ್ದ ತಮ್ಮ ಧರ್ಮಪತ್ನಿ ಮಾಲಾಳ ಕಡೆ ನೋಡೀದ್ರು. ನನ್ನ ತಾಯಿ ಮಾರೀ ಮ್ಯಾಲೆ ಕರುಣಾ ರಸಾ ಉಕ್ಕಿ ಹರೀತಿತ್ತು. ಅದನ್ನ ನೋಡಿ ಏನೂ ಮಾತನಾಡದ ಪ್ಯಾಂಟೀನ ಕಿಸೆಕ್ಕ ಕೈ ಹಾಕಿ ರೊಕ್ಕಾ ತೊಗೊಂಡು ನನ್ನ ಮಾರೀ ಮ್ಯಾಲೆ ಒಗದು,

"ನಾಚಿಗೆಟ್ಟವನ..." ಅಂತ ಅಂದ್ರು. ಅದನ್ನ ಕೇಳಿಸಿಕೊಳ್ಳೊ ಪುರಸತ್ತ ನನ್ನ ಕಡೆ ಇರಲಿಲ್ಲ. ರೊಕ್ಕಾ ತೊಗೊಂಡವನ ಅಲ್ಲಿಂದ ಒಂದೇ ಉಸರಿಗೆ ಓಡಿದೆ. ಇಷೆಲ್ಲಾ ಗುದ್ಯಾಡಿ ಪಿಕ್ಚರ್‌ಗೆ ಹೋದ್ರ , ನನಗ ನೆನಪಿದ್ದಂಗ ರಾಜಕುಮಾರ ಅವರದು ಕೌಬೊಯ್ ಸೀನ್ ಒಂದ ಹಾಡಿನಾಗ ಇತ್ತು. ನನ್ನ ಗೆಳ್ಯಾ ನನಗ ಪೆಟ್ಟ ಬಿದ್ದದ್ದ ನೋಡಿ ಏನಲೇ ಇದು ಅಂತ ಕೇಳಿದಾ.

"ಅದೆಲ್ಲಾ ನಿನಗ ತಿಳಿಯೂದಿಲ್ಲಾ ...... ನೋಡಪಾ ಇವತ್ತ ನನ್ನ ಮೈ ಬೆಲ್ಟಿನ ರುಚಿ ನೋಡಿದ್ದಕ್ಕ ನನ್ನ ಕಣ್ಣಿಗೆ "ಪ್ರತಿಧ್ವನಿ" ನೋಡೋ ಭಾಗ್ಯ ಸಿಕ್ತು."

ಅಂವಗ ಏನೂ ತಿಳೀದನನ್ನ ಮಾರೀ ನೋಡ್ಕೋತ ನಿಂತಾ.

**ಶ್ರೀ ಕೃಷ್ಣಾರ್ಪಣಮಸ್ತು**

■

# ನನ್ನಿಂದ ನೀವ್ ಕೆಡ್ಬೆಲ್ಲ ರೀ...

ಮಂಗಳ ಎಂ ನಾಡಿಗ್

ಅಯ್ಯೋ, ಅಯ್ಯೋ, ಅಯ್ಯೋ, ನನ್ ಗೋಳ್ ಕೇಳೋರ್ಯಾರೂ ಇಲ್ವೇ....ಮೂರ್ ಮೂರ್ ದಿನಕ್ಕೊಂದೊಂದ್ ಅವ್ತಾರ ಇವ್ರ್ ಗಳುದ್ದು. ಡಯಟ್ ಡಯಟ್ ಅಂತ ನನ್ ಪ್ರಾಣ ತಿಂತಾರೆ.

ಬಿಸ್ಲೀರಿಗ್ ಲಿಂಬೆರಸ ಹಾಕಿ ಇಷ್ಟಿಷ್ಟ್ ದೊಡ್ ದೊಡ್ ಲೋಟ್ದಲ್ಲಿ ಕುಡ್ಕೊಂಡ್ ಕುಡ್ಕೊಂಡ್  ನನ್ನುನ್ ತುಂಬ್ಸದೇನು, ಹಸಿ ತರ್ಕಾರಿ, ಅರ್ಧಂಬರ್ಧ ಬೇಯ್ಸಿದ್ ಸಪ್ಪೆ ತರ್ಕಾರಿ, ಹಣ್ಣು-ಹಂಪ್ಲು, ಒಣ ಚಪಾತಿ ಹೀಗೆ ಗಂಟೆ ಲೆಕ್ಕದಲ್ಲಿ ಇಷ್ಟಿಷ್ಟೆ ಅಂತ ತಿನ್ನದೇನು. ನಂಗ್ ಇನ್ನಷ್ಟ್ ಬೇಕೂನ್ಸಿದ್ರು ಹೇಳಕಾಗ್ದೆ, ಬೇಡ ಆಗಿದ್ದುನ್ನ ಧಿಕ್ಕರಿಸೋಕು ಆಗ್ದೆ ಒಳಗೊಳಗೇ ಮೌನವಾಗಿ ರುಬ್ಕೊಂಡ್ ಇದಿನಲ್ಲ , ಎಷ್ಟು ಪಾಪ ಅಲ್ವಾ ನಾನು!

ಹೋಗ್ಲಿ , ಇದ್ಕೇ ಅಡ್ಜಸ್ಟ್ ಆಗಿರಣಾಂದ್ರೆ ಅದೇನು ಪರ್ಮ್ ನೆಂಟೇ... ನಾಲಕ್ ದಿನ ಆಗೋ ಅಷ್ಟೊತ್ತಿಗೆ ಬಾಯಿ ಚಪ್ಲ ಜಾಸ್ತಿ ಆಗಿ, ನಾಲ್ಗೆ ಎಲ್ಲಾ ಕೆಟ್ಹೋಗಿ ಒಂದಷ್ಟು ಕರ್ದಿದ್ದು, ಕುರುಕ್ಲು, ಕೋಲ್ಡು, ಹಾಟು (ಹಾಟ್ ಡಾಗ್) ಅಂತಿಲ್ದೇ ಎಲ್ಲಾನು ಒಟ್ಟೊಟ್ಗೆ ತಿಂದು, ಕುಡ್ದು ತೃಪ್ತಿ ಪಟ್ಕೊತಾರೆ. ಆದ್ರೆ ಒಂದೇ ಸಲ ಆತರ ತುರ್ಕಿದ್ದುಕ್ಕೆ ನನ್ ಕಥೆ ಏನಾಗ್ಬೇಕು ಹೇಳಿ? ಅಲ್ಲಾ, ನನ್ನುನ್ ಏನಂದ್ಕೊಂಡಿದಾರೆ ಇವ್ರೆಲ್ಲಾ.. ಬೇಕಾಬಿಟ್ಟಿ ತಿಂದು ಹೊಟ್ಟೆ ನಿನ್ನಿಂದ ನಾ ಕೆಟ್ಟೆ ಅಂದ್ರೆ ನಾನೇನಾದ್ರೂ ಹೇಳಿದ್ನ ಕೆಡುಸ್ಕೊಳೋಕೆ. ಇವ್ರ್ ತಿನ್ನೋ ಆಸೆಗ್ ಕಡಿವಾಣ ಹಾಕಕಾಗ್ದೆ ಹಾಳು ಮೂಳೆಲ್ಲ ತಿಂದು ಚೆನ್ನಾಗಿದಿದ್ ನನ್ ಆರೋಗ್ಯನು ಕೆಡುಸ್ತಾರಪ್ಪ.

ಒಂದಷ್ಟ್ ಮಂದಿ ಚೆಂದ ಮ್ಯೆಂಟೇನ್ ಮಾಡಿ ನನ್ನುನ್ನೂ ಚೆಂದ ಇರೋ ಹಾಗೆ ನೋಡ್ಕೊಳ್ತಾರೆ. ಆಗ ಒಂದೊಂದ್ ಬಟ್ಟೆ ಹಾಕ್ದಾಗ್ಲು ನಾನೂ ಎಷ್ಟ್ ಚೆನಾಗ್  ಕಾಣ್ತಿದಿನಲ ಅಂತ ನಂಗು ಖುಷಿ ಆಗುತ್ತೆ. ಮತ್ತೆ ಮತ್ತೆ ಕನ್ನಡೀಲಿ ನನ್ನುನ್ನ ನೋಡ್ಕೊಳ್ಬೇಕು ಅನ್ಸುತ್ತೆ. ಆದ್ರೆ ಯಾರತ್ರ ಹೇಳ್ಲಿ. ಇನ್ನು ಕೆಲೌರು ಅಡ್ಡಾದಿಡ್ಡಿ ನನ್ನುನ್ ಬೆಳ್ಯೋಕ್ ಬಿಟ್ಟು ಈಗ ಈ ಹೊಟ್ಟೆಂದ ಯಾವ್ ಬಟ್ಟೇನು ಸರ್ಯಗಾಗಲ್ಲಾಂತ ನನ್ ಮೇಲೆ ಗೂಬೆ ಕೂರುಸ್ತಾರೆ. ಕೆಲವ್ಸಲ ಬಟನ್ ಹಾಕ್ಕೊಳ್ಳಕಾಗ್ದೆ  ಒದ್ದಾಡ್ತಾರೆ. ಒಂದ್ವೇಳೆ ಕಷ್ಟಪಟ್ ಬಟನ್ ಹಾಕೊಂಡ್ರೂ ಅದು ಒತ್ತಡ ತಡ್ಯಕಾಗ್ದೆ ಬಿಚ್ಕೊಂಡ್ ಹೋದ್ರೆ, ಹೋದಲ್ಲೆಲ್ಲ ನನ್ ಮರ್ಯಾದಿ ತೆಗೀತ್ಯ ಅಂತ ಅದ್ಕೂ ನನ್ನೇ  ಬೈತಾರೆ. ಯೋಗ, ವ್ಯಾಯಾಮ, ವಾಕಿಂಗು ಮಾಡ್ಕೊಂಡು ಸಮಯಕ್ಕೆ ಸರಿಯಾಗಿ ನಂಗೂ ಆರೋಗ್ಯಕರವಾದ ಆಹಾರ ಕೊಟ್ರೆ ನಾನ್ಯಾಕ್ ಹಾಗ್ ಬೆಳೀತೀನಿ, ನೀವೇ ಹೇಳಿ. ಒಂದ್ ಗಿಡ ಸರ್ಯಾಗ್ ಬೆಳೀಬೇಕಾದ್ರು ಒಳ್ಳೆ ಮಣ್ಣು, ಗೊಬ್ರ, ನೀರು, ಗಾಳಿ,  ಬೆಳಕು, ಬಿಸಿಲು, ಜಾಗ ಎಲ್ಲಾ ಬೇಕಾದಂತೆ ನಂಗೂ ಅಲ್ವಾ.


ನಂಗೂ ಬ್ಯಾಲೆನ್ಸ್ಡ್ ಆಗಿ ಎಲ್ಲಾನು ಕೊಟ್ರೆ ನಾನೂ ಚೆನ್ನಾಗೆ ಕಾಣ್ತೀನಿ. ಅಲ್ಲಾ ಇವ್ರಿಗೆಲ್ಲ ಏನಾಗಿದೆ ಅಂತ. ಹೊಸವರ್ಷ ಬಂದ್ತಕ್ಷಣ ಅದೆಲ್ಲಿಂದ ಬರುತ್ತೋ ಜೋಶು. ರಾತ್ರಿ ಹನ್ನೆರಡ್ ಗಂಟೆ ತಂಕಾನು ಕುಡ್ದು/ತಿಂದು ಪಾರ್ಟಿ ಮಾಡಿ, ಬೆಳಿಗ್ಗೆಂದ ಜಾಗಿಂಗ್, ಡಯಟ್ ಅಂತ ನನ್ ಜೀವ ಹಿಂಡ್ತಾರೆ. ನಂಜೊತೆಗೆ ಎಲ್ರಿಗೂ ಕಷ್ಟ ಕೊಡ್ತಾರೆ ಅಂದ್ರೆ ನೀವ್ ನಂಬ್ಲೇಬೇಕು.

ಪಾಪ, ಆ ನಾಲ್ಗೆಗಂತು ಬೇಕಾದಾಗ ಬೇಕಾಗಿದ್ ಸಿಗದೇ ಇಲ್ಲ. ಕಣ್ಮುಂದೆ ರುಚಿರುಚಿಯಾಗೆಲ್ಲಾ ಇದ್ರು ತಿನ್ನಕಾಗಲ್ಲ. ಕಹಿ, ಹುಳಿ , ಸಪ್ಪೆ ಅಂತ ಖಾಯ್ಲೆಯೌರ್ತರ

ನನ್ನುನ್ ಕೆಡುಸ್ತಾರೆ. ಬಾಯಲ್  ನೀರ್ ಬರ್ತಿದ್ರೂ ಅದುನ್ನೇ ನುಂಗ್ಕೋಬೇಕಪ್ಪೆ. ಒಂದೊಂದ್ಸಲ ಅಂತೂ ಇವ್ರ್ ಬಾಯ್ ಚಪ್ಲಕ್ಕೆ ತುರುಕ್ತಾರೆ ತುರುಕ್ತಾರೆ ಅಂದ್ರೆ... ನಂಗಿನ್ನೂ ಅದ್ರು ಸವಿ ಸವ್ಯಕೇ ಬಿಡಲ್ಲ, ಅಷ್ಟು ಅರ್ಜೆಂಟು. ನಂಗೂ ಉಸ್ರು ಕಟ್ಟುತ್ತೆ, ಏನ್ ಮಾಡದು ಅಂತ ಅದೂ ತನ್ನಳಲುನ್ನ ನನ್ನತ್ರ ತೋಡ್ಕಳುತ್ತೆ. ನನ್ ಬೇಜಾರಲ್ಲೂ ಅದ್ಕೂ ಸಮಾಧಾನ ಮಾಡ್ತೀನಿ. ಎಷ್ಟಂದ್ರು ನಾವೆಲ್ಲ ಒಂದೇ ದಾರೀಲ್ ಸಾಗೋರಲ್ವಾ.

ಇನ್ನು ಕಾಲಿನ್ ಕಷ್ಟ ಅಂತೂ ಕೇಳ್ಲೇ ಬೇಡಿ. ನಿನ್ ಭಾರ ಹೊತ್ತೂ ಹೊತ್ತೂ ನಂಗೆಷ್ಟ್ ನೋವಾಗ್ತಿದೆ ಗೊತ್ತಾ. ಅದ್ರು  ಜೊತೆಗೆ ಗಂಟೆಗಟ್ಲೆ ನಡ್ಯದು, ವ್ಯಾಯಾಮ ಬೇರೆ. ಕುಸುದ್ ಬೀಳೋ ಅಷ್ಟು ಬಸವಳುದ್ ಬಿಟ್ಟಿದೀನಿ. ತೂಕ ಕಡ್ಮೆ ಮಾಡ್ಕ ಅಂತ ನಿಂಗೂ ಹೇಳಿ ಹೇಳಿ ಸಾಕಾಯ್ತು ಅಂತ ನನ್ಮೇಲು ಅದು ಅಸಹನೆ ತೋರ್ಸುತ್ತೆ. ನಾನೇನ್ ಮಾಡ್ಲಿ, ಅದ್ಯಾವ್ದು ನನ್ಕೈಲಿಲ್ಲ ಅಂದ್ರೆ ಅದ್ಕೆ ಅರ್ಥಾನೆ ಆಗಲ್ಲ. ಸ್ವಲ್ಪನಾದ್ರು ಅರ್ಥಮಾಡ್ಕೋಬೇಕಪ್ಪ, ಈಗ ನಾಲ್ಗೆ ಹೇಳಿದ್ದುನ್ನ ನಾನ್ ಅರ್ಥ ಮಾಡ್ಕಂಡು ಅನುಕಂಪ ತೋರ್ಸಲ್ವಾ ಹಂಗೆ.

ಏನೋ ಒಟ್ನಲ್ಲಿ ಇವ್ರಗ್ಳ್ ಮಾಡೋ ದಿನಕ್ಕೊಂದೊಂದ್ ಅವ್ತಾರ ನನ್ನ ಆಕಾರನೆಲ್ಲ ಕೆಡ್ಸಿ, ನಂಗ್ ಭಾಳ ಅವ್ಮಾನ ಆಗುತ್ತಪ್ಪ. ನನ್ಗೋಳ್ ಕೇಳೋರು ಯಾರೂ ಇಲ್ಲಾಂತ ಗೊತ್ತು. ಆದ್ರೂ ಕೊನೇದಾಗಿ ಒಂದ್ ಮಾತ್ ಹೇಳ್ತೀನಿ ಕೇಳಿ. ನಿಮ್ಮನೇಲಿ ಒಂದ್ ಚೀಲಕ್ಕೆ ಒಂದಿಷ್ಟ್ ಅಕ್ಕಿ ತುಂಬಿದ್ರೆ ಓಕೆ. ಇನ್ನೂ ಹಿಡ್ಸುತ್ತೆ, ಇನ್ನೂ ಹಿಡ್ಸುತ್ತೆ ಅಂತ ಮತ್ತೆ ಮತ್ತೆ ನೀವ್ ತುರುಕ್ದಾಗ ಅದ್ಯಾವ್ದಾದ್ರು ಒಂದ್ ಕಡೆಂದ ಹೊರ್ಗಡೆ ಚೆಲ್ಲುತ್ತೆ. ಮೇಲ್ಗಡೆಂದ ಆದ್ರೂ ಸರಿ ಅಥ್ವಾ ಬುಡ (ತಳ) ಹರ್ಕೊಂಡಾದ್ರು ಸರಿ. ಅದೇ ತರ, ನಾನೂ....



■

# ಕವಿಗೋಷ್ಠಿ ಅಧ್ಯಕ್ಷತೆ

ಸುಮಾ ರಮೇಶ್

" ಹಲೋ... ಸುಪ್ರಸಿದ್ಧ ಸಾಹಿತಿ ಪಂಕಜಾ ಪ್ರತಾಪ್ ಅವ್ರಾ....?"

" ಹೌದು....ನಾನೇ ಪಂಕಜಾ... ದೊಡ್ಡ ಸಾಹಿತಿ ಅಂತಾ ಏನಿಲ್ಲ, ಏನೋ ಚೂರು ಪಾರು ಬರೀತೀನಿ..."

"ಸಾಕು ಮೇಡಂ.... ಅಷ್ಟು ಬರೆದ್ರೆ ಸಾಕು... ನಾವು ನಮ್ಮ ಸಾಹಿತ್ಯ ವೇದಿಕೆಯಿಂದ ದಸರಾ ಕವಿಗೋಷ್ಠಿ ಹಮ್ಮಿಕೊಂಡಿದೀವಿ. ನೀವೇ ಅದಕ್ಕೆ ಅಧ್ಯಕ್ಷೆಯಾಗಿ ಬರ್ಬೇಕು....."

"ಕವಿಗೋಷ್ಠಿ ಅಧ್ಯಕ್ಷತೆನಾ...!? ನಾನು ಪದ್ಯ ಬರಿಯೋದೇ ಇಲ್ಲ.... ಬರೀ ಗದ್ಯ ಮಾತ್ರ ಬರಿಯೋದು..."

"ಮೇಡಂ, ಕವಿಗೋಷ್ಠಿ ಅಧ್ಯಕ್ಷತೆ ವಹಿಸೋಕೆ ಪದ್ಯ ಬರೀಬೇಕು ಅಂತ ಏನೂ ಇಲ್ಲ..."

ಅವರ ಮಾತಿಗೆ ತಲೆ ಧಿಮ್ಮೆಂದಿತು. ವೇದಿಕೆಯಲ್ಲಿ ಕುಳಿತುಕೊಳ್ಳುವುದಕ್ಕಿಂತ ಅದರ ಮುಂಭಾಗದಲ್ಲಿ ಕುಳಿತುಕೊಳ್ಳುವುದರಲ್ಲೇ ಹೆಚ್ಚು ಸುಖ ಕಂಡವಳು ನಾನು. ವೇದಿಕೆಯಲ್ಲಿ ಕುಳಿತರೆ ಆಕಳಿಸುವಂತಿಲ್ಲ, ತೂಕಡಿಸುವಂತಿಲ್ಲ, ತುರಿಸಿಕೊಳ್ಳುವಂತಿಲ್ಲ, ಬೇಕಾದಾಗ ಕಳಚಿಕೊಳ್ಳುವಂತೆಯೂ ಇಲ್ಲ. ಬೇಸರವಾಯಿತೆಂದು ಬಿಲ್ಲಿನಂತೆ ದೇಹವನ್ನು ಜಾರಿಸುವುದು, ಸೊಂಟ ನೋವು, ಮಂಡಿನೋವು ಎಂದು ಅತ್ತಿತ್ತ ನುಲಿಯುವುದು, ಕೈಕಾಲುಗಳನ್ನು ಚಾಚುವುದು, ಚಿಮ್ಮುವುದು ಇವೆಲ್ಲಾ ಮೊದಲೇ ನಿಷಿದ್ಧ. ಶಾಲು ಹೊದ್ದು ಸನ್ಮಾನಿಸಿಕೊಳ್ಳಲು ಇಷ್ಟೆಲ್ಲಾ ಪ್ರಯಾಸ ಪಡಬೇಕಾ ಎನಿಸುವುದಿದೆ....! ಅದರಲ್ಲೂ ಈ ಕವಿತೆಗಳು ಸುಲಭವಾಗಿ ನನ್ನ ಮಂಡೆಯೊಳಗೆ ತೂರಲೊಲ್ಲದೆ ಮಂಡಿಯೂರಿ ಕುಳಿತದ್ದೇ ಹೆಚ್ಚು. ಹತ್ತು ಬಾರಿ ಓದಿದರೂ ಅದರ ಸಾರ, ಭಾವ ದಕ್ಕಿಸಿಕೊಳ್ಳಲು ತಿಣುಕುವ ನನಗೆ ಮೈಕಿನೆದುರು ಒಂದೆರಡು ನಿಮಿಷಗಳ ಕಾಲಾವಧಿಯಲ್ಲಿ ವಾಚಿಸುವ ಕವಿಪುಂಗವರ ಕವನವನ್ನು ಆಲಿಸಿ ನನ್ನ ವಿಮರ್ಶಾ ಪುಂಗಿಯ ನಾದ ಹೊರಡಿಸಲು ಸಾಧ್ಯವೇ? ನುಣುಚಿಕೊಳ್ಳಲು ದಾರಿ ಹುಡುಕತೊಡಗಿದೆ.

"ಮೇಡಂ....ಈಗಾಗಲೇ ಇಪ್ಪತ್ತು ಕವಿಗಳು ಕವನ ವಾಚಿಸಲು ಸಿದ್ಧರಾಗಿದ್ದಾರೆ..."

"ಸಾರಿ ಸರ್....ನೀವು ಬೇರೆ ವ್ಯವಸ್ಥೆ ಮಾಡ್ಕೊಳ್ಳಿ...ನನಗೆ ಸಮಯದ ಅಭಾವವಿದೆ"

" ಹಾಗಂದ್ರೆ ಹೇಗೆ... ಮೇಡಂ ? ನೀವು ಬರ್ತೀರಾ ಅಂತ ಆಗಲೇ ಆಹ್ವಾನ ಪತ್ರಿಕೆ ರೆಡಿ ಮಾಡ್ತಾ ಇದೀವಿ. ಇಪ್ಪತ್ತು ಕವನಗಳನ್ನೂ ಮೊದಲೇ ನಿಮ್ಗೆ ವಾಟ್ಸಾಪ್ ಮಾಡ್ತೀವಿ. ನೀವು ನಿಧಾನವಾಗಿ ಓದಿ ಎಲ್ಲಾ ಕವಿತೆಗಳ ಬಗ್ಗೆ ಎರಡೆರಡು ಸಾಲು ಬರ್ಕೊಂಡ್ಬಂದು ಓದಿದ್ರೆ ಸಾಕು..."

ಈ ಪ್ರಪೋಸಲ್ ಓಕೆ ಎನಿಸಿತು. ಏನೋ ನಾಲ್ಕು ಸಾಲು ಗೀಚಿರುವ ನನಗೂ ಸಾಹಿತಿಯ ಪಟ್ಟ ಕೊಟ್ಟು ಆಹ್ವಾನಿಸುತ್ತಿರುವರು. ಹೋಗಬಾರದೇಕೆ...? ಮನ ಚಂಚಲಗೊಂಡಿತು.

"ತುಂಬಾ ಲೇಟ್ ಆಗೋದಾದ್ರೆ ಕಷ್ಟ ಆಗುತ್ತೆ... ಬೇರೆ ಬೇರೆ ಪ್ರೋಗ್ರಾಮ್ಸ್ ಇರುತ್ತೆ..." ಹುಸಿ ಬೇಡಿಕೆಯ ಮುಖವಾಡ ತೋರಿದೆ.

"ಇಲ್ಲ ಮೇಡಂ.... ಉದ್ಘಾಟನೆ ಆದ ಕೂಡಲೇ ಕವಿಗೋಷ್ಠಿ....ಬೇಗ ಕಳಿಸಿ ಕೊಡ್ತೀವಿ"

ಒಪ್ಪಿಗೆ ಸೂಚಿಸಿದ ಅರ್ಧ ಗಂಟೆಯೊಳಗೆ ಟಣ್... ಟಣ್... ಸದ್ದಿನೊಂದಿಗೆ ಇಪ್ಪತ್ತು ಉದಯೋನ್ಮುಖ ಕವಿ ಕವಯಿತ್ರಿಯರ ಕವಿತೆಗಳು ನನ್ನ ವಾಟ್ಸಾಪಿನಲ್ಲಿ ಬಂದು ಕುಳಿತವು.

ಮರುದಿನವೇ ಮತ್ತೊಮ್ಮೆ ಸದ್ದು ಮಾಡುತ್ತಾ ಬಂದು ತಲುಪಿದ ಆಹ್ವಾನ ಪತ್ರಿ(ಪುಸ್ತಿ)ಕೆಯನ್ನು ಕಂಡು ಹೌಹಾರಿದೆ. ಬೆಳಗ್ಗೆ ಹತ್ತರಿಂದ ಸಂಜೆ ಐದರವರೆಗೂ ಹತ್ತಾರು ಕಾರ್ಯಕ್ರಮಗಳು. ಪ್ರತೀ ಕಾರ್ಯಕ್ರಮಕ್ಕೂ ಒಬ್ಬೊಬ್ಬರ ಅಧ್ಯಕ್ಷತೆ. ಉದ್ಘಾಟನೆ, ಗೀತಗಾಯನ, ನೃತ್ಯ, ಕವಿಗೋಷ್ಠಿ, ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ...." ಹೀಗೆ ಐದಾರು ಪುಟಗಳ ಆ ಪತ್ರಿಕೆಯ ಯಾವುದೋ ಒಂದು ಮೂಲೆಯಲ್ಲಿ ಪಂಕಜಾ ಪ್ರತಾಪ್, ಕವಿಗೋಷ್ಠಿ ಅಧ್ಯಕ್ಷತೆ ಎಂಬ ನಾಲ್ಕು ಪದಗಳು ಉಸಿರು ಕಟ್ಟಿ ನರಳುತ್ತಿದ್ದವು.

ನಿಗದಿತ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಕ್ಕೆ ಹಾಜರಾದೆ. ಆಯೋಜಕರು ಖುಷಿಯಿಂದ ಸ್ವಾಗತಿಸಿದರು.

"ನೋಡಿ ಮೇಡಂ.... ಒಬ್ರಿಗೂ ಟೈಮ್ ಸೆನ್ಸ್ ಅನ್ನೋದೇ ಇಲ್ಲ. ಈ ಸೆಲಿಬ್ರಿಟಿಗಳದ್ದು ಇದೇ ಹಣೇಬರಹ. ಅದಕ್ಕೇ ನಾವು ನಿಮ್ಮಂತವ್ರು ಇರ್ಲಿ ಎಂದು ಆಹ್ವಾನಿಸೋದು..." ಎನ್ನುತ್ತಾ ನನ್ನ ಸಮಯಪಾಲನೆಯನ್ನು ಬೇರೆಯದೇ ರೀತಿಯಲ್ಲಿ ಅರ್ಥೈಸಿದರು. ನಾನು ಸ್ಟ್ಯಾಂಡ್ ಬೈ ನಂತೆ ಒಂದೆಡೆ ಕುಳಿತೆ.

ಇನ್ನು ಕೆಲವೇ ನಿಮಿಷಗಳಲ್ಲಿ ಗಣ್ಯರು ಆಗಮಿಸುವರು.... ಕಾರ್ಯಕ್ರಮ ಆರಂಭವಾಗುವುದು ಎನ್ನುತ್ತಾ ನಿರೂಪಕ ಐದೈದು ನಿಮಿಷಗಳ ಅಂತರದಲ್ಲಿ ಐದು ಬಾರಿ ಹೇಳಿದ. ನಾನು ಬೇಗನೇ ಬಂದ ಪ್ರಯುಕ್ತ ಗಣ್ಯರ ಪಟ್ಟಿಯಿಂದ ಹೊರಗುಳಿದಿದ್ದೆ.

ಕಾರ್ಯಕ್ರಮ ಪ್ರಾರಂಭವಾಯಿತು. ಗಣ್ಯರನ್ನು ವೇದಿಕೆಗೆ ಆಹ್ವಾನಿಸಿ ಸ್ವಾಗತಿಸಿದರು. ನಾನೂ ಅವರ ನಡುವೆ (ನ)ಗಣ್ಯೆಯಾಗಿ ವೇದಿಕೆಯನ್ನು ಅಲಂಕರಿಸಿದ್ದೆ. ಉದ್ಘಾಟನೆ, ಅತಿಥಿಗಳ ಭಾಷಣದ ನಡುವೆ ಗೀತಗಾಯನ, ನೃತ್ಯ ಪ್ರದರ್ಶನ ನಡೆಯುತ್ತಿತ್ತು. ನೃತ್ಯ ಮಾಡಲು ವೇದಿಕೆ ಇಕ್ಕಟ್ಟಾಗಿ ಅತಿಥಿಗಳನ್ನು ಆಗಾಗ ವೇದಿಕೆಯಿಂದ ಕೆಳಗಿಳಿಸಿ ಮುಂದಿನ ಸಾಲಿನಲ್ಲಿ ಕೂರಿಸುವ, ಪುನಃ ವೇದಿಕೆಗೆ ಕರೆತರುವ ಸರ್ಕಸ್ ನಡೆಯಿತು. ಈ ಮಧ್ಯೆ ತುರ್ತು ಕೆಲಸ ಎನ್ನುತ್ತಾ ಕೆಲವು ಗಣ್ಯರು ತುರ್ತು ವಂದನೆ ಸ್ವೀಕರಿಸಿ ಶಾಲು ಹೊದ್ದು ಕಳಚಿಕೊಂಡರು. ನಾನು ಅತ್ತಿತ್ತ ಅಡ್ಡಾಡುತ್ತಿದ್ದ ಆಯೋಜಕರೆಡೆಗೆ ನೋಡುತ್ತಾ ಕವಿಗೋಷ್ಠಿ ಯಾವಾಗ ಎಂದು ಕೈಸನ್ನೆಯ ಮೂಲಕ ಕೇಳುತ್ತಿದ್ದೆ. ಆತ ತನ್ನ ತೋರ್ಬೆರಳಿನ ಮೇಲಿನ ಕಾಲು ಭಾಗದ ಡಿವೈಡರ್ (ಗೀರಿ)ಗೆ ಹೆಬ್ಬೆರಳಿರಿಸಿ ಒಂದೇ ಒಂದು ನಿಮಿಷ ಎಂಬಂತೆ ಬೆನ್ನು ಬಗ್ಗಿಸಿ ವಿನಂತಿಸುತ್ತಿದ್ದ.

ಸಮಯ ಸರಿಯುತ್ತಾ ಹೋದಂತೆ ಮಧ್ಯಾಹ್ನದ ಕಾರ್ಯಕ್ರಮಗಳ ಅತಿಥಿಗಳೂ ಆಗಮಿಸಿದರು. ಬೆಳಗಿನ ಅತಿಥಿಗಳು ತುರ್ತು ನೆಪ ಒಡ್ಡಿ ಒಬ್ಬೊಬ್ಬರೇ ಗಡಿಬಿಡಿಯಲ್ಲಿ ಪ್ರತ್ಯೇಕ ವಂದನೆ ಸ್ವೀಕರಿಸಿ ಖಾಲಿಯಾಗಿದ್ದರು. ನನ್ನ ಎರಡೂ ಬದಿ ತೆರವುಗೊಂಡಿದ್ದ ಸ್ಥಾನಗಳನ್ನು ತುಂಬಲು ಹೊಸ ಅತಿಥಿಗಳನ್ನು ಆಹ್ವಾನಿಸಲಾಯಿತು. ಕಾರ್ಯಕ್ರಮಗಳು, ಅತಿಥಿಗಳು ಬದಲಾದರೂ ನಾನೊಬ್ಬಳು ಯೂನಿವರ್ಸಲ್ ಸಾಲ್ವೆಂಟ್ ನಂತೆ ಎಲ್ಲರೊಂದಿಗೂ ಬೆರೆತು ವೇದಿಕೆಯಲ್ಲೇ ಕುಳಿತಿದ್ದೆ. ಈ ಮಧ್ಯೆ ಮೈಕು, ಹಾಲು, ಶಾಲುಗಳ ಪ್ರಾಯೋಜಕರನ್ನೂ, ಸಾಧಕರನ್ನೂ ಸಾಲಾಗಿ ಕುಳ್ಳಿರಿಸಿ ಶಾಲು ಹೊದೆಸುವ ಪ್ರಹಸನ

ನಡೆಯಿತು. ಎಲ್ಲರ ಕುತ್ತಿಗೆಗೂ ಸರ ಏರಿಸಿ, ಸ್ಮರಣಿಕೆ ನೀಡಿ ನನ್ನ ಕೈಗಳು ಬಳಲಿದವು. ಆ ಪಟಗಳಿಗೆಲ್ಲಾ ಪೋಸ್ ಕೊಟ್ಟು.... ಮುಗುಳ್ನಕ್ಕು ದಣಿದ ನನ್ನ ಮಾರಿಯ ಮಸಲ್ ಗಳು ಇನ್ನು ಮೂವ್ ಆಗೆವು ಎಂದು ಮುನಿದು ಕುಳಿತಿದ್ದವು. ತಡವಾಯಿತೆಂದು ಲಘು ಉಪಹಾರಕ್ಕೆ ಆಹ್ವಾನಿಸಲಾಯಿತು. ಹೊಟ್ಟೆಗೊಂದಿಷ್ಟು ಇಂಧನ ದೊರೆತ ನಂತರ ಕೊಂಚ ಚೈತನ್ಯ ಮೂಡಿತು.

ಮಧ್ಯಾಹ್ನ ಕವಿಗೋಷ್ಠಿ ಪ್ರಾರಂಭವಾಯಿತು. ಕವನ ವಾಚಿಸುವವರ ಹೆಸರು ನಾನು ಕೊಂಡೊಯ್ದ ಚೀಟಿಯಲ್ಲಿ ಶಫಲ್ ಆಗಿ ಅದನ್ನು ಹುಡುಕುವಷ್ಟರಲ್ಲಿ ವಾಚನವೇ ಮುಗಿದಿರುತ್ತಿತ್ತು. ವಧು ಪರೀಕ್ಷೆಗೆ ತಂಗಿಯನ್ನು ತೋರಿಸಿ ಹಸೆಮಣೆಗೆ ಅಕ್ಕನನ್ನು ಕರೆತಂದಂತೆ ಹಲವು ಭೂಪರು ಮುಂಚಿತವಾಗಿ ಕಳಿಸಿದ ಕವನವೇ ಒಂದು, ವಾಚಿಸಿದ್ದೇ ಮತ್ತೊಂದು. ಬಾರದವರ ಜಾಗದಲ್ಲಿ ಹೊಸ(ಪ್ರಾಕ್ಸಿ) ಕವಿಗಳು ಬಂದು ಕವನ ವಾಚಿಸಿದರು. ಕೆಲವರು ರಾಗವಾಗಿ ಹಾಡಿದರು. ಅ ಕಾರ, ಹ ಕಾರ, ಮಹಾ ಪ್ರಾಣಗಳು ಉಸಿರು ಕಟ್ಟಿ ಅಸು ನೀಗಿದವು. ಶಾಲು, ಸ್ಮರಣಿಕೆ, ಮಣಿಸರಗಳು ಕವಿಪುಂಗವರ ಮೇಲೇರಿ ಮುಗುಳ್ನಕ್ಕವು. ನಿರೂಪಕ ಮೈಕಿನ ಬಳಿ ಸಾಗಿದಂತೆ ನಾನೂ ಅಧ್ಯಕ್ಷ ಭಾಷಣಕ್ಕೆಂದು ನೆರಿಗೆ ಸರಿಪಡಿಸಿಕೊಂಡು ನೆಟ್ಟಗೆ ನಿಂತೆ. ಆಯೋಜಕ ತಟ್ಟನೆ ಪೋಡಿಯಮ್ ಬಳಿ ಸಾಗಿ ಮೈಕ್ ಕೈಗೆತ್ತಿಕೊಂಡು ಈಗ ಕಾರ್ಯಕ್ರಮದಲ್ಲಿ ಕೊಂಚ ಬದಲಾವಣೆ. ಇನ್ನು ಕೆಲವೇ ಕ್ಷಣಗಳಲ್ಲಿ ಶ್ರೇಷ್ಠ ಸಾಹಿತಿಗಳಾದ ಶಾಮಣ್ಣನವರ 'ದಸರಾ ವೈಭವ' ಕೃತಿ ಬಿಡುಗಡೆ ಎನ್ನುತ್ತಾ ನನ್ನೆಡೆಗೆ ತಿರುಗಿ ಅದೇ ತೋರ್ಬೆರಳಿನ 'ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ....' ಮನವಿ ಮಾಡಿದರು. ಇನ್ನಷ್ಟು ಹೊಸ ಅತಿಥಿಗಳೊಂದಿಗೆ ನಾನೂ ಪೋಲೀಸ್ ಠಾಣೆಯಲ್ಲಿ ಸ್ಲೇಟು ಹಿಡಿದು ನಿಲ್ಲುವ ಅಪರಾಧಿಯಂತೆ ಆಗಷ್ಟೇ ಬಿಡುಗಡೆಯಾದ ಪುಸ್ತಕ ಕೈಲಿಡಿದು ಜೋಲು ಮೋರೆಯ ಪೋಸ್ ನಲ್ಲಿ ನಿಂತೆ. ಚಪ್ಪಾಳೆಯ ಗಟ್ಟಿಮೇಳದೊಂದಿಗೆ ಹಲವು ಮೊಬೈಲುಗಳು ಮೇಲೆದ್ದು ಕ್ಲಿಕ್ ಕ್ಲಿಕ್ ಗೈದವು. ಕೃತಿ ಪರಿಚಯ ಆರಂಭವಾಯಿತು. ಸಮಯವಾಗಲೇ ನಾಲ್ಕು ದಾಟಿತ್ತು. ನಿರೂಪಕ' ನೆಕ್ಸ್ಟ್ ನಿಮ್ದೇ ಮೇಡಂ... ' ಎಂದು ಬೆಳಗಿನಿಂದಲೂ ಹತ್ತು ಬಾರಿ ನನ್ನೆಡೆಗೆ ತಿರುಗಿ ಕೈಸನ್ನೆ ಮಾಡಿ ನನ್ನನ್ನು ಸಮಾಧಾನಿಸಲು ಪ್ರಯತ್ನಿಸಿ ದಣಿದಿದ್ದ. ಈಗ ಹನ್ನೊಂದನೆಯ ಬಾರಿಯೂ ಅದರದ್ದೇ ಮುಂದುವರಿಕೆ.....!

ಲಘು ಉಪಾಹಾರದ ನಂತರ ಪ್ರೇಕ್ಷಕ ಸಮೂಹವೂ ಬದಲಾಗಿತ್ತು. ನಾನೂ ಬೆಳಗಿನಿಂದ ಹಲವು ಅತಿಥಿಗಳನ್ನು ಅಕ್ಕಪಕ್ಕದ ಚೇರುಗಳಿಗೆ ಸ್ವಾಗತಿಸಿ, ಬೀಳ್ಕೊಟ್ಟು ಎಲ್ಲರೊಳಗೊಂದಾಗು ಮಂಕುತಿಮ್ಮ ಎಂಬಂತೆ ಬೆರೆತು, ಕಲೆತು, ದಣಿದು, ಉತ್ಸಾಹ ಕಳೆದುಕೊಂಡು ನನ್ನ ಭಾಷಣಕ್ಕಾಗಿ ನಾನೇ ಎದುರುನೋಡುತ್ತಾ ಮಂಕಾಗಿ ಕುಳಿತಿದ್ದೆ. ■

**ಅಂತರ್ಗತ (ಮಿಂಚಿಕೆ)**

ಆಫೀಸು
ಎನ್ನುವುದರಲ್ಲೇ
ಫೀಸು
ಸೇರಿಕೊಂಡಿರುವುದು
'ಅರ್ಥ'
ಪೂರ್ಣವಲ್ಲವೇ

–ಕೆ.ಎಸ್. ನಿಸಾರ್ ಅಹಮದ್

# ಇವರು ಯಾರು ಬಲ್ಲೆಯೇನು, ಇವರ ಹೆಸರ ಹೇಳಲೇನು

**ನಳಿನಿ ಟಿ. ಭೀಮಪ್ಪ**

ಇನ್ಮೇಲೆ ಸ್ವಲ್ಪ ಮಿದುಳನ್ನು ಚುರುಕು ಮಾಡಿಕೊಳ್ಳೋಣ ಅಂತಿದೀನಿ ನೋಡಿ. ಯಾವ ವಿಷಯವೂ ನೆನಪಿರುವುದಿಲ್ಲ. ಮಾಡಬೇಕೆಂದಿರುವ ಕೆಲಸಗಳನ್ನು ನೆನಪಾದಾಗಲೆಲ್ಲ ಮೊಬೈಲ್‌ನ 'ನೋಟ್ಸ್' ಆಪ್‌ನಲ್ಲಿ ಬರೆದು ಸೇವ್ ಮಾಡಿಟ್ಟುಕೊಂಡರೂ, ನಂತರ ಅದನ್ನು ನೋಡುವುದೇ ಮರೆತುಹೋಗಿರುತ್ತೇನೆ. ಚೀಟಿಯಲ್ಲಿ ಬರೆದಿಟ್ಟುಕೊಂಡರೂ, ಅದನ್ನೆಲ್ಲೋ ಮಾಯಮಾಡಿರುತ್ತೇನೆ. ಬಾದಾಮಿಯನ್ನು ಪ್ರತೀದಿನ ರಾತ್ರಿ ನೀರಿನಲ್ಲಿ ನೆನೆಹಾಕಿ ಬೆಳಿಗ್ಗೆ ತಿಂದರೆ ನೆನಪಿನ ಶಕ್ತಿ ಹೆಚ್ಚುತ್ತದೆ ಎಂದು ಅಲ್ಲಿ ಇಲ್ಲಿ ಓದಿ, ಕೇಳಿ, ರಾತ್ರಿಯ ಹೊತ್ತಿಗೆ ನೆನೆಹಾಕುವುದು ಮರೆತು, ಸಮಾಧಾನಕ್ಕೆ ಒಣಬಾದಾಮಿಯನ್ನೇ ತಿಂದು ಸುಮ್ಮನಾಗುತ್ತೇನೆ.

ಮನುಷ್ಯನ ಮಿದುಳಿನ ಕಾರ್ಯವೈಖರಿಯೇ ವಿಚಿತ್ರ ಎನಿಸುತ್ತದೆ. ಏನು ನೆನಪಿಟ್ಟುಕೊಳ್ಳಬೇಕೆಂದಿರುತ್ತೇವೆಯೋ ಅದು ನೆನಪಿರುವುದಿಲ್ಲ. ಮರೆತುಬಿಡಬೇಕೆಂದ ವಿಷಯವನ್ನು ಒಣಗಿದ ಗಾಯವನ್ನು ಪದೇ ಪದೇ ಕೆರೆದು ಕೆರೆದು ಹುಣ್ಣಾಗುವಂತೆ ಮತ್ತೆ ಮತ್ತೆ ನೆನಪಿಗೆ ಬರುತ್ತಿರುತ್ತವೆ. ಇನ್ನು ಸೀದಾ ಸಾದಾ ಎನ್ನುವ ಘಟನೆಗಳಂತೂ ಮೆದುಳಿನಿಂದ ಹಾರಿಯೇ ಹೋಗಿರುತ್ತವೆ. ಅದೇ ವಿಚಿತ್ರ, ವಿಲಕ್ಷಣ ಸಂಗತಿಗಳು, ಘಟನೆಗಳು ಅಚ್ಚೊತ್ತಿದ್ದಂತೆ ನೆನಪಿರುತ್ತವೆ. ಅದರಲ್ಲೂ ಹೆಸರು ಹಾಗೂ ಮುಖ ಪರಿಚಯ ನೆನಪಿಡುವುದು ಸುಲಭವಲ್ಲ. ನಾಲ್ಕಾರು ಸಲ ಭೇಟಿಯಾಗಿದ್ದರೆ ಸ್ವಲ್ಪಮಟ್ಟಿಗೆ ಗುರುತು ಸಿಗಬಹುದು. ಒಂದೇ ರೂಪು ಹೊತ್ತಿರುವ ಅವಳಿ ಜವಳಿ ಮಕ್ಕಳನ್ನು ಅದೆಷ್ಟು ಸಲ ಭೇಟಿಯಾದರೂ, ಇಬ್ಬರ ಗುರುತು, ಹೆಸರು ಕನ್ಫ್ಯೂಸ್ ಆಗುತ್ತಲೇ ಇರುತ್ತದೆ. ಅಂಥಾದ್ದರಲ್ಲಿ ಹೆಚ್ಚುಕಡಿಮೆ ಎಲ್ಲರ ಮುಖವೂ ಒಂದೇ ಮೌಲ್ಡ್‌ನಲ್ಲಿ ಅದ್ದಿ ತೆಗೆದಿರುವಂತೆ ಕಾಣುವ ಈ ಚೈನಾ, ಜಪಾನ್, ಕೊರಿಯಾ ದೇಶದವರು, ಅದು ಹೇಗೆ ಒಬ್ಬರಿಗೊಬ್ಬರು ಗುರುತಿಸಿಕೊಳ್ಳುತ್ತಾರೋ ಎಂದು ಸದಾ ಅಚ್ಚರಿ ನನಗೆ. ಇತ್ತೀಚೆಗೆ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಭೇಟಿಯಾದ ಪ್ರಸಿದ್ಧ ಲೇಖಕರೊಬ್ಬರನ್ನು, ಪತ್ರಿಕೆಯ ಸಂಪಾದಕರೆಂದುಕೊಂಡು, ಜೊತೆಯಲ್ಲಿದ್ದ ತಂಗಿಗೆ ಅವರ ಪೂರ್ತಿ ಬಯೋಡೇಟಾ ಸಮೇತ ವಿವರ ಕೊಟ್ಟು, ಅವರನ್ನು ಪರಿಚಯಿಸಿ, ಫೋಟೋಗೆ ಆಹ್ವಾನಿಸಿ ಫೋಟೋ ಕೂಡಾ ತೆಗೆದುಕೊಂಡಿದ್ದಾಯಿತು. ಗುರುತುಹಿಡಿಯುವುದರಲ್ಲಿ ಎಲ್ಲೋ ಏನೋ ಎಡವಟ್ಟಾಗಿದೆ ಎನಿಸಿದರೂ, ಮುಖಪುಸ್ತಕದಲ್ಲಿನ ಫೋಟೋದಲ್ಲಿ ಸ್ವಲ್ಪ ಸಪೂರ ಇದ್ದಾರೆ, ಈಗ ಚೆನ್ನಾಗಿ ಮೈಕೈತುಂಬಿಕೊಂಡಿದ್ದಾರೆ ಎಂದು ನನಗೆ ನಾನೇ ಸಮಜಾಯಿಷಿ ಕೊಟ್ಟುಕೊಂಡೆ. ಪಾಪ... ಅವರು ಏನೊಂದು ಮಾತನಾಡದೇ ನಗುತ್ತಲೇ ನಮ್ಮೊಡನೆ ಪೋಸ್ ಕೊಟ್ಟರು. ಮರುದಿನ ಅವರು ಎಫ್‌ಬಿ ನಲ್ಲಿ ಅವರ ವೈಯಕ್ತಿಕ ಫೋಟೋಗಳನ್ನು ಪೋಸ್ಟ್ ಮಾಡಿದಾಗಲೇ ಗೊತ್ತಾಗಿದ್ದು. ಯಾರ ಬಳಿಯೂ ನನ್ನ ಮೂರ್ಖತನದ ಬಗ್ಗೆ ಚರ್ಚಿಸಲು ಹೋಗಲಿಲ್ಲ ಬಿಡಿ.

ಯಾರಾದರೂ ಅಪರಿಚಿತರು ಅಪರೂಪಕ್ಕೆ ಎದುರಿಗೆ ಸಿಕ್ಕು ಪರಿಚಯದ ನಗೆ ನಕ್ಕರೆ ಸಾಕು ಎದೆ ಢವಢವ ಹೊಡೆದುಕೊಳ್ಳಲು ಶುರುಮಾಡುತ್ತದೆ. ಇವರ ಹೆಸರು ಏನಿರಬಹುದು, ಎಲ್ಲಿ ನೋಡಿದ್ದೇನೆ, ಮಕ್ಕಳ ಫ್ರೆಂಡ್ ತಾಯಿ ಇರಬಹುದಾ, ಯಜಮಾನರ ಫ್ರೆಂಡ್ ಹೆಂಡತಿಯಿರಬಹುದಾ ಅಥವಾ ಮುಂದಿನ ಕ್ರಾಸ್‌ನಲ್ಲಿ ಇರುವ ಫ್ರೆಂಡ್ ನಾದಿನಿ ಇರಬಹುದಾ ಎಂದೆಲ್ಲಾ ಯೋಚಿಸುತ್ತಲೇ ಪೆಚ್ಚುನಗೆ ಬೀರುತ್ತೇನೆ. ಗಂಡ, ಮಕ್ಕಳಂತೂ

ನಿನಗೆ ತಿರುಗಾ ಮುರುಗಾ ಪರಿಚಯ ಮಾಡಿಸಿದವರನ್ನೇ ಪ್ರತೀ ಫಂಕ್ಷನ್ನಲ್ಲೂ ಪರಿಚಯ ಮಾಡಿಸಿ ಮಾಡಿಸಿ ಸಾಕಾಗಿ ಹೋಗಿದೆ, ಏನೆಂದುಕೊಳ್ಳುತ್ತಾರೆ ಅವರೆಲ್ಲ ಎಂದು ಅಲವತ್ತುಕೊಳ್ಳುತ್ತಾರೆ. ಮದುವೆ ಮುಂಜಿ ಮುಂತಾದ ಕಾರ್ಯಕ್ರಮಗಳಲ್ಲಿ ಸಿಕ್ಕ ಸಿಕ್ಕವರನ್ನು ಪರಿಚಯಿಸಿ ಸುಮ್ಮನೆ ಅವರ ಹೆಸರು, ಮಾಡುವ ಕೆಲಸ ಹೇಳಿದರೆ ಯಾರಿಗೆ ತಾನೇ ನೆನಪಿರುತ್ತದೆ ಹೇಳಿ. ಇನ್ನೂ ಅವರವರ ಹೆಂಡತಿಯರೇನಾದರೂ ಜೊತೆಗಿದ್ದರೆ ಅವರ ಸೀರೆ, ಒಡವೆ, ಬ್ಲೌಸ್ ಡಿಸೈನ್, ಮೇಕಪ್ಪನ್ನು ವಾರೆಗಣ್ಣಿನಲ್ಲಿ ಸ್ಕ್ಯಾನ್ ಮಾಡಿ ಮೆದುಳಿನಲ್ಲಿ ಮುಂದೆ ಕೊಳ್ಳಬೇಕಾದ ಪ್ಲ್ಯಾನ್ ಸ್ಕೆಚ್ ತಯಾರಾಗುತ್ತಾದ್ದರಿಂದ ಆ ಒಡವೆಯ ಒಡತಿಯ ಯಜಮಾನರು ಎಂದು ನೆನಪಿರುತ್ತದೆ. ಅವರೂ ಸಹ ಪರಿಚಯಿಸಿಕೊಳ್ಳುವಾಗ, ಮೇಡಂ, ನಾಲ್ಕೈದು ವರ್ಷದ ಕೆಳಗೆ ನಿಮ್ಮ ಮನೆಗೆ, ಮಗಳ ಮದುವೆಗೆ ಕರೆಯಲು ಬಂದಿದ್ವಿ ಅಂತಲೋ, ಎರಡು ವರ್ಷದ ಕೆಳಗೆ ಆ ಫಂಕ್ಷನ್ನಿನಲ್ಲಿ ಭೇಟಿಯಾಗಿದ್ದು ನೋಡಿ ಅಂತಲೋ ವಿವರಿಸುತ್ತಿದ್ದರೆ, ಹ್ಹೀ ಹ್ಹೀ ಹ್ಹೀ ಎಂದು ನಕ್ಕು 'ಹೌದಲ್ವಾ' ಎಂದು, ನೆನಪಿರುವವಳಂತೆ ಪೋಸ್ ಕೊಡುತ್ತೇನೆ. ನಾಲ್ಕು ದಿನದ ಹಿಂದೆ ನೋಡಿದವರೇ ನೆನಪಿರುವುದಿಲ್ಲ, ಇವರು ನಾಲ್ಕೈದು ವರ್ಷದ ಕೆಳಗಿನ ಗುರುತು ಹೇಳಿದರೆ ಹೇಗೆ ನೆನಪಿಡುವುದು ಹೇಳಿ. ಇನ್ನು ಮಕ್ಕಳನ್ನು ಪರಿಚಯ ಮಾಡಿಕೊಳ್ಳುವಾಗ 'ನಿನ್ನ ಹೆಸರು ಏನು ಪುಟ್ಟಾ, ಯಾವ ಸ್ಕೂಲು, ಯಾವ ಕ್ಲಾಸು, ನಿಮ್ಮ ಟೀಚರ್ ಹೆಸರೇನು' ಎಂದು ಕೇಳಿ, ಅದು ಹೇಳಿದ್ದನ್ನು ತಲೆಗೆ ಹಾಕಿಕೊಳ್ಳದೆ, ಮತ್ತೆ ಮುಂದಿನ ಸಲ ಸಿಕ್ಕಾಗಲೂ ಅದೇ ಪ್ರಶ್ನೆ ಕೇಳಿ ಅವುಗಳಿಗೆ ಮುಜುಗರ ಉಂಟುಮಾಡುವ ಸೀನ್‌ಗಳು ನಡೆಯುತ್ತಲೇ ಇರುತ್ತವೆ.

ಅದಕ್ಕೇ ನನ್ನ ಮಗಳು ಹೊಸ ದಾರಿ ಕಂಡುಕೊಂಡಿದ್ದಾಳೆ. ಮಮ್ಮೀ ಇವಳು ನನ್ನ ಕ್ಲಾಸ್‌ಮೇಟ್, ದಿನದ ಇಪ್ಪನಾಲ್ಕು ಗಂಟೆಯೂ ಪುಸ್ತಕ ಹಿಡಿದಿರುತ್ತಾಳೆ, ಹಾಗಾಗಿ 'ಪಡ್ಡೂ' ಎನ್ನುತ್ತೇವೆ. ಮತ್ತೊಬ್ಬಳನ್ನು ತೋರಿಸಿ, ಇವಳು ಯಾವಾಗ್ಲೂ ನೆತ್ತಿ ಮೇಲೆ ಜುಟ್ಟು ಹಾಕಿಕೊಂಡಿರುತ್ತಾಳೆ, ಹಾಗಾಗಿ 'ಜುಟ್ಲೀ' ಎನ್ನುತ್ತೇವೆ, ಇವ ಚುಟ್ಟಾ ಸಾಗರ, ಅವ ಹೇರ್‌ಬ್ಯಾಂಡ್ ಆರ್ಯ, ಎಂದೆಲ್ಲಾ ಪರಿಚಯ ಮಾಡಿಕೊಟ್ಟ ಮೇಲೆ ಅವರನ್ನು ಮರೆತರೆ ಕೇಳಿ. ಅವರ ಹೆಸರು ನೆನಪಿರದಿದ್ದರೂ, ನಿಕ್ ನೇಮ್ ಚೆನ್ನಾಗಿ ನೆನಪಿರುತ್ತದೆ.

ಗಂಡ, ಮಕ್ಕಳಂತೂ ನಿನ್ನ ಬ್ರೈನ್‌ನಲ್ಲಿ, ನೇಮ್ ಅಂಡ್ ಫೇಸ್ ಡಿಟೆಕ್ಟರ್ ಡಿಫೆಕ್ಟ್ ಇರಬೇಕು ಎಂದು ತಮಾಷೆ ಮಾಡುತ್ತಿರುತ್ತಾರೆ. ಏನು ಮಾಡೋದು ಹೇಳಿ? ನೀವೂ ಹೀಗೇನಾ??? ■

**ಆರ್ಗಾನಿಕ್.......!**

ಗುಂಡ ತನ್ನ ಮುದ್ದಿನ ಮಗನನ್ನು ಒಂದು ಒಳ್ಳೆಯ ಪ್ರತಿಷ್ಠಿತ ಶಾಲೆಗೆ ಸೇರಿಸೋಣವೆಂದು, ಆ ಶಾಲೆಯ ಮುಖ್ಯಸ್ಥರನ್ನು ಭೇಟಿ ಮಾಡಿದಾಗ, ಅವರು– ನೋಡ್ರೀ, ಸೀಟುಗಳು ಇದೆ. ಇಲ್ಲಿ ಎ.ಸಿ ಕ್ಲಾಸ್ ರೂಂ, ನಾನ್ ಎ.ಸಿ ಕ್ಲಾಸ್ ರೂಂ ಮತ್ತು ಆರ್ಗಾನಿಕ್ ಕ್ಲಾಸ್ ರೂಂ ಅಂತ ಇದೆ. ಆರ್ಗಾನಿಕ್ ಕ್ಲಾಸ್ ರೂಂಗೆ ಡಿಮಾಂಡ್ ಜಾಸ್ತಿ ಇದೆ, ದುಡ್ಡು ಜಾಸ್ತಿ ಆಗುತ್ತೆ, ಪರವಾಗಿಲ್ವಾ ? ಎಂದು ಕೇಳಿದಾಗ, ಗುಂಡ – ಪರವಾಗಿಲ್ಲ ಸಾರ್, ಮಗ ಚೆನ್ನಾಗಿ ಓದಿದರೆ ಸಾಕು ಎಂದು ಆರ್ಗಾನಿಕ್ ಕ್ಲಾಸ್ ರೂಂಗೆ ಹಣ ಕಟ್ಟಿದನು. ನನ್ನ ಮಗ ಈಗ ಎಲ್ಲಿಗೆ ಹೋಗಬೇಕು ಎಂದು ಕೇಳಿದಾಗ, ಅವರು – ಎದುರಿಗೆ ಇರುವ ಮರದ ಕೆಳಗೆ, ಜಮಖಾನೆ ಹಾಸಿದೆ, ಅಲ್ಲಿ ಹೋಗಿ ಕೂರುವುದಕ್ಕೆ ಹೇಳಿ, ಎಂದಾಗ ಗುಂಡ ದಂಗಾದನು...!

– ವಿ. ವಿಜಯೇಂದ್ರ ರಾವ್

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂನಅ**

- ✓ ದಣಿವಾಗುವ ಮುನ್ನವೇ ವಿಶ್ರಮಿಸಿಕೊಳ್ಳಲು ತೊಡಗುವವನೇ ಆಲಸಿಗ.
- ✓ ಹ್ಯೂಮನ್ಸ್ ವೋಂಟ್ ಗೆಟ್ ರಿಪ್ಲೇಸ್ಡ್ ಬೈ ಎ.ಐ. ಬಟ್ ಬೈ ಹ್ಯೂಮನ್ಸ್ ಯೂಸಿಂಗ್ ಎ.ಐ.
- ✓ ನೀವು ತೋರುವ ಅನುಕಂಪ ಅದೇ ರೀತಿಯಲ್ಲಿ ನಿಮಗೆ ವಾಪಸ್ ಸಿಗಲಾರದು. ಕೆಲವೊಮ್ಮೆ ಹೆಚ್ಚಿರಬಹುದು, ಕೆಲವೊಮ್ಮೆ ಕಡಿಮೆ ಅಥವಾ ಏನೂ ಇಲ್ಲದೆ ಇರಬಹುದು.
- ✓ ಓನ್ಲಿ ಮ್ಯಾರೀಡ್ ಪೀಪಲ್ ಕೆನ್ ಅಂಡರ್‌ಸ್ಟಾಂಡ್ ಹೌ ಯು ಕೆನ್ ಬಿ ಮಿಸರಬಲ್ ಅಂಡ್ ಹ್ಯಾಪಿ ಅಟ್ ದಿ ಸೇಮ್ ಟೈಂ.
- ✓ ಯಶಸ್ಸು ಕಾಣುವವರಿಗೂ ಕಾಣದವರಿಗೂ ದಿನದಲ್ಲಿ 24 ತಾಸುಗಳಷ್ಟೇ ಇರುತ್ತವೆ. ವ್ಯತ್ಯಾಸ ಇರುವುದು ಆ ಸಮಯವನ್ನು ಉಪಯೋಗಿಸಿಕೊಳ್ಳು ರೀತಿಯಲ್ಲಿ.
- ✓ ಲೈಫ್ ಈಸ್ ಲೈಕ್ ಎ ಕ್ಯಾಮೆರಾ. ಫೋಕಸ್ ಆನ್ ವಾಟ್ ಈಸ್ ಇಂಪಾರ್ಟೆಂಟ್, ಕ್ಯಾಪ್ಚರ್ ದಿ ಗುಡ್ ಟೈಂಸ್, ಡೆವಲಪ್ ಫ್ರಂ ನೆಗಟಿವ್ಸ್ ಅಂಡ್ ಇಫ್ ಥಿಂಗ್ಸ್ ಡೋಂಟ್ ವರ್ಕ್ ಔಟ್ ಟೇಕ್ ಅನದರ್ ಶಾಟ್.
- ✓ ಒಂದು ಯಂತ್ರದ ಎಲ್ಲ ಭಾಗಗಳನ್ನು ನಿಧಾನವಾಗಿ ಬದಲಾಯಿಸಿದರೆ ಅದು ಅದೇ ಯಂತ್ರವಾಗಿಯೇ ಉಳಿಯುವುದೆ?
- ✓ ವಿ ನೆವರ್ ರೀಯಲಿ ಗ್ರೋಅಪ್. ವಿ ಓನ್ಲಿ ಲರ್ನ್ ಟು ಹೌ ಟು ಆ್ಯಕ್ಟ್ ಇನ್ ಪಬ್ಲಿಕ್.
- ✓ ನಿಮ್ಮಿಂದ ನೀವೇ ಹೆಚ್ಚು ನಿರೀಕ್ಷಿಸಿ. ಬೇರೆಯವರಿಂದ ನಿರೀಕ್ಷಿಸಿದಾಗ ನಿರಾಶೆಯಾಗಬಹುದು ಆದರೆ ನಿಮ್ಮಿಂದಲೇ ಆಗಿದ್ದರೆ ಅದು ನಿಮ್ಮನ್ನು ಇನ್ನಷ್ಟು ಪ್ರೇರೇಪಿಸಬಹುದು.
- ✓ ಗುಡ್ ರಿಲೇಷನ್ಸ್ ಆರ್ ಲೈಕ್ ನೀಡಲ್ಸ್ ಆಫ್ ಎ ಕ್ಲಾಕ್. ದೆ ಓನ್ಲಿ ಮೀಟ್ ಸಂಟೈಂಸ್ ಬಟ್ ಆಲ್ವೇಸ್ ಸ್ಟೆ ಕನೆಕ್ಟ್‌ಡ್.
- ✓ ಬದಲಾವಣೆ ನೋವು ಕೊಡದು. ಅದನ್ನು ಪ್ರತಿರೋಧಿಸುವುದು ನೋವು ತರುತ್ತದೆ.
- ✓ ಥಿಂಕಿಂಗ್ ಈಸ್ ಡಿಫಿಕಲ್ಟ್. ದಟ್ಸ್ ವೈ ಪೀಪಲ್ ಜಡ್ಜ್.
- ✓ ಜ್ಞಾನಿಗಳು ಕಾದಾಟಕ್ಕೆ ಮುಂಚೆಯೇ ಗೆಲ್ಲುತ್ತಾರೆ. ಅಜ್ಞಾನಿಗಳು ಗೆಲ್ಲಲು ಕಾದಾಡುತ್ತಾರೆ.
- ✓ ಸತ್ಯ ಬರಿಮೈಯಲ್ಲಿ ಓಡಾಡಬಹುದು ಆದರೆ ಸುಳ್ಳಿಗೆ ವೇಷಭೂಷಣ ಹಾಕಿರಲೇಬೇಕು.
- ✓ ನಾಲೆಡ್ಜ್ ಈಸ್ ನಾಟ್ ಫ್ರೀ, ಯು ಹ್ಯಾವ್ ಟು ಪೆ ಅಟೆನ್ಷನ್.
- ✓ ನಿಮ್ಮ ಕನಸುಗಳಿಗೆ ಮತ್ತು ಆಕಾಂಕ್ಷೆಗಳಿಗೆ ಎಕ್ಸ್‌ಪೈರಿ ಡೇಟ್ ಇರುವುದಿಲ್ಲ.

# ಅಮ್ಮನ ನೆನಪು; ದೋಸೆಯ ಆಸೆ

**ಜಿ. ವಿ. ಅರುಣ**

ಬೆಳಗ್ಗೆ ವಾಯುವಿಹಾರದಲ್ಲಿ ನಮ್ಮ ಎದುರಿಗೆ ಸಿಕ್ಕಾಗ ಮುಗುಳುನಗುವಷ್ಟು ಆಕೆ ಪರಿಚಿತರಾಗಿದ್ದರು. ನನ್ನ ಸ್ನೇಹಿತ ಆಕೆಗೆ 'ಅಮ್ಮ' ಎಂದು ನಾಮಕರಣಮಾಡಿ ಗುರುತಿಸುತ್ತಿದ್ದ. ವಾಯುವಿಹಾರದಲ್ಲಿ ಎದುರಿಗೆ ಬರುವ ಎಲ್ಲರಿಗೂ ಒಂದೊಂದು ಹೆಸರನ್ನು ನಾಮಕರಣ ಮಾಡುವುದರಲ್ಲಿ ಅವನು ನಿಸ್ಸೀಮ. ಅವರಿಗೆ ಕೇಳದಂತೆ,ನನಗೆ ಮಾತ್ರ ಕೇಳುವಂತೆ, ಕೈಗಳನ್ನು ಆಡಿಸುತ್ತಾ ಬರುವವವಳಿಗೆ 'ಹೇಮಾಮಾಲಿನಿ ಬಂದಳು' ಅಂತಾನೋ ಹಾಡನ್ನು ಗುನುಗುತ್ತ ತಲೆಯಾಡಿಸಿಕೊಂಡು ಬರುವವರಿಗೆ 'ಎಂಎಸ್‌ಎಸ್ ಬಂದರು ನೋಡು' ಅಂತಾನೋ ಎತ್ತರದ ವ್ಯಕ್ತಿಗೆ 'ಬಚ್ಚನ್ ಬಂದ' ಅಂತಾನೋ ಹೇಳುವುದು ವಾಡಿಕೆ. ಹಾಗೆ ಈಕೆಗೆ 'ಅಮ್ಮ' ಎಂದು ನಾಮಕರಣ ಮಾಡಿದ್ದ. ಅದು ಅವರುಗಳನ್ನು ಆಡಿಕೊಳ್ಳಲು ಖಂಡಿತ ಅಲ್ಲ. ಅವರವರ ಹಾವಭಾವಗಳನ್ನು ಮತ್ತು ವಿಶಿಷ್ಟ ಗುಣಲಕ್ಷಣಗಳನ್ನು ಗುರುತಿಸಿ ಮಾಡಿದ ನಾಮಕರಣ ಅದು. ನಮ್ಮಿಬ್ಬರ ಪರಸ್ಪರ ಪ್ರಸ್ತಾಪಕ್ಕೆ, ಗುರುತಿಸುವಿಕೆಗೆ ಮಾತ್ರ ಸೀಮಿತವಾದ ಹೆಸರುಗಳು ಅವು.

ಅಂದು "ಆಮ್ಮನಿಗೆ" ಉಳಿದವರೆಲ್ಲರು ಶುಭಾಶಯಗಳನ್ನು ಹೇಳುತ್ತಿದ್ದರು. ಆಕೆಯ ಜನ್ಮದಿನ ಇರಬೇಕೆಂದುಕೊಂಡು ನಾವು ಗೆಳೆಯರಿಬ್ಬರು ಆಕೆಯ ಬಳಿಗೆ ಹೋಗಿ "ಜನ್ಮದಿನದ ಶುಭಾಶಯಗಳು" ಎಂದು ಹೇಳಿದೆವು.

"ಯಾರ ಜನ್ಮದಿನರೀ?" ಆಕೆ ಸ್ವಲ್ಪ ಗಡುಸಾಗೇ ನಮ್ಮನ್ನು ಕೇಳಿದರು.

"ಅಲ್ಲಾ..., ಅವರೆಲ್ಲ ನಿಮಗೆ ಶುಭಾಶಯ ಹೇಳ್ತಿದ್ರಲ್ಲ, ಅದನ್ನ ನೋಡಿ ನಾವು ಹಾಗೆ ಅಂದುಕೊಂಡ್ವಿ" ನನ್ನ ಗೆಳೆಯ ಸಮಜಾಯಿಷಿ ಹೇಳಿದ.

"ಏನ್ರಿ? ಇವತ್ತು ಅಂತರರಾಷ್ಟ್ರೀಯ ತಾಯಂದಿರ ದಿನ ಅಂತ ಗೊತ್ತಿಲ್ವಾ ನಿಮ್ಗೆ! ಎಲ್ಲ ಗಂಡಸರದು ಅಷ್ಟೇ..." ಎಂದು ನಾವು ಏನೋ ದೊಡ್ಡ ಅಪರಾಧ ಮಾಡಿದವರ ಹಾಗೆ ನಮ್ಮತ್ತ ನೋಡಿ, ಅದಕ್ಕೆ ಎಲ್ಲ ಗಂಡಸರನ್ನು ಆಕೆ ಹೊಣೆಮಾಡಿಬಿಟ್ಟರು.

ನಾವಿಬ್ಬರು ಅನಪೇಕ್ಷಿತ ಪರಿಸ್ಥಿತಿಯಿಂದ ಬಚಾವಾಗಲು "ಓ ಹೌದು, ಹೌದು ನಿಮಗೆ ಅಮ್ಮಂದಿರ ದಿನದ ಶುಭಾಶಯಗಳು" ಎಂದು ನಗುತ್ತ ಹೇಳಿದೆವು.

ಆಕೆ ತಮ್ಮ ಸೊಂಟದ ಮೇಲೆ ಕೈಯನ್ನು ಇಟ್ಟು, "ಏನ್ರೀ? ನಾನು ನಿಮಗೆ ಅಮ್ಮನ ಥರ ಕಾಣಿಸ್ತೀನಾ? ಅವರೇನೋ ಚಿಕ್ಕಹುಡುಗಿಯರು. ಅವರು ಹೇಳಿದರು ಅಂತ ನೀವೂ!" ಎಂದು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುವವರ ಹಾಗೆ ನಿಂತರು.

ಆಕೆಯನ್ನು ಅಂದು ನಾವು ನೋಡಿದ ಗಳಿಗೆಯೇ ಸರಿಯಿಲ್ಲ ಎಂದುಕೊಂಡು, "ಸಾರಿ..." ಎಂದು ಹೇಳಿ ಅಲ್ಲಿಂದ ಜಾಗ ಖಾಲಿಮಾಡಿ, ಕಲ್ಲುಬೆಂಚಿನ ಮೇಲೆ ಬಂದು ಕುಳಿತುಬಿಟ್ಟೆವು.

ನನ್ನ ಸ್ನೇಹಿತನಿಗೆ ರೇಗಿಹೋಗಿತ್ತು. "ಏನೇ ಹೇಳು. ಅವಳನ್ನ ನೋಡಿದರೆ ಅಮ್ಮನ ತರಹ ಅಲ್ಲದೆ ಇನ್ಯಾವ ತರಹ ಕಾಣುತ್ತಾಳೆ?" ಕೋಪದಿಂದ ಹೇಳಿದ. "ನಮ್ಮ ಅಮ್ಮ ಅಂತು ಹೀಗೆಲ್ಲ ಇರಲಿಲ್ಲ" ಎಂದ ಅವನ ಮಾತಿಗೆ ನಾನು "ಹೌದು" ಎಂದು ತಲೆಯಾಡಿಸಿದೆ. ನನ್ನ ಮಿತ್ರ ಅವನ ತಾಯಿಯನ್ನು ನೆನೆಯುತ್ತಾ "ನಮ್ಮಮ್ಮ ಒಳ್ಳೆಯ ತುಪ್ಪದ ಮಸಾಲೆದೋಸೆ ಮಾಡೋರು. ನಾನು ಮೂರನೇ ದೋಸೆ ಹಾಕಿಸಿಕೊಳ್ಳದಿದ್ದರೆ,




‘ಯಾಕೋ ಚೆನ್ನಾಗಿಲ್ವಾ? ಬಾಯಿ ಮುಚ್ಚಿಕೊಂಡು ತಿನ್ನು’ ಅಂತ ಬೈಯುತ್ತಿದ್ದರು. ತಿಂದಮೇಲೆ ಸೋಪು ಹಾಕಿಕೊಂಡು ತೊಳೆದರೂ ತುಪ್ಪದ ಜಿಡ್ಡು, ಮಸಾಲೆದೋಸೆಯ ಸುವಾಸನೆ ಕೈಯಲ್ಲಿ ಇರೋದು” ಎಂದು ಅಮ್ಮನ ಮಮತೆಯ ಹಳೆಯ ನೆನಪಿನ ಹಂಬಲಕ್ಕೆ ಗೆಳೆಯ ಭಾವುಕನಾದ.

ಆ ಭಾವುಕತನ ನನ್ನನ್ನೂ ನನ್ನ ಅಮ್ಮನ ಮಮತೆಯ ನೆನಪಿಗೆ ಸೆಳೆಯಿತು. “ಹೌದು, ನನ್ನ ಅಮ್ಮನೂ ಬಹಳ ಸ್ವಾದಿಷ್ಟವಾದ ಮಸಾಲೆದೋಸೆ ಮಾಡುತ್ತಿದ್ದರು. ಆದರೆ ಅವರದ್ದು ಬೆಣ್ಣೆ ಮಸಾಲೆ; ಜೊತೆಗೆ ರುಚಿಯಾದ ಕಾಯಿ ಚಟ್ನಿ! ಆಗಿನ ಬೆಣ್ಣೆಯ ಜಿಡ್ಡು ಬೆರಳುಗಳ ಮೇಲೆ ಎರಡು ದಿನ ಇರೋದು!” ಎಂದೆ.

ಇಬ್ಬರು ಒಂದಷ್ಟು ಹೊತ್ತು ನಮ್ಮ ಭಾವನಾ ಪ್ರಪಂಚದಲ್ಲಿ ನಮ್ಮನಮ್ಮ ಅಮ್ಮಂದಿರು ಮಾಡುತ್ತಿದ್ದ ದೋಸೆಯನ್ನು ಮೆದ್ದು ವಾಸ್ತವಕ್ಕೆ ಬಂದೆವು. ಇಬ್ಬರ ಮುಖದಲ್ಲೂ ಒಂದು ಬಗೆಯ ತೃಪ್ತಿ, ಜೊತೆಗೆ ಏನನ್ನೋ ಕಳೆದುಕೊಂಡ ಕಳವಳಗಳು ಒಟ್ಟಿಗೆ ಮೂಡಿದ್ದವು. ಒಬ್ಬರನ್ನೊಬ್ಬರು ಪರಸ್ಪರ ಅರೆಕ್ಷಣ ನೋಡಿಕೊಂಡೆವು. ಅಷ್ಟರಲ್ಲೇ ನಮ್ಮ ಮನೋಸಂಪರ್ಕವು ಸಂಪೂರ್ಣವಾಗಿ ತನ್ನ ಸೂಚನೆಯನ್ನು ಯಶಸ್ವಿಯಾಗಿ ದಾಟಿಸಿಬಿಟ್ಟಿತ್ತು. ಮುಗುಳುನಗೆ ತಾನಾಗೆ ಮುಖಗಳ ಮೇಲೆ ಮೂಡಿತ್ತು. ಮಾತಿಲ್ಲದೆ ಇಬ್ಬರು ಎದ್ದು ಉದ್ಯಾನದಿಂದ ಹೊರಟೆವು.

ಟೇಬಲ್ ಮುಂದೆ ಎದುರು ಬದುರಾಗಿ ಕುಳಿತ ನಮ್ಮ ಬಳಿ ಬಂದ ಮಾಣಿಗೆ, ನಾನು ಬಾಯಿ ಬಿಡುವ ಮೊದಲೇ, ನನ್ನ ಗೆಳೆಯ “ಎರಡು ತುಪ್ಪದ ಮಸಾಲೆದೋಸೆ ಕಣಪ್ಪ” ಎಂದು ನಿರ್ದೇಶಿಸಿಬಿಟ್ಟ. ಆ ರುಚಿಯಾದ ದೋಸೆಯನ್ನು ತಿಂದು ಮುಗಿಸುತ್ತಿದ್ದಂತೆ, ಅವನು ನನ್ನ ಕಡೆ ತಿರುಗಿ “ಇನ್ನೊಂದು...?” ಎಂದು ಕೇಳಿದ. ಈ ಬಾರಿ ಅವನಿಗೆ ಅವಕಾಶ ನೀಡದೆ ನಾನೇ ಮಾಣಿಗೆ “ಈಗ ಒಂದೊಂದು ಸ್ಪೆಷಲ್ ಬೆಣ್ಣೆ ಮಸಾಲೆ ತಾರಪ್ಪ” ಎಂದು ಹೇಳಿದೆ.

ಇಬ್ಬರೂ ಎಷ್ಟೋ ವರ್ಷಗಳ ಅನಂತರ ಮಸಾಲೆದೋಸೆಯನ್ನು ತಿನ್ನುತ್ತಿರುವವರಂತೆ ಕೈ ಬೆರಳುಗಳನ್ನು ಚಿಪ್ಪುತ್ತಾ ಆನಂದದಿಂದ ಆಸ್ವಾದಿಸಿ, ಬಿಸಿಬಿಸಿ ಸ್ಪೆಷಲ್, ಅಂದರೆ ಸಕ್ಕರೆ ರಹಿತ ಕಾಫಿಯನ್ನು ಕುಡಿದು ಮನೆಯ ಕಡೆ ಹೊರಟೆವು. ಇಬ್ಬರೂ ಒಂದು ಮಾತನ್ನು ಆಡಲಿಲ್ಲ. ಹಳೆಯ ನೆನಪನ್ನು ಇಂದಿನ ವಾಸ್ತವಕ್ಕೆ ಕೊಂಡಿಹಾಕಿ ಬಿಗಿಯಲು ಮನಸ್ಸನ್ನು ಅದರ ಪಾಡಿಗೆ ಬಿಟ್ಟುಬಿಟ್ಟಿದ್ದೆವು.

ಮನೆಯ ಗೇಟನ್ನು ತೆಗೆಯುತ್ತಿದ್ದಂತೆ, ‘ಅಂತರರಾಷ್ಟ್ರೀಯ ತಾಯಂದಿರ ದಿನ’ದ ನೆನಪು ನನ್ನನ್ನು ಎಚ್ಚರಿಸಿತು. ಜೊತೆಗೆ ದ್ವಂದ್ವವೊಂದು ಎದುರಾಯಿತು. ನಾನು ಬೆಣ್ಣೆ ಮಸಾಲೆದೋಸೆಯನ್ನು ತಿಂದದ್ದು “ಅಮ್ಮನ ನೆನಪಿಗೋ; ಇಲ್ಲ ದೋಸೆಯ ಮೇಲಿನ ಆಸೆಗೋ!?”

ದಯವಿಟ್ಟು ನೀವೇ ಈ ಗೊಂದಲವನ್ನು ಪರಿಹರಿಸಿಬಿಡಿ. ■

# ಹೆಂಡತಿ ಸಂತತಿ ಸಾವಿರವಾಗಲಿ...

ಗುಂಡುರಾವ್ ದೇಸಾಯಿ

'ದಂಡಿಗೆ ಬೆತ್ತ ಹಿಡಿಯೊದಕ್ಕೆ
ಮಂಡೆ ಮಾಚಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಲ್ಲಯ್ಯ'

–ಪುರಂದರ ದಾಸರು

'ಗೋಪಾಳ ಬುಟ್ಟಿ ಹಿಡಿಯೊಕ್ಕೆ ಭೂಪತಿಯಂತೆ ಗರ್ವಿಸುತ್ತಿದ್ದೆ ಆ ಪತ್ನಿ ಕುಲ ಸಾವಿರವಾಗಲಿ ಗೋಪಾಳಬುಟ್ಟಿ ಹಿಡಿಸಿದಳಯ್ಯ' ಎನ್ನುತ್ತ 'ಆದುದ್ದೆಲ್ಲ ಒಳಿತೆ ಆಯಿತು ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು' ಎಂದು ಪುರಂದರ ದಾಸರು ಮಾರ್ಮಿಕವಾದ ಕೀರ್ತನೆ ಬರೆದಿದ್ದಾರೆ.

'ಹೆಂಡತಿ ಸಂತತಿ ಸಾವಿರವಾಗಲಿ' ಅನ್ನುವಂತಹದ್ದು ಈ ಕೀರ್ತನೆಯಲ್ಲಿ ವಿಶೇಷವಾಗಿ ಧ್ವನಿಸುವ ಮಾತು. ಅದಕ್ಕೂ ಸ್ಪಷ್ಟೀಕರಣ ಕೊಡುವೆ.

ಮಗನ ಉಪನಯನ ಸಂಸ್ಕಾರಕ್ಕೆ ಸಹಾಯ ಬೇಡಲು ಬಂದ ಬಡ ಬ್ರಾಹ್ಮಣನಿಗೆ ಸರಸ್ವತಿಬಾಯಿ ಮೂಗುತಿ ಕೊಡದಿದ್ದರೆ ನವಕೋಟಿ ನಾರಾಯಣ ಎಂದು ಬಿರುದಾಂಕಿತ ಶ್ರೀನಿವಾಸನಾಯಕರು ಹರಿದಾಸ ಸಾಹಿತ್ಯದ ಮೇರು ಪರ್ವತವಾಗಲು ಸಾಧ್ಯವಾಗುತ್ತಿತ್ತೆ?

ಅಂದರೆ...? ಇಂತಹ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಲಿ ಎನ್ನುವುದೆ ನಿಮ್ಮ ಮಾತಿನ ಅರ್ಥ ಎಂದು ತಮಗನಿಸಿರಬಹುದು. ಆಫ್‌ಕೋರ್ಸ ನಿಮಗೆ ಅನಿಸಿದ್ದು ನನಗೂ ಅನಿಸಿದ್ದಕ್ಕಾಗಿ ಈ ಬರೆಹ.

ಪುರಾಣ, ಇತಿಹಾಸ ಕಾಲದಿಂದ ಇಂದಿನ ಕಾಲಘಟ್ಟಕ್ಕ ಬಂದು ನೋಡಿದಾಗಲೂ ಹೆಂಡತಿ ಬೆತ್ತ ಹಿಡಿಸಿದಾಗಲೆಲ್ಲ ಗಂಡು ಯಶಸ್ವಿಯಾಗಿದ್ದಿದೆ. ಬೆತ್ತ ಅಂದ್ರ ಇಲ್ಲಿ ಇನ್ನಾವುದೋ ರೀತಿ ಅನ್ಯಥಾ ದಯವಿಟ್ಟು ಆಲೋಚಿಸದಿರಿ. ಸ್ಫೂರ್ತಿದಾಯಕಳಾಗಿ, ಪರಿವರ್ತಕಳಾಗಿ, ಜಗಳಗಂಟಿಯಾಗಿ, ಕಾಡುವವಳಾಗಿ ಅಥವಾ ಮೊದಲಿಸುವವಳಾಗಿ, ಏನೂ ಇಲ್ಲದವಳಾಗಿ ಗಂಡನಿಗೆ ವಿಭಿನ್ನವಾಗಿ ಸಾಥ್ ನೀಡಿರುವಂತಹವರು ಎಂದು ಅರ್ಥೈಸಿಕೊಳ್ಳಬೇಕಾಗಿ ಮನವಿ. ಅಂತಹ ಸಾಧ್ಯತೆ ಆದಾಗಲೆಲ್ಲ ಅಲ್ಲೊಂದು ಹೊಸ ಇತಿಹಾಸ ಸೃಷ್ಟಿಯಾಗಿದ್ದಿದೆ. ಮಹತ್ಕಾರ್ಯಗಳು ನಡೆದಿದ್ದಿವೆ.

ರಾಮಾಯಣನೆ ತೆಗದುಕೊಳ್ಳಿ, ರಾಮನ ಪಟ್ಟಾಭಿಷೇಕ ಸುಲಭದಲಿ ಜರುಗಿದ್ದರೆ ರಾಮನಿಗೆ ಏನು ಬೆಲೆ ಇರುತಿತ್ತು...! ರಾಮಾಯಣ ಮುಂದುವರೆಯಲು ಸಾಧ್ಯವಾಗುತ್ತಿತ್ತಾ....? ಅದು ಬಿಡಿ ಆಧುನಿಕ ಭಾರತದಲ್ಲಿ ಅಯೋಧ್ಯಾ ನಗರಿ ಸುಡುಸುಡುವ ರಾಜಕೀಯ ಇಶ್ಯೂ ಆಗಿರುತ್ತಿತ್ತಾ? ದಶರಥನ ಪ್ರಿಯ ಹೆಂಡತಿ ಕೈಕೇಯಿ ಕೋಪಾಗೃಹದಲ್ಲಿ ಗಂಟು ಹಾಕಿಕೊಂಡು ಕುಳಿತಿದ್ದರಿಂದ ಅವಳ ಕೋಪ ತಮಣಿ(ಶಾಂತ) ಮಾಡಲು ಹೋದ ದಶರಥ, ಹಿಂದೆ ಯುದ್ಧದ ಸಮಯದಲ್ಲಿ ಸಹಾಯ ಮಾಡಿದ ಹೆಂಡತಿ ಕೈಕೇಯಿಗೆ ಕೊಟ್ಟ ವರಕ್ಕೆ ಕಟ್ಟುಬಿದ್ದುದಕ್ಕಾಗಿಯೆ ರಾಮಾಯಣ ಹನುಮಂತನ ಬಾಲದಂತೆ ಬೆಳೆಯಿತು. ತಂದೆಯ ವಿಷಮಸ್ಥಿತಿಯನ್ನರಿತ ಪಿತೃವಾಕ್ಯ ಪರಿಪಾಲಕನಾದ ರಾಮ

ಸನ್ಯಾಸ ಸ್ವೀಕಾರ ಮಾಡಿದ. ಕಾಡಿನಲ್ಲಿ ರಾಮ ಹೆಂಡತಿ ಸೀತೆ ಹಾಗೂ ಅನುಜ ಲಕ್ಷ್ಮಣನೊಡನೆ ದಿನಗಳನ್ನು ಕಳೆಯುತ್ತಿದ್ದಾಗ ಹೇಗೋ ವನವಾಸ ಮುಗಿದುಬಿಡುತ್ತಿತ್ತೇನೋ ಆದರೆ ಲಕ್ಷ್ಮಣ ಶೂರ್ಪನಖಿಯ ಮೂಗು ಕೊಯ್ದು ವಿರೂಪಗೊಳಿಸಿದ್ದು ಇನ್ನೊಂದು ತಿರುವಿಗೆ ಕಾರಣವಾಯಿತು. ಸಹಜವಾಗಿ ರಾವಣ ಕೆರಳಿದ. ಶೂರ್ಪನಖಿ ವರ್ಣಿಸಿದ ಸೀತೆಯ ಮೇಲೆ ಮೋಹಗೊಂಡ. ಮಾರೀಚನ ನಾಟಕಕ್ಕೆ ಬಲಿಯಾದ ಸೀತೆಗೆ ಆಶ್ರಮದ ಹತ್ತಿರ ಸುಳಿದಾಡಿದ ಬಂಗಾರದ ಜಿಂಕೆಯ ವ್ಯಾಮೋಹ ಹುಟ್ಟಿತು. ಹಠ ಹಿಡಿದ ಆಕೆಯ ಆಸೆಯನ್ನು ಪೂರೈಸುವುದು ರಾಮನಿಗೂ ಅನಿವಾರ್ಯವಾಯಿತು. ಅದರ ಹಿಂದೆ ಅಟ್ಟಿಸಿಕೊಂಡ ಹೋಗಬೇಕಾಯಿತು. 'ಹೇ...ಸೀತಾ....ಸೀತಾ, ಹಾ..ಲಕ್ಷ್ಮಣ' ಎಂದು ಮಾರೀಚ ರಾಮನ ಧ್ವನಿಯಲ್ಲಿ ಕೂಗಿದಾಗ ಸೀತೆ ಆತಂಕಗೊಂಡು ಲಕ್ಷಣನಿಗೆ ತಿಳಿಸಿದಾಗ. ಲಕ್ಷ್ಮಣ 'ಅದು ರಾಮನಲ್ಲ, ಏನೋ ರಾಕ್ಷಸರ ತಂತ್ರ' ಅಂದರೂ ಊರ್ಮಿಳೆಯನ್ನು ಬಿಟ್ಟು ತಂದೆ ತಾಯಿ ಸ್ವರೂಪರೆನಿಸಿದ್ದ ಅಣ್ಣ ಅತ್ತಿಗೆ ಸೇವೆಗಾಗಿ ಬಂದತಹ ತನ್ನನ್ನೆ ಸಂಶಯಿಸಿದ ಸೀತೆಯನ್ನು ಕಂಡು ದುಃಖ ಉಮ್ಮಳಿಸಿತ್ತಾದರೂ ಅತ್ತಿಗೆಯ ಜವಾಬ್ದಾರಿ ತನ್ನದೆಂದು ಲಕ್ಷ್ಮಣರೇಖೆ ಹಾಕಿ ರಾವಣನಿಗೂ ತನ್ನ ಪವರ್ ತೋರುವ ಹಾಗೆ ಮಾಡಿದಾಗ್ಯೂ ಅದನ್ನು ಮೀರಿದ್ದಕ್ಕಾಗಿ ಸೀತೆಯ ಅಪಹರಣ ಆಯ್ತು. ಸಂಪೂರ್ಣ ರಾಮಾಯಣನೂ ಆಯ್ತು. ತಿರುಗಿ ಬಂದಾಗಲೂ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾದ ಹಾಗೆ ಅಗಸನ ಗಂಡ ಹೆಂಡಿರ ಜಗಳದಲ್ಲಿ ಬಡವಾಗಿದ್ದು ಸೀತೆಯ ಬದುಕು. ಅಲ್ಲಿಂದ ಉತ್ತರ ರಾಮಾಯಣ ಆಗಲಿಕ್ಕೆ ಸಾಧ್ಯ ಆಯ್ತು.. ಒಟ್ಟಾರೆ ಹೆಣ್ಣಿನಿಂದ... ಬೆತ್ತ ಹಿಡಿಸಿದ್ದರಿಂದ.

ಇನ್ನೂ ಮಹಾಭಾರತಕ್ಕ ಬಂದ್ರೂ ಅಲ್ಲಿನೂ ಅದೆ. ದುರ್ಯೋಧನ, ದ್ರೌಪದಿ ಸ್ವಯಂವರಕ್ಕೆ ಹೋಗದಿದ್ದರೆ ಕಥೆನ ಮುಂದುವರೆತಿರಲಿಲ್ಲ. ಆದಾಗ್ಯೂ ಚಿಂತೆ ಇರಲಿಲ್ಲ. ಇಂದ್ರಪ್ರಸ್ಥದಲ್ಲಿ ಮಯನ ಮಾಯಾ ವಿನ್ಯಾಸದ ಅರಮನೆಯಲ್ಲಿ ನೀರೆಂದು ಕೊಂಡು ನೀರಿಲ್ಲದ ಸ್ಥಳದಲ್ಲಿ ಹೆಜ್ಜೆ ಇಟ್ಟು, ನೀರು ಇಲ್ಲ ಎಂದುಕೊಂಡ ಸ್ಥಳದಲ್ಲಿ ಹೆಜ್ಜೆ ಇಟ್ಟು ನೀರಿನಲ್ಲಿ ಬಿದ್ದುದ್ದು ಸಹಜವಾಗಿದ್ದರೂ "ಅಂಧ ಕಾ ಪುತ್ರ ಅಂಧಾ ಹೈ" ಎಂದು ದ್ರೌಪದಿ ನಕ್ಕದ್ದಕ್ಕಾಗಿ ಆ ಕತೆ ಮುಂದುವರೆಯಲೂ ಸಾಧ್ಯವಾಗಿದ್ದಲ್ಲವೆ? ಆ ನಗು ಅತ್ತಿಗೆಯ ಸ್ವರೂಪದ ತಾಯಿಯದು ಅಂತ ದುರ್ಯೋಧನ ಬಗೆದಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಪಂಪ ಭಾರತದಲ್ಲಿ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಳಯೆ ಮುತ್ತಿನ ಕೇಡನೇ ನೋಡಿ ಬಳ್ಕುತ್ತಿರೆ ಯೇಮವಿಲ್ಲದಿವನಾಯ್ತುದೊ ತಪ್ಪದೆ ಪೇಳ್ದಮೆಂಬ ಭೂ ಪೊತ್ತಮನಂ ಬಿಸುಟ್ಟಿರದೆ ನಿಮ್ಮಳೆ ಪೊಕ್ಕೊಡೆ ಬೇಡನಲ್ಲನೇ' ಎಂದು ಕರ್ಣ ಸುಯೋಧನನ ಹಿರಿತನವನ್ನು ಕೃಷ್ಣನಿಗೆ ಹೇಳಿಕೊಡುತ್ತಾನೆ. ಇಲ್ಲಿ ಭಾನುಮತಿ ಕರ್ಣ ಪಗಡೆಯಾಡುವಾಗ, ಗೆದ್ದ ಕರ್ಣ ಭಾನುಮತಿಯ ಮುತ್ತಿನ ಸರವನ್ನು ಹಿಡಿದೆಳೆದಾಗ, ಅದೆ ಸಮಯಕ್ಕೆ ಎಂಟ್ರಿಕೊಟ್ಟ ದುರ್ಯೋಧನ ಆ ದೃಶ್ಯ ನೋಡಿದಾಗ್ಯೂ ಕೋಪಿಸಿಕೊಳ್ಳದೇ ಬಿದ್ದಿದ್ದ ಮುತ್ತುಗಳನ್ನೆಲ್ಲಾ 'ಆರಿಸಿಕೊಡಲೆ ಗೆಳೆಯ' ಎನ್ನುವಂತಹ ತಾಳ್ಮೆಹೊಂದಿದ್ದವನು 'ನನ್ನನ್ನು ನೋಡಿ ನಕ್ಕವಳು ತಾಯಿ ಸ್ವರೂಪಳು. ಮಕ್ಕಳ ಹುಚ್ಚಾಟ ನೋಡಿ ನಗುವುದಿಲ್ಲವೆ?' ಎಂದು ಭಾವಿಸಿದ್ದರೆ ದ್ಯೂತ ಪ್ರಕರಣ ನಡೆಯುತ್ತಿತ್ತೆ? ವಸ್ತ್ರಾಪಹರಣ ಸಾಧ್ಯವಾಗುತ್ತಿತ್ತೆ....? ಇನ್ನೂ ಕೆಲವರು ವಸ್ತ್ರಾಪಹರಣ ಪ್ರಸಂಗ ಮೂಲದಲ್ಲಿ ಇಲ್ಲ. ಇದು ಪುರುಷ ಪ್ರಧಾನ ವ್ಯವಸ್ಥೆಯ ಸೃಷ್ಟಿ ಎನ್ನುವವರಿದ್ದಾರೆ. ಅದಕ್ಕೆ ನಿದರ್ಶನ ಎಂಬಂತೆ ಬುಡಕಟ್ಟು ಸಮುದಾಯದ ಮಹಾಭಾರತ ಕತಾ ಪ್ರಸಂಗ ಉದಾಹರಿಸುತ್ತಾರೆ. ಅಲ್ಲಿ ಆಗಿದ್ದಿಷ್ಟು. ರಸಜ್ವಲೆಯಾಗಿದ್ದ ದ್ರೌಪದಿಯ

ಕೂದಲನ್ನು ಹಿಡಿದು ಎಳೆದುಕೊಂಡು ಬಂದ ದುಶ್ಯಾಸನ ಅವಮಾನಿಸಲು ಪ್ರಯತ್ನಿಸಿದಾಗ ದ್ರೌಪದಿ ದುಶ್ಯಾಸನನ ಎದೆಗೆ ಒದೆಯುತ್ತಾಳಂತೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇಂತಹದನ್ನು ಸಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹಾಗಾಗಿನೇ ವಸ್ತ್ರಾಪಹರಣ ಸನ್ನಿವೇಶ ಸೇರಿಸಿದ್ದು. ಕೃಷ್ಣನಿಗೆ ಆ ಕ್ರೆಡಿಟ್ ಹೋಗುವ ಹಾಗೆ ಮಾಡಿದ್ದು ಎಂಬುದಿದೆ. ವಿಷಯಾಂತರಕ್ಕೆ ಕ್ಷಮೆ

ಅಷ್ಟಕ್ಕೂ ನಿಂತಿದ್ದರೂ ಸಾಧ್ಯವಿತ್ತೇನೊ? ಅಜ್ಞಾತವಾಸ ಮುಗಿದ ಮೇಲೂ ಈ ಯುದ್ಧವೆ ಬೇಡ ಕೊಟ್ಟ ರಾಜ್ಯ ಅಥವಾ ಊರುಗಳಾಗಲಿ ಕೊಡಲಿ ಇದ್ದುದ್ದರಲ್ಲಿಯೆ ಸುಖವಾಗಿರೋಣ ಎಂದು ಪಂಚಪಾಂಡವರೆಲ್ಲ ನಿರ್ಧರಿಸಿದಾಗ "ಅದೇಗೆ ಸಾಧ್ಯವಾಗುತ್ತದೆ? ನೀವು ಗಂಡರಾ? ಷಂಡರಾ? ಅವಮಾನ ಅನುಭವಿಸಿದವಳು ನಾನು, ಅಣ್ಣಾ, ಸಂಧಾನ ಫಲಪ್ರದವಾಗದ ರೀತಿಯಲ್ಲಿ ಸಂಧಿ ಕಾರ್ಯಕ್ಕೆ ಹೋಗು" ಎಂದು ಕೃಷ್ಣಗೆ ಕೃಷ್ಣೆ ಫಿಟ್ಟಿಂಗ್ ಇಟ್ಟಿದ್ದರಿಂದ ದುರ್ಯೋಧನನ ಬಲ ಕಡಿಮೆ ಮಾಡಬೇಕೆಂದೆ ಮುದ್ದಾಂ ದುರ್ಯೋಧನನ ಮನೆಗೆ ಹೋಗದೆ ವಿಧುರನ ಮನೆಗೆ ಹೋಗಿ ಕಪಟನಾಟಕ ಸೂತ್ರಧಾರಿ ಮೊದಲ ವಿಕೆಟ್ ಪತನ ಆಗುವ ಹಾಗೆ ಮಾಡಿದ. ದುರ್ಯೋಧನನಲ್ಲಿ ಒಂದು ಹಂತದಲ್ಲಿ ಸಂಧಿ ಮಾಡಿಕೊಳ್ಳಬೇಕೆಂಬ ಆಸೆ ಇದ್ದರೂ 'ದಾಸನ ಮನೆಗೆ ಹೋದನಲ್ಲ ಈ ಗೊಲ್ಲ' ಎಂದು ಕೋಪಿಸಿಕೊಂಡು 'ಐದು ಊರಲ್ಲ ಒಂದು ಸೂಜಿ ಮನೆ ಬೀಳುವಷ್ಟು ಜಾಗ ಕೊಡೆನು' ಎಂದು ಪ್ರತಿಜ್ಞೆ ಮಾಡುವಂತೆ ಮಾಡಿ ಮಹಾಭಾರತದ ಮಾರಣಹೋಮಕ್ಕೆ ಕಾರಣವಾಯಿತಲ್ಲ.

ಸಮುದ್ರ ಮಂಥನ ಕಾಲದಲ್ಲಿ ಮಂದರಗಿರಿ ಪರ್ವತವನ್ನ ಕಡಗೋಲನ್ನಾಗಿ ಮಾಡಿಕೊಂಡು, ಶೇಷನನ್ನೆ ಹಗ್ಗವನ್ನಾಗಿ ಮಾಡಿಕೊಂಡು ಕಡೆಯುತ್ತಿರುವಾಗ ಸುರ ಅಸುರರೆಲ್ಲ ಬಂದಂತಹ ಎಲ್ಲವನ್ನು ಹಂಚಿಕೊಂಡು ತೃಪ್ತಿಪಟ್ಟರೆ ಬಂದ ಹಾಲಾಹಲವನ್ನು ಯಾರೂ ಸ್ವೀಕರಿಸಲಿಲ್ಲ. ಅದೆ ಸಮಯಕ್ಕೆ ಶಿವನು ಹೋಗಿ ಅದನ್ನು ಸ್ವೀಕರಿಸುವಾಗ ಪತ್ನಿ ಬಂದು ಕಂಠವನ್ನು ಹಿಡಿಯದಿದ್ದರೆ ಶಿವನ ಏನಾಗಿರುತ್ತಿದ್ದ...?

ಯಾರು ಶ್ರೇಷ್ಠ ಎಂದು ಪರೀಕ್ಷಿಸಲು ಬಂದ ದುರ್ವಾಸಮುನಿ ಬ್ರಹ್ಮನಿಗೂ ಶಾಪಕೊಟ್ಟು ಮಹೇಶ್ವರನಿಗೂ ಶಾಪಕೊಟ್ಟು ವಿಷ್ಣುವಿನ ಹತ್ತಿರ ಬಂದಾಗ ಲೋಕಪಾಲಕನಾದ ವಿಷ್ಣು ಹೆಂಡತಿಯೊಂದಿಗೆ ಸುಖದಿಂದರುವುದನ್ನು ನೋಡಿ ಸಹಿಸಿಕೊಳ್ಳದೆ ಅವನ ವಕ್ಷಸ್ಥಳಕ್ಕೆ ಒದ್ದದಕ್ಕಾಗಿಯೆ ಲಕ್ಷ್ಮಿ ಭೂಮಿಗೆ ಬರಬೇಕಾತಲ್ಲವೆ....? ಆ ಕಾರಣಕ್ಕಾಗಿ ವೆಂಕಟರಮಣನಾಗಿ ತಿರುಪತಿಯಲ್ಲಿ ನೆಲನಿಲ್ಲಬೇಕಾಯಿತು ಎನ್ನುವಂತಹ ಪುರಾಣಗಳು ಹುಟ್ಟಲು ಕಾರಣವಾಯಿತಲ್ಲವೇ? ಹೆಂಡತಿಯ ಕಾರಣದಿಂದ ತಿಮ್ಮಪ್ಪನಾಗಿರದಿದ್ದರೆ ಭೂಲೋಕದ ಇಂತಹ ವೈಭೋಗ ವಿಷ್ಣುವಿಗೆ ಎಲ್ಲಿಯಾದರೂ ಸಿಗುತ್ತಿತ್ತೆ?

'ಅಹಲ್ಯಾ ದ್ರೌಪದಿ, ಸೀತಾ, ತಾರಾ, ಮಂಡೋದರಿ, ತಥಾ ಪಂಚಕನ್ಯಯಾಸ್ಮರೇನಿತ್ಯಂ ಮಹಾಪಾತಕ ನಾಶನಂ' ಎನ್ನುವ ಶ್ಲೋಕ ನಿತ್ಯ ನಮ್ಮ ತಂದೆ ಪಠಿಸುತ್ತಿದ್ದರು. ತಿಳುವಳಿಕೆ ಬಂದಾಗ ಪ್ರಶ್ನೆ ಕೇಳಿದರೆ 'ಅವರು ಸುಖದ ಸುಪ್ಪತ್ತಿಗೆಯಲ್ಲಿದ್ದರೂ ಮಹಾ ಕಷ್ಟಗಳನ್ನು ಎದುರಿಸಿದವರು ಅಂತವರಿಗೆ ಕಷ್ಟ ಬಂದಾಗ ನಮ್ಮಂತವರಿಗೆ ಕಷ್ಟಗಳು ಬರದೆ ಇರತಾವ. ಬದುಕನ್ನು ಎದುರಿಸೋಕೆ ಇವು ಮಂತ್ರಗಳ ಬೇಕಪಾ' ಅಂತಿದ್ರು. ಕುಂತಿ, ಗಾಂಧಾರಿ, ಸಾವಿತ್ರಿ ಇವರು ಗ್ರೇಟ್ ಅಲ್ಲವೇನಪಾ ಎಂದರೆ ಉತ್ತರ ಸಮಂಜಸವಾಗಿ ಬರುತ್ತಿರಲಿಲ್ಲ. ನಾನು ಪ್ರಸ್ತಾಪಿಸಿದ ಸೀತಾ, ದ್ರೌಪದಿ ಬಿಟ್ಟು ಉಳಿದವರು ಗಂಡನ ಹೆಸರನ್ನು ತಮ್ಮ

ಕಾರ್ಯಗಳಿಂದ ಉಳಿಸಿದವರೆ.

ತವರಿಗೆ ಹೋದ ಪತ್ನಿಯ ನೆನಪು ಬಂದು ರಾಮಬೋಲಾ ಕಾಮಾತುರಣನಾಗಿ ಮಿಂಚು, ಗುಡುಗು, ಮಳೆ ಗಾಳಿಯನ್ನೂ ಲೆಕ್ಕಿಸದೆ, ಭೋರ್ಗರೆಯುವ ನದಿಯನ್ನು ಈಜಿ ಮನೆಗೆ ಬಂದರೂ ಬಾಗಿಲು ತೆಗೆಯದ್ದರಿಂದ ಅಧೀರನಾಗದೆ. ಹಗ್ಗದಂತೆ ಜೋತುಬಿದ್ದ ವಸ್ತುವ ಹಿಡಿದು ಹತ್ತಿ ಮೇಲ್ಮಾಳಿಗೆಯಲ್ಲಿದ್ದ ಹೆಂಡತಿಯನ್ನು ಎಬ್ಬಿಸಿದಾಗ, ಬಂದ ಹೆಂಡತಿ ಗಂಡನ ಅವತಾರ ನೋಡಿ...ಆಶ್ಚರ್ಯಪಟ್ಟು 'ಇಂತಹ ಸಮಯದಲ್ಲಿ ಹೇಗೆ ಬಂದಿರಿ?' ಎಂದಾಗ ಎಲ್ಲ ವೃತ್ತಾಂತ ಕೇಳಿದ ಮೇಲೆ 'ಹೌದು, ಮಹಡಿ ಮೇಲೆ ಹತ್ತಿದ್ದಾದರೂ ಹೇಗೆ ?' ಎಂದಾಗ 'ನನಗಾಗಿ ನೀನು ಇಳಿಬಿಟ್ಟಿದ್ದ ಹಗ್ಗದಿಂದ' ಎಂದ. "ನಾನು ಇಳಿಬಿಟ್ಟಿದ್ದೆ? ಎಲ್ಲೋ ಭ್ರಾಂತು ನಿಮಗೆ. ಹಗ್ಗ ಎಲ್ಲಿದೆ?" ಎಂಬುದನ್ನು ಕೆಳಗೆ ನೋಡಲಾಗಿ ಉದ್ದವಾಗಿ ಇಳಿಬಿದ್ದಿದ್ದ ಹೆಬ್ಬಾವುವನ್ನೆ ಹಗ್ಗ ಎಂದು ತಿಳಿದು ಏರಿದ್ದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಎಷ್ಟು ಸಂತೋಷದಿಂದ ಬಂದಿದ್ದನೊ ಆಕೆ ಜಿಗುಪ್ಸೆಯಿಂದ "ನೀವು ನನ್ನ ಮೇಲಿರಿಸಿದಷ್ಟು ಮನಸ್ಸನ್ನು ದೇವರ ಮೇಲೆ ಇಟ್ಟಿದ್ದಿದ್ದರೆ ದೇವರೆ ಪ್ರತ್ಯಕ್ಷನಾಗುತ್ತಿದ್ದ' ಎಂದು ಹೆಂಡತಿ ರತ್ನಾವಳಿ ವ್ಯಂಗ್ಯದಿಂದ ಆಡಿದ ಒಂದು ಮಾತು ಅವನನ್ನು ತುಳಿಸಿದಾಸನಾಗಲು ಕಾರಣವಾಯಿತು. ರಾಮಚರಿತ ಮಾನಸ ಕೃತಿ ರಚನೆಯಾಗಲು ಸಾಧ್ಯವಾಯಿತು. ಹನುಮಾನ್ ಚಾಲೀಸ್ ಜಗತ್ಪ್ರಸಿದ್ಧ ಮಂತ್ರವಾಯಿತು.

ಮಂತ್ರಿಯ ಮೋಸದಿಂದ ಏನೂ ಅರಿಯದ ವಿದ್ಯೆಯ ಗಂಧವೆ ಇಲ್ಲದ ಕುರುಬ ನೀಲಕಂದನನ್ನು ಮದುವೆಯಾದ ವಿದ್ಯಾ, ಶಾಸ್ತ್ರ ಸಂಪನ್ನೆಯಾಗಿದ್ದ ರಾಜಕುಮಾರಿ ವಿದ್ಯೋತ್ತಮ ತನ್ನ ಮನವನ್ನು ಚಂಚಲಗೊಳಿಸದೆ ಕಠಿಣ ನಿರ್ಧಾರ ತೆಗೆದುಕೊಳ್ಳದೆ ಗಂಡನಿಗೆ ವಿಶೇಷ ಶಿಕ್ಷಣ ನೀಡಿದಳು. ಮುಂದೆ ಲೋಕವಿಖ್ಯಾತ ಅಭಿಜ್ಞಾನ ಶಾಕುಂತಲ, ಮೇಘದೂತ, ಕುಮಾರ ಸಂಭವ ಮೊದಲಾದ ಕೃತಿಗಳನ್ನು ಬರೆದ ಮುಗ್ಧ ನೀಲಕಂದನ ಕಾಳಿದಾಸನಾದದ್ದು ಹೆಂಡತಿಯಿಂದನೆ.

ಸಿದ್ಧಾರ್ಥ ಬುದ್ಧನಾಗಿದ್ದು ಹೀಗೆ ಅಲ್ಲವೇ..? ಮದುವೆ ಆಗಿ, ಮಗ ರಾಹುಲ ಹುಟ್ಟಿದ ಮೇಲೆ. ಜಗವೆಲ್ಲ ಮಲಗಿರಲು ಎದ್ದು ನಡೆದ... ಆ ಸಮಯದಲ್ಲಿ ಎಚ್ಚರಗೊಂಡು ಹೆಂಡತಿ ಯಶೋಧರೆ ತಡೆದಿದ್ದರೆ, ಸತ್ಯ ಶೋಧನೆಗೆ ಹೋಗದಿರಿ ಎಂದು ಹಠ ಬಿದ್ದಿದ್ದರೆ ಜಗತ್ತಿಗೆ ಜ್ಞಾನ ಬೆಳಕು ದಕ್ಕುತ್ತಿತ್ತೆ? ಬದುಕಿನ ಸತ್ಯವನ್ನು ಹುಡುಕಿ ಹೊರಟ ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾಗಿ ಸತ್ಯದ ಹುಡುಕಾಟದಲ್ಲಿ ದೇಹವನ್ನು ವಿಪರೀತ ದಂಡಿಸಿಕೊಂಡು ಬದುಕಿನ ಕೊನೆ ಘಟ್ಟದಲ್ಲಿದ್ದ ಸುಜಾತ ಎಂಬು ಹೆಣ್ಣುಮಗಳು ಪಾಯಸ ನೀಡದೆ ಇದ್ದಿದ್ದರೆ.. ಸಿದ್ಧಾರ್ಥ ಬುದ್ಧನಾಗಲು ಸಾಧ್ಯವಿತ್ತೆ?

ಜನ್ನ ಯಶೋಧರ ಚರಿತೆ ಬರೆಯಬೇಕಾಗಿದ್ದು ಯಶೋಧರನ ಹೆಂಡತಿ ಅಮೃತಮತಿಯ ವಿಲಕ್ಷಣ ವ್ಯಕ್ತಿತ್ವಕ್ಕೆ ತಾನೆ? ಮಾವುತನ ಹಾಡಿಗೆ ದೀಪ ಉರಿದಿದ್ದೆ ನೆಪವಾಗಿ ಅವನನ್ನು ನೋಡದೆ ಮೋಹಿಸಿದ ಅಮೃತಮತಿ ಅವನ ವಿಕಾರ ಸ್ವರೂಪವನ್ನು ಸ್ವೀಕರಿಸಿದ್ದು ಅದ್ಭುತವಲ್ಲವೇ? ಅಷ್ಟಾವಂಕನನ್ನು ನೋಡಿ ಬಂದ ದಾಸಿ ವನ ವಿಕಾರತೆಯ ಬಗ್ಗೆ ಹೇಳಿದರೂ ಹಾಡಿಗೆ ಮನಸ್ಸುಕೊಟ್ಟಿದ್ದ ಅಮೃತಮತಿ 'ಮರುಳೆ ಪೊಲ್ಲಮೇಯೆ ಲೇಸು ನಲ್ಲರ ಮೆಯ್ಯೊಳ್' ಎಂದು ಅಸಹ್ಯಕರವಾಗಿದ್ದ ಅಷ್ಟಾವಂಕನೊಂದಿಗೆ ಪ್ರೀತಿಸತೊಡಗುತ್ತಾಳೆ. ಅಂತಹ ಅಷ್ಟಾವಂಕ ತಡಮಾಡಿ ಬಂದ ಅಮೃತಮತಿಗೆ ಮುಂದಲೆ ಹಿಡಿದು ನಿರ್ದಾಕ್ಷಿಣವಾಗಿ ಹೊಡೆಯುವಾಗ ಅವನ ಪ್ರೀತಿಗೆ ಹಪಹಪಿಸುವ ಅಮೃತಮತಿ 'ಗಜವೆಡಂಗ, ನಿನ್ನನುಳಿದೊಡೆ ಸಾವವಳ್, ಎನಗೆ ಮಿಕ್ಕ ಗಂಡರ್ ಸೋದರ ಸಮಾನರ್'

ಎಂದು 'ನಿನ್ನನ್ನು ಬಿಟ್ಟು ಲೋಕದ ಪುರುಷರೆಲ್ಲ ಸಹೋದರರು' ಎಂದು ಹೇಳಿದಾಗ ಯಶೋಧರನ ಸ್ಥಿತಿ ಏನಾಗಿರಲಿಕ್ಕಿಲ್ಲ! ಹೂವಿನನಂತೆ ನೋಡಿಕೊಂಡಿದ್ದ ಹೆಂಡತಿಯ ಬಗೆಗೆ ಒಂದು ಕ್ಷಣ ಮನಸಲ್ಲಿ ಹಿಂಸೆಯ ಮುಖ ಹಾದುಹೋಗಿ ಸಂಕಲ್ಪ ಮಾತ್ರದಿಂದ ಮಾಡಿದ ಹಿಂಸೆ ಅವನ ಹಾಗೂ ಅವನ ತಾಯಿಯ ಅನೇಕ ಜನ್ಮಾಂತರಕ್ಕೆ ಕಾರಣವಾಗಲಿಲ್ಲವೇ?.

ವಿಶ್ವಾಮಿತ್ರ ನಕ್ಷತ್ರಿಕ ಅಷ್ಟೆಲ್ಲ ಕಷ್ಟಕೊಟ್ಟರೂ ಎಲ್ಲವನ್ನು ತಡೆದು ಕೊಂಡ ಹರಿಶ್ಚಂದ್ರ.. ಆದರೆ ಹೆಂಡತಿ ಅದನ್ನು ವಿರೋಧಿಸಬಹುದಾಗಿತ್ತು. ಪತಿಯೆ ಪರದೈವವೆಂದು ಬಗೆದದ್ದ ಅನುಸರಿಸಿದ್ದಕ್ಕಾಗಿ. ಹರಿಶ್ಚಂದ್ರನೆ ಕಡಿಯುವ ಸಂದರ್ಭ ಬಂದಾಗಲೂ ಪ್ರೀತಿಯಿಂದ ಸ್ವಿಕರಸಿದ್ದಕ್ಕಾಗಿ ಹರಿಶ್ಚಂದ್ರ ಎಂದು ಸತ್ಯದ ಹೆಸರಿನಲ್ಲಿ ಶಾಶ್ವತವಾಗಿ ಉಳಿದ.

'ಆಸೆಯಂಬುದು ಅರಸಂಗಲ್ಲದೆ ಶಿವಭಕ್ತರಿಗೆ ಉಂಟೆ ಅಯ್ಯಾ? ರೋಷವೆಂಬುದು ಯಮದೂತರಿಗಲ್ಲದೆ ಅಆತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇತಕಯ್ಯಾ ?' ಎಂದು ಸಂಗ್ರಹ ಬುದ್ಧಿಯನ್ನು ಆಯ್ದಕ್ಕಿ ಲಕ್ಕಮ್ಮ ಪ್ರಶ್ನಿಸಿದ್ದಕ್ಕಾಗಿ ಆಯ್ದಕ್ಕಿ ಮಾರಯ್ಯ ಇತಿಹಾಸದಲ್ಲಿ ಉಳಿದುಕೊಂಡ. ಅಲ್ಲವೇ?

ಬೆಂಜಮಿನ್ ಪ್ರಾಂಕ್ಲೀನ್ ದೊಡ್ಡ ವಿಜ್ಞಾನಿಯಾಗಲು ಅವನ ಸಿಟ್ಟಿನ ಹೆಂಡತಿಯಂದು ಎಲ್ಲೊ ಓದಿದ್ದ ನೆನಪು. ತಾನು ವಿಜ್ಞಾನಿಯಾಗಿದ್ದರೂ ಗಂಡನಿಗೆ ಪ್ರೋತ್ಸಾಹಿಸಿದ್ದು ಮೇಡಂ ಕ್ಯೂರಿ. ಇಬ್ಬರೂ ಕೂಡಿ ಸಂಶೋಧನೆ ನಡೆಸಿ ನೋಬೆಲ್ ಪಡೆದ ದಂಪತಿಗಳೆಂದೆ ಪ್ರಸಿದ್ಧರಾದರು.

ಗಾಂಧಿಜಿಯವರು 'ಆಕೆಯ ಜೀವನ ಹಾಗೂ ಸಾವು' ಲೇಖನದಲ್ಲಿ ಪತ್ನಿ ಕಸ್ತೂರ ಬಾ ಅವರ ಬಗ್ಗೆ ಮುಕ್ತವಾಗಿ ಬರೆದುಕೊಂಡಿದ್ದಾರೆ. ಗಾಂಧಿಜಿಯವರು'ಮೈ ಎಕ್ಸಪಿರಿಮೆಂಟ್ಸ್ ವಿತ್ ಟ್ರುತ್' ಕೃತಿಯಲ್ಲಿ ಹೆಂಡತಿಯ ಮೇಲೆ ಮಾಡಿದ ಕೆಲ ಪ್ರಯೋಗಗಳೇ ಭಯ ತರಿಸುವಂತಹವು. ಮದುವೆಯಾದ ನಲವತ್ತು ವಯಸ್ಸಿನ ಒಳಗೆ 'ನಾವು ಸಾಮಾನ್ಯ ದಂಪತಿಗಳಾಗಿದ್ದೇವೆ. 1906 ರಲ್ಲಿ ಪರಸ್ಪರ ಒಪ್ಪಿಗೆಯಿಂದ ಮತ್ತು ಪ್ರಜ್ಞಾಹೀನ ಪ್ರಯೋಗಗಳ ನಂತರ ನಾವು ಖಂಡಿತವಾಗಿಯೂ ಸ್ವಯಂ ಸಂಯಮದ ಜೀವವನದ ನಿಯಮವಾಗಿ ಅಳವಡಿಸಿಕೊಂಡಿದ್ದೇವೆ.ನನ್ನ ದೊಡ್ಡ ಸಂತೋಷಕ್ಕೆ ಇದು ನಮ್ಮನ್ನು ಹಿಂದೆಂದಿಗಿಂತಲೂ ಒಟ್ಟಿಗೆ ಸೇರಿಸಿತು" ಎಂದು ತಾವು ಕೈಗೊಂಡ ಬ್ರಹ್ಮಚರ್ಯ ವ್ರತದ ಬಗ್ಗೆ ಬರೆದುಕೊಳ್ಳುತ್ತಾರೆ. ಎಂತಹ ಕಠಿಣ ನಿಲುವು. ಕಸ್ತೂರ ಬಾ ನಂತರದಲ್ಲೂ ಗಾಂಧಿಜಿಯವ ಪ್ರತಿ ಚಳುವಳಿಯಲ್ಲಿ ಜೊತೆಯಾಗುತ್ತಾರೆ. ಅಹಮದಾಬಾದ, ಚಂಪಾರಣ್, ಬಾರ್ಡೋಲಿ, ಉಪ್ಪಿನ ಸತ್ಯಾಗ್ರಹ, ರಾಜಕೋಟ್ ಹೋರಾಟದ ನೇತೃತ್ವ ಹೀಗೆ ಪ್ರತಿ ಹೋರಾಟದಲ್ಲಿ ಬೆಂಬಲವಾಗಿ ನಿಲ್ಲುತ್ತಾರೆ ಜೈಲು ಸೇರುತ್ತಾರೆ.

ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರವರ ಯಶಸ್ವಿಗೂ ತಮ್ಮ ಹೆಂಡತಿಯ ಪ್ರಭಾವವನ್ನು ಮರೆತವಲ್ಲ. ಬಾಬಾ ಸಾಹೇಬ್ ಅವರು ತಮ್ಮ 'ಥಾಟ್ಸ್ ಆನ್ ಪಾಕಿಸ್ತಾನ' ಪುಸ್ತಕದ ಮುನ್ನುಡಿಯಲ್ಲಿ 'ಇನಸ್ಕ್ರೈಬ್ ಟು ದಿ ಮೇಮೊರಿ ಆಫ್ ರಾಮು' (ರಾಮು ಸ್ಮರಣೆಯಲ್ಲಿ ಬರೆದುದು) ಎಂದು ಪತ್ನಿ ರಮಾಬಾಯಿಯವರ ಬಗ್ಗೆ 'ಆಕೆಯ ವಿಶಾಲ ಹೃದಯತೆ, ಆಕೆಯ ಮನಸ್ಸಿನ ಉದಾತ್ತತೆ ಹಾಗು ಗುಣ ಸ್ವಭಾವದ ನಿಷ್ಕಲ್ಮಶ ಪರಿಶುದ್ಧತೆ, , ಅಸಾಧಾರಣ ಮನೋಸ್ಥೈರ್ಯ, ಒಂಟಿತನದ ದಿನಗಳಲ್ಲಿ ತಮ್ಮ ನೋವಿನಲ್ಲಿ ಜೊತೆಯಾದ ಆಕೆಯ ಸಿದ್ಧತೆ ಹಾಗೂ ಸ್ಥೈರ್ಯಕ್ಕಾಗಿ ಕೃತಜ್ಞತಾ ಪೂರ್ವಕವಾಗಿ ಇದನ್ನು ಬರೆದಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ ಹೆಂಡತಿ ಕನ್ನಂಬಾಡಿ ಕಟ್ಟಿಸಲು ತಮ್ಮ ಎಲ್ಲಾ ಒಡುವೆಗಳನ್ನು ಅಡವಿಟ್ಟಿದ್ದರಂತೆ. ಮಾದರಿ ಮೈಸೂರು ರಾಜ್ಯ ಅಂದಿನ 565 ಸಂಸ್ಥಾನಗಳಲ್ಲಿ ಕರೆಸಿಕೊಳ್ಳಬೇಕಾದರೆ.....ಅವರ ಹೆಂಡತಿಯ ನಿಸ್ವಾರ್ಥತೆಯೆ ಕಾರಣವಲ್ಲವೆ? ಇತ್ತೀಚಿಗೆ ವಿಶ್ವದ ಅತ್ಯಂತ ಜಗತ್ತಿನ ಪ್ರಭಾವಿ ಅತ್ತೆ ಎಂದು ಕರೆಸಿಕೊಂಡಿರುವ ಸುಧಾ ಮೂರ್ತಿ ಅವರ ಪತಿ ನಾರಾಯಣ ಮೂರ್ತಿ ಆ ಮಟ್ಟಕ್ಕೆ ಬರಬೇಕಾದರೆ ಅವರು ತಮ್ಮ ಬಂಗಾರವನ್ನೆಲ್ಲಾ ಮಾರಿ ಸ್ಥಾಪಿಸುವ ಕಂಪನಿಗೆ ಕೊಟ್ಟಿದ್ದರೆಂಬುದು ಎಲ್ಲೊ ಕೇಳಿದ ನೆನಪು.

ಪ್ರಧಾನ ಮಂತ್ರಿಯ ಹೆಂಡತಿಯಾದರೂ ಗಂಡನಂತೆ ಸರಳವಾಗಿ ಬದುಕಿದವರು ಲಾಲಬಹದ್ದೂರ ಶಾಸ್ತ್ರಿ ಅವರ ಹೆಂಡತಿ ಕಮಲಾ ಶಾಸ್ತ್ರಿ. ಮದುವೆಗೆ ದುಡ್ಡಿಲ್ಲ ಎಂದು ಬಂದವರಿಗೆ ತಾನು ಗಂಡ ಕೊಡುವ ಹಣದಲ್ಲಿ ಉಳಿದಿದ್ದನ್ನು ಕೊಟ್ಟಾಗ ವಿಚಾರಿಸಿದ ಶಾಸ್ತ್ರಿಯವರು ಪ್ರಧಾನಿ ಕಾರ್ಯಾಲಯಕ್ಕೆ ಬರುವ ತಿಂಗಳಿನಿಂದ ಇಂತಿಷ್ಟು ವೇತನ ಕಡಿಮೆ ಮಾಡಿ ಕಳಿಸಿ ಎಂದು ಪತ್ರ ಬರೆಯಬೇಕಾದರೆ ಎಲ್ಲವನ್ನೂ ತಾಳಿಕೊಂಡ ಹೆಂಡತಿ ಇದ್ದುದ್ದಕ್ಕಾಗಿ ಅಲ್ಲವೇ?

ಪತ್ರಕರ್ತರಾಗಿಯೂ ಪ್ರಮಾಣಿಕತೆ ಮೆರೆದು, ವಿಶ್ವೇಶ್ವರಯ್ಯನವರು ಗೌರವ ಅಭಿಮಾನ ಪೂರ್ವಕವಾಗಿ ಕೊಟ್ಟ ಚೆಕ್ಕುಗಳನ್ನೆಲ್ಲ ಧಿಕ್ಕರಿಸಿದರೂ ನೋಡುತ್ತಾ ಕುಳಿತ, ಹರಿದ ಸೀರೆಯಲ್ಲಿ ಪಕ್ಕದ ಮನೆಯವರು ಮಂಗಲ ಕಾರ್ಯಕ್ಕೆ ಹೋದರೆ ಎಲ್ಲಿ ಗಂಡನ ಘನತೆಗೆ ಕುಂದಾಗುತ್ತೆ ಎಂದು ತಾಳ್ಮೆ ಸಹಿಸಿಕೊಂಡ ಸೀತಮ್ಮನವರಿಂದ ಡಿ.ವಿಜಿ ಲೋಕವಿಖ್ಯಾತರಾಗಿದ್ದಲ್ಲವೇ?

'ಒಂದಿರಳು ಕನಸಿನಲಿ ನನ್ನವಳ ಕೇಳಿದೆನು ಚನ್ನ ನಿನಗಾವುದೆಂದು' 'ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತ' ಮೊದಲಾದ ದಾಂಪತ್ಯ ಗೀತೆಗಳನ್ನು ಬರೆದ ಕೆ.ಎಸ್. ನರಸಿಂಹ ಸ್ವಾಮಿಗಳಿಗೆ ಮೈಸೂರ ಮಲ್ಲಿಗೆಯಂತಹ ಎವರ್ ಗ್ರೀನ್ ಸಂಕಲನದಲ್ಲಿಯ ಎವರ್ ಗ್ರೀನ್ ಗೀತೆಗಳು ಹುಟ್ಟಬೇಕಾದರೆ...ಕಾರಣ ಅವರ ಹೆಂಡತಿ ವೆಂಕಮ್ಮನವರಲ್ಲವೇ?

ಇನ್ನೂ ಏನೆ ಇದ್ದರೂ ಇಂಗ್ಲೀಷ್ ಶ್ರೇಷ್ಠ ಕನ್ನಡ ಎಂದರೆ ನಿಕೃಷ್ಟರಾಗಿ ಕಾಣುತ್ತಿದ್ದ ನಮ್ಮ ಹಾಸ್ಯಬ್ರಹ್ಮ ಬಳ್ಳಾರಿಯ ಬೀಚಿ ಕನ್ನಡಕ್ಕೆ ಪರಿಚಯಿಸಿದವರು ಯಾರು..? ಅವರ ತಲೆಯಲ್ಲಿಯ ಹುಚ್ಚನ್ನು ಬಿಡಿಸಿದವರಾರು? ಆವತ್ತು ಹೆಂಡತಿ ಸೀತಾಬಾಯಿಯವರು ತರಿಸಿಕೊಂಡಿದ್ದ ಸಂಧ್ಯಾರಾಗವನ್ನು ಓದಿ ಮರುದಿನ ಊರಿಗೆ ಹೊರಟಿದ್ದ ಬೀಚಿಯವರಿಗೆ ಓದಿ ಎಂದು ಒತ್ತಾಯಿಸಿದ್ದಕ್ಕೆ. ಅದು ಟ್ರೇನಿನಲ್ಲಿ ಕನ್ನಡ ಪುಸ್ತಕವನ್ನು ಓದುವದನ್ನು ನೋಡಿದರೆ ತನ್ನ ಮರ್ಯಾದೆಗೆ ಕುಂದು ಎಂದು ಇಂಗ್ಲೀಷ ಪುಸ್ತಕದ ಮಧ್ಯ ಇಟ್ಟುಕೊಂಡು ಹೆದರಿ ಓದುತ್ತಿದ್ದ ಬೀಚಿಯವರನ್ನು ಕನ್ನಡ ಸಾಹಿತ್ಯಕ್ಕೆ ಹೊರಳಿಸಿದ್ದು ಅನಕೃ ಅವರ ಅದೆ ಸಂಧ್ಯಾರಾಗ ಕಾದಂಬರಿ. ಅವರ ಹೆಂಡತಿ ಓದು ಬಲ್ಲವರಾಗಿರದಿದ್ದರೆ ಕನ್ನಡಕ್ಕೆ ಇಂತಹ ಹಾಸ್ಯದ ಸಂಪತ್ತು ದಕ್ಕುತ್ತಿತ್ತೆ? ಅವರ ಹೆಸರು ಹೇಳಿಕೊಂಡು ಅನೇಕ ಮಂದಿ ನಗೆಯನ್ನೆ ಮಾರಿ ಜೀವಿಸುವವರು ಉದ್ಧಾರವಾಗುತ್ತಿದ್ದರೆ.

ನಟಸಾರ್ವಭೌಮ ಡಾ.ರಾಜಕುಮಾರ ಅವರು ಆ ಉತ್ತುಂಗಕ್ಕೆ ಏರಬೇಕಾದರೆ ಅವರ ಪ್ರತಿಭೆ ಇರಬಹುದು. ಆದರೆ ಎಲ್ಲವನ್ನು ಅಳೆದು ತೂಗಿ ಪಾತ್ರ ನೀಡುತ್ತಿದ್ದ. ಎಲ್ಲಾ ಮನೆಯ ವ್ಯವಹಾರವನ್ನು ನಿಭಾಯಿಸುತ್ತಿದ್ದು ಹೆಚ್ಚುಕಮ್ಮಿ ಹಲವು ಯಶಸ್ವಿ ಚಿತ್ರಗಳ ನಿರ್ಮಾಪಕಿ ಎಂದೆನಿಸಿಕೊಂಡವರು....! ಪಾರ್ವತಮ್ಮವರಲ್ಲವೆ....?

ಇನ್ನೂ ಕೇರಳ ರಾಜ್ಯ ಸಾಕ್ಷರತೆ ಮೊದಲು ಮಾಡಿ ಹಲವು ಕ್ಷೇತ್ರಗಳಲ್ಲಿ ಮುಂದುವರೆದ ರಾಜ್ಯ ಎನ್ನುವುದು ನನ್ನ ಸಿಮೀತ ಅಧ್ಯಯನದ ಗ್ರಹಿಕೆ. ಅಲ್ಲಿ ಹೆಚ್ಚಾಗಿ ಮನೆಯ ಯಜಮಾನಿಕೆಯ ಮಹಿಳೆದೆ ಇದೆ ಎನ್ನುವುದು ಓದಿದ್ದ ನೆನಪು. ಆ ರಾಜ್ಯದ ಬಲವರ್ಧನೆಗೆ ಈ ಅಂಶವೂ ಕಾರಣ ಇರಬಹುದೇ?

ಇದೇನ್ರಿ ಇದು ವೈಜ್ಞಾನಿಕ ವರದಿಯೂ, ಸಾಮಾಜೋಧಾರ್ಮಿಕ ಜಿಜ್ಞಾಸೆಯೋ, ಸಮೀಕ್ಷೆಯೋ, ಇದಕ್ಕೆ ಆಧಾರ, ತಲೆ ಬುಡ.. ಅಂತದೆಲ್ಲಾ ದೊಡ್ಡ ಪ್ರಶ್ನೆಗಳನ್ನು ಹಾಕಬೇಡಿ.

ನಮ್ಮ ಡುಂಡಿರಾಜರು ಹನಿಗವಿತೆಯಲ್ಲಿ

'ಗಂಡನ ಯಶಸ್ಸಿಗೆ ಕಾರಣ

ವೈಫು

ವೈಫಲ್ಯತೆಗೂ

ವೈಫು'

ಎನ್ನುತ್ತಾರೆ. ಅವರ ಮಾತಿಗೆ ಪುಷ್ಟಿಕೊಡುವಂತೆ ವಿಸ್ತರಿಸಬಹುದಾದರೆ ಹೆಂಡತಿ ಸೈಲೆಂಟ ಆಗಿರಬೇಕು ಇಲ್ಲವೆ ವೈಲೆಂಟ್ ಆಗಿರಬೇಕು ಇಲ್ಲ ಡಿಫರೆಂಟ್ ಆಗಿದ್ದರೆ ಪತಿ ಪ್ರಕಾಶಿಸುತ್ತಾನೆ. ಗಂಡನನ್ನು ಹೆಂಡತಿ ಅಥವಾ ಹೆಂಡತಿಯನ್ನು ಗಂಡ ಅನುಸರಿಸಿ ನಡೆಯುವ ಸಂಸಾರ ಸಾಮಾನ್ಯ ಸಂಸಾರ, ಅರಾಮ ಉಂಡು, ಮಲಗತಾ ಸಾಮಾನ್ಯನಾಗಿ ಬದುಕು ಸಾಗಿಸಿ ಬೇಗ ಫೋಟೊಕ್ಕೆ ಹಾರ ಹಾಕಿಸಿಕೊಳ್ಳುತ್ತಾನೆ ಎನ್ನುವುದು ನನ್ನ ವೈಯಕ್ತಿಕ ನಿಲುವು.

ಎಷ್ಟೆ ಮುಂದುವರೆದಿದ್ದರೂ ನಾವು ಹೆಣ್ಣೆಂದರೆ ಮೂಗು ಮುರಿಯುತ್ತೇವೆ. ಅನಿಷ್ಠ ಅನ್ನುತ್ತೇವೆ. ಗಂಡು ಮಗುವಿನ ಆಸೆ, ಭ್ರೂಣ ಹತ್ಯೆಯ ಕಾರಣದಿಂದಾಗಿ ಅನೇಕರಿಗೆ ಹೆಣ್ಣು ಸಿಗದೆ ಅಜನ್ಮ ಬ್ರಹ್ಮಚಾರಿಗಳಾಗಿ ನಿಸ್ತೇಜ ಬದುಕು ಸಾಗಿಸುವಂತಾಗುತ್ತಿದೆ. ಹೆಣ್ಣು ಸಿಗದ ಕಾರಣದಿಂದ ಜಾತಿ ವ್ಯವಸ್ಥೆಯ ಸಂಪ್ರದಾಯಗಳು ಸಡಿಲಗೊಂಡು ವಿಭಿನ್ನ ಸಂಸ್ಕೃತಿ ಬಲಗೊಳ್ಳುತ್ತಿದೆ. ಒಳ್ಳೆಯ ಆಶಾದಾಯಕ ಬೆಳವಣಿಗೆಯೆ. ಆದರೂ ನಾನು ಉದಾಹರಿಸಿದ ಎಲ್ಲೆಡೆ ಬೆಳಗಬಲ್ಲ ಇಂತಹ ಹೆಂಡತಿಯರ ಸಂಖ್ಯೆ ಲೋಕದಲ್ಲಿ ಹೆಚ್ಚುತ್ತಿರುವ ಕಲಹ, ಅಸಹನೆ, ಅತೃಪ್ತಿ, ಭ್ರಷ್ಟಾಚಾರ, ಧರ್ಮ ಅಸಹಿಷ್ಣುತೆ ತಡೆಗಟ್ಟಲು ಸಲುವಾಗಿಯಾದರೂ ಸಾವಿರವಾಗಲಿ..... ಗಂಡುಗಳು ಬದಲಾಗಿ 'ಉದರಾಚರಿತಾನಾಂತು ವಸುದೈವಕ ಕುಟುಂಬಕಂ' ಎನ್ನುವ ಉಕ್ತಿ ನಿಜ ಅರ್ಥದಲ್ಲಿ ಜಾರಿಗೆ ಬರುವಂತಾಗಲಿ.

'ಕವಿಗಳ್ ಕೃತಿ ಬಂಧದೊಳಲ್ತೆ ಕಟ್ಟಿದರ್, ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳ ಮೋಕವೀಂದ್ರಾ' ಎಂದು ನೇಮಿಚಂದ್ರ ತೀರ್ಪು ಕೊಡುವಂತೆ ನನ್ನ ಪ್ರಬಂಧಕ್ಕೆ ತಾವು ತೀರ್ಪುಕೊಡದೆ ಒಂದಿಷ್ಟು ಯೋಚಿಸಿ ಎನ್ನುವುದು ನನ್ನ ಮನವಿ. ■

**ಮಿಂಚಿಕೆ**

ಚುಟುಕ ಚಿಲ್ಲರೆ
ಕವನ ನೋಟು
ಕವನ ನೌಕೆ
ಚುಟುಕ ಬೋಟು

**–ಕೆ.ಎಸ್. ನಿಸಾರ್ ಅಹಮದ್**

# ವೈಯನ್ಕೆ

ಜೋಗಿ

* ಮಗಳು ಹೇಮಾ ತೀರಿಕೊಂಡಾಗ ಖ್ಯಾತ ಕತೆಗಾರ, ಮಾಲ್ಗುಡಿ ಡೇಸ್ ಸೃಷ್ಟಿಕರ್ತ ಆರ್ ಕೆ ನಾರಾಯಣ್ We are all in the queue. She Jumped the Queue. ತಮ್ಮ ಮಗ ರಾಮು ಸತ್ತಾಗ ದೇವುಡು ಹೇಳಿದ್ದು: Everything is in order, but we don't know the order.

* ಅತ್ಯಂತ ಜನಪ್ರಿಯ ಕಾದಂಬರಿಕಾರ ಆರ್ನಾಲ್ಡ್ ಬೆನೆಟ್ ಸದಾ ತನ್ನ ಪರ್ಸಿನಲ್ಲಿ 50 ಪೌಂಡ್ ಇಟ್ಟುಕೊಂಡಿರುತ್ತಿದ್ದನಂತೆ. ತನ್ನ ಪುಸ್ತಕ ಓದುತ್ತಿರುವ ಯಾರಾದರೂ ಕಣ್ಣಿಗೆ ಬಿದ್ದರೆ, ಅವರಿಗೆ ಐವತ್ತು ಪೌಂಡ್ ಕೊಡುವ ನಿರ್ಧಾರ ಅವನದು. ಬೆನೆಟ್ ಸತ್ತಾಗ ಅವನ ಜೇಬಲ್ಲಿ ಆ ಮಡಿಚಿಟ್ಟ ನೋಟು ಹಾಗೆಯೇ ಇತ್ತಂತೆ.

ಇಂಟರ್ನೆಟ್ ಇಲ್ಲದ ಕಾಲದಲ್ಲಿ ಇಂಥ ಸಂಗತಿಗಳನ್ನೆಲ್ಲ ಹುಡುಕಿ ಹೇಳುತ್ತಿದ್ದ, ಬರೆಯುತ್ತಿದ್ದ ಗೂಗಲ್ ಸರ್ಚ್ ಇಂಜಿನಿನಂತೆ ಇದ್ದವರು ವೈಯನ್ಕೆ, ಏಲಿಯಾಸ್ ವೈ ಎನ್ ಕೃಷ್ಣಮೂರ್ತಿ. ಪ್ರಜಾವಾಣಿ, ಕನ್ನಡಪ್ರಭ ಪತ್ರಿಕೆಗಳ ಸಂಪಾದಕರಾಗಿದ್ದವರು. ವಂಡರ್-ಕಣ್ಣು ಅಂಕಣ ಬರೆಯುತ್ತಿದ್ದವರು, ಪದ್ಯ ಇಷ್ಟು ಲೈಟಾದರೆ ಹೇಗೆ ಸ್ವಾಮಿ ಮತ್ತು ತೀರ್ಥರೂಪ ಎಂಬ ಎರಡು ಕವನ ಸಂಕಲನ ಬರೆದವರು. ಕನ್ನಡದ ಬಹುತೇಕ ಲೇಖಕರ ಜತೆಗಿದ್ದವರು. ಹೊಸಬರನ್ನು ಬೆಳೆಸಿದವರು. ತಾನು ಕಡಿಮೆ ಬರೆದು ಹೆಚ್ಚು ಬರೆಸಿದವರು.

ಇವತ್ತು ಅವರ 95ನೇ ಹುಟ್ಟುಹಬ್ಬ. ಮೇ 16, 1926ರಲ್ಲಿ ಹುಟ್ಟಿದ ವೈಯನ್ಕೆ 1999 ಅಕ್ಟೋಬರ್ 16ರಂದು ಆಕಾಶಮಾರ್ಗದಲ್ಲಿ ಕಣ್ಮರೆಯಾದರು. ಅವರ ಕುರಿತು ನಾನು ಬರೆದ ಸುದೀರ್ಘ ಟಿಪ್ಪಣಿಯೊಂದು ಇಲ್ಲಿದೆ:

ನಮ್ಮ ಮನೆಯಲ್ಲಿ ಬಹಳ ವರ್ಷಗಳ ಕಾಲ ಇದ್ದದ್ದು ಇದೊಂದೇ ಫೋಟೋ. ಮನೆಗೆ ಬಂದವರೆಲ್ಲ ಯಾರಿದು, ನಿಮ್ಮಪ್ಪನಾ ಅಂತ ಕೇಳುತ್ತಿದ್ದರು. ನಾನು 'ಅವರು ಬಿಲ್ಡರ್ ಕೃಷ್ಣಮೂರ್ತಿ ಅಂತ. ತುಂಬ ದೊಡ್ಡ ರಿಯಲ್ ಎಸ್ಟೇಟ್ ಇಟ್ಟುಕೊಂಡವರು. ಈ ಮನೇನ ಕಟ್ಟಿಸಿ ನನಗೆ ಕಾಣಿಕೆಯಾಗಿ ಕೊಟ್ಟರು. ಅವರು ವರುಷಕ್ಕೊಬ್ಬ ಸಜ್ಜನರಿಗೆ ಒಂದು ಮನೆ ಗಿಫ್ಟ್ ಕೊಡುತ್ತಾರೆ' ಎಂದು ಹೇಳಿ ಬಂದವರ ಹೊಟ್ಟೆ ಉರಿಸುತ್ತಿದ್ದೆ.

ಹೀಗೆ ಹೊಟ್ಟೆ ಉರಿಸುವುದನ್ನು ಕಲಿಸಿದ್ದೂ ಅವರೇ. ರಾತ್ರಿ ಬೆಂಗಳೂರು ವಿಹಾರ ಕೇಂದ್ರದಿಂದ ನನ್ನ ಸ್ಕೂಟರಿನಲ್ಲಿ ಮರಳುತ್ತಿರಬೇಕಾದರೆ, ಶಿವಮೊಗ್ಗ ಸುಬ್ಬಣ್ಣ ಮನೆಯ ಮುಂದೆ, ಒಂಚೂರು ನಿಧಾನ ಮಾಡಿ, ಸುಬ್ಬಣ್ಣಾ, ಸುಬ್ಬಣ್ಣಾ, ಸು ತೆಗೆದರೆ ಬಣ್ಣ, ಬ ತೆಗೆದರೆ ಸುಣ್ಣ ಎಂದು ಕಿರುಚಿ, ಸುಬ್ಬಣ್ಣ ಹೊರಗೆ ಬರುವಷ್ಟರಲ್ಲಿ ಮಾಯವಾಗುತ್ತಿದ್ದದ್ದು. ನಾಡಿಗರ ಮನೆ ಮುಂದೆ ಹೋಗುವಾಗ, ನಾಡಿಗಾ ನೀನು ಹೋಗುವುದು ಕಾಡಿಗಾ ಸುಡುಗಾಡಿಗಾ ಅಂತ ಹಾಡುತ್ತಿದ್ದದ್ದು. ರಾಮಚಂದ್ರ ಶರ್ಮರನ್ನು ಕ್ರಿಸ್ತಪೂರ್ವ ವರ್ಮ ಎಂದು ಕರೆಯುತ್ತಿದ್ದದ್ದು. ಲಂಕೇಶರನ್ನೂ ಅನಂತಮೂರ್ತಿಯನ್ನೂ ಏಕಕಾಲಕ್ಕೆ ಬೈಯುತ್ತಲೇ ಮೆಚ್ಚಿಕೊಳ್ಳುತ್ತಿದ್ದದ್ದು, ಪಾಬ್ಲೋ ನೆರುಡಾ ಅಂದರೆ ವಿಶ್ವಸಾಹಿತ್ಯದ ಗರುಡಾ ಅಂತ ಪ್ರಾಸ ತೆಗೆಯುತ್ತಿದ್ದದ್ದು, ರಶ್ಯಕ್ಕೆ ಹೋಗಿ ಬಂದ ಗೋಪಾಲಕೃಷ್ಣಯ್ಯನವರನ್ನು ಗೋಪ್‌ಸ್ಕಿ ಅಂತ ಕರೆಯುತ್ತಾ ಅವರ ಮನೆಗೆ ಪ್ರತಿ ಭಾನುವಾರ ಭೇಟಿ ನೀಡಿ ಅವರನ್ನು ನಗಿಸುತ್ತಿದ್ದದ್ದು.

ಅವರು ವೈಯನ್ಕೆ. ಅವರು ನನ್ನ ಮತ್ತು ನನ್ನಂಥ ಅನೇಕ ಪತ್ರಕರ್ತರ ಗುರುಗಳು. ಯಾರಾದರೂ ಬೆಳಗ್ಗೆ ಫೋನ್ ಮಾಡಿ, ಇಂಥದ್ದೊಂದು ಸುದ್ದಿ ನಿಮ್ಮಲ್ಲಿ ಬಂದೇ ಇಲ್ಲ, ಬೇರೊಂದು ಪತ್ರಿಕೆಯಲ್ಲಿ ಬಂದಿದೆ ಅಂದರೆ, ಹಾಗಿದ್ರೆ ಆ ಬೇರೊಂದು ಪತ್ರಿಕೇನೇ

ಓದ್ಕೋ ಅಂತ ನಿರುಮ್ಮಳವಾಗಿ ಹೇಳುತ್ತಿದ್ದವರು. ಏಳು ಗಂಟೆಯ ನಂತರ ಯಾವತ್ತೂ ಆಫೀಸಿನಲ್ಲಿ ಇದ್ದವರಲ್ಲ. ಸುದ್ದಿಯ ಹಿಂದೆ ಬಿದ್ದವರೂ ಅಲ್ಲ. ಸುದ್ದಿ ಮಿಸ್ಸಾದರೆ ಚಿಂತೆ ಮಾಡಿದವರೂ ಅಲ್ಲ. ಯಾರಾದರೂ ವಾರಪೂರ್ತಿ ಕೆಲಸ ಮಾಡುತ್ತಿದ್ದರೆ, ಬೈದು ರಜೆ ತಗೋ ಅನ್ನುತ್ತಿದ್ದವರು.

ಬೆಳಗ್ಗೆ ಒಂದು ಇಡ್ಲಿ ಬೆಣ್ಣೆ, ಮಧ್ಯಾಹ್ನ ಬಾದಾಮಿ, ಗೋಡಂಬಿ, ದ್ರಾಕ್ಷಿ ತಲಾ ಎರಡೆರಡು ಮತ್ತು ಒಂದು ಗ್ಲಾಸು ಕಾಂಪ್ಲಾನ್, ರಾತ್ರಿ ಹೊಟ್ಟೆ ತುಂಬ ಊಟ, ಅದಕ್ಕೂ ಮುಂಚೆ ಎರಡು ಪೆಗ್ಗು ಸ್ಕಾಚು– ವೈಯನ್ಕೆ ಜೀವನ ಇಷ್ಟೇ. ಮಗುವಿನಷ್ಟೇ ಹಠಮಾರಿ ಮುಗ್ಧರಾಗಿದ್ದ ಅವರು ಯಾರ ಮಾತನ್ನೂ ಕೇಳುತ್ತಿರಲಿಲ್ಲ. ನನ್ನ ಮಾತನ್ನೂ ಯಾರೂ ಕೇಳಬೇಡಿ ಅನ್ನುತ್ತಿದ್ದರು. ಸರಿ, ಕೇಳೋಲ್ಲ ಅಂದರೆ, ನೀವು ನನ್ನ ಮಾತನ್ನು ಕೇಳಿದಂತೆ ಆಯಿತಲ್ಲ ಎಂದು ನಗುತ್ತಿದ್ದರು.

ಶ್ರೀಪತಿ ಮತ್ತು ಹೋಮಿಯೋಪತಿ– ಇವೆರಡನ್ನು ಮಾತ್ರ ಗಾಢವಾಗಿ ನಂಬುತ್ತಿದ್ದ ವೈಯನ್ಕೆ ಆಪ್ತರ ಪಟ್ಟಿಯಲ್ಲಿದ್ದವರು ಎಂ ಎಸ್ ತಿಮ್ಮಪ್ಪ, ವಿಶ್ವೇಶ್ವರ ಭಟ್, ರವಿ ಹೆಗಡೆ ಮತ್ತು ನಾನು. ಬಿಟ್ಟರೆ, ಬಾಲಸುಬ್ರಹ್ಮಣ್ಯಂ ಜೊತೆ ಘನರೂಪಿ ಮಾತುಕತೆ. ಎಚ್ ಆರ್ ರಂಗನಾಥ್ ಜೊತೆ ಕ್ರಿಮಿನಾಲಜಿ ಚರ್ಚೆ. ನಾವು ಅವರ ಲಿಕ್ವಿಡ್ ಫ್ರೆಂಡ್ಸ್, ಮಿಕ್ಕವರು ಸಾಲಿಡ್ಡು!

ವೈಯನ್ಕೆಗೆ ಆಪ್ತರಾಗಿದ್ದವರೆಲ್ಲ ಅವರಿಗಿಂತ ಚಿಕ್ಕವರು. ಅವರ ಅರ್ಧವಯಸ್ಸಿನವರು. ತಮ್ಮ ಮಾತು ಅರ್ಥವಾಗದವರನ್ನು ಅವರು ಫಾ ಅಂತ ಕರೀತಿದ್ದರು. ಅರ್ಥ ಆದವರನ್ನು ಅಪಾಯಕಾರಿ ಅನ್ನುತ್ತಿದ್ದರು. ಮಿತ್ರರು ವಿದೇಶಕ್ಕೆ ಹೋಗುವಾಗ ಏನು ತರಲಿ ಅಂತ ಕೇಳಿದರೆ ಸಮ್ ಥಿಂಗ್ ಸ್ಪೆಷಲ್ ಅನ್ನುತ್ತಿದ್ದರು. ಅದೊಂದು ಆ ಕಾಲದ ಪ್ರಸಿದ್ಧ ಸ್ಕಾಚ್ ವಿಸ್ಕಿಯ ಹೆಸರು.

*ವಿಶ್ವಾಮಿತ್ರ, ಮೇನಕೆ, ಡಾನ್ಸ್ ನೋಡೋದು ಏನಕೆ? ಆಸ್ಕ್ ಮಿಸ್ಟರ್ ವೈಯೆನ್ಕೆ!

ಹೀಗೆ ಪದ್ಯ ಬರೆದು ಅವನ್ನು 'ಕವಿ–ತೆಗಳು' ಎಂದು ಕರೆದವರು ವೈಯೆನ್ಕೆ. ಇದನ್ನೋದಿದ ಕುತೂಹಲಿಗಳಿಗೆ ಅಂಥ ಮತ್ತಷ್ಟು ಪದ್ಯಗಳು ಕಾದಿದ್ದವು. 'ಶಂಕರಲಿಂಗೇಗೌಡರು ಹಚ್ಕೊಂಡಿದ್ರು ಪೌಡರು', 'ದೂರವಿರು ದೂರ್ವಾಸನೆ, ಬರುತಲಿದೆ ದುರ್ವಾಸನೆ', 'ಕಪಿಲವಸ್ತುವಿನ ರಾಜ ಶುದ್ಧೋದನ, ಅವನ ಮಗ ರಾತ್ರೋರಾತ್ರಿ ಎದ್ದೋದನ'– ಮುಂತಾದ ಎರಡೇ ಸಾಲುಗಳ ಕವಿತೆಗಳು. ಈ ಕವಿತೆಗಳ ಸಂಕಲನಕ್ಕ ಅವರಿಟ್ಟ ಹೆಸರು– ಪದ್ಯ ಇಷ್ಟು ಲೈಟಾದರೆ ಹೇಗೆ ಸ್ವಾಮಿ?. ಅದಾದ ನಂತರ ಬಂತು 'ತೀರ್ಥ–ರೂಪ'. ಅದಕ್ಕೊಂದು ಉಪಶೀರ್ಷಿಕೆ– 'ಮದ್ಯ ಇಷ್ಟು ಟೈಟಾದರೆ ಹೇಗೆ ಸ್ವಾಮಿ?' ಅದರಲ್ಲೂ ಪುಟ್ಟ ಪುಟ್ಟ ಪದ್ಯ– 'ಬೆಳಗ್ಗೆ ಸಂಜೆ ಮಧ್ಯಾಹ್ನ, ಕುಡೀತೀನ್ ನಾನು ಮದ್ಯಾನ, ಪೆಗ್ಗಲ್ ಅಳೀತೀನಿ ಜೀವ್ನಾನ.'

ವೈಯೆನ್ಕೆ ಇದ್ದಿದ್ದೂ ಹಾಗೆಯೇ. ಒಮ್ಮೆ ನಮ್ಮ ಒತ್ತಾಯದ ಮೇರೆಗೆ ಪುತ್ತೂರಿಗೆ ಬಂದಿದ್ದರು ಅವರು. ಎಲ್ಲೇ ಇರಲಿ, ಹೇಗೆ ಇರಲಿ ಏಳು ಗಂಟೆಗೆಲ್ಲ ಅವರು ಹೊರಟುಬಿಡಬೇಕು– ಪಿಎಚ್ಡಿ ಮಾಡುವುದಕ್ಕೆ. ಪಿಎಚ್ಡಿ ಅಂದರೆ Precious hour of drinking. ಅವರು ತಮ್ಮನ್ನು 'ಸನ್ ಡೌನರ್' ಎಂದು ಕರೆದುಕೊಳ್ಳುತ್ತಿದ್ದರು. ಅಂದರೆ ಸನ್ ಡೌನ್ ಆಗುತ್ತಿದ್ದಂತೆ ಶುರುವಾಗಬೇಕು ಪಿಎಚ್ಡಿ. ಪುತ್ತೂರಲ್ಲಿ ಯಾರೋ ಕೊಂಚ ಹೊತ್ತು ಜಾಸ್ತಿ ಮಾತಾಡಿದ್ದರು. ಆಗಲೇ ಏಳು ಗಂಟೆಯಾಗಿತ್ತು. ವೈಯೆನ್ಕೆ ಮಾತಾಡುತ್ತಾರೆ ಎಂದು ಘೋಷಿಸಿದ್ದೇ ತಡ, ಎರಡೇ ಎರಡು ಮಾತಾಡಿ 'ಎಲ್ಲಿ ಕುಂಟಿನಿ?' ಎಂದು ಕರೆದು ಹೊರಟೇ ಬಿಟ್ಟಿದ್ದರು. ಭಾಷಣದ ಮುಂದಿನ ಭಾಗ 'ಹೊಟೆಲ್ ರಾಮ'ದಲ್ಲಿ.

ವೈಯೆನ್ಕೆಗೆ ಇಷ್ಟವಾಗುವ ಆರಾಮದಲ್ಲಿ. ಜೊತೆಗೆ ದ.ಕ.ದವರಿಗೆ ಟೈಮ್ ಸೆನ್ಸ್ ಇಲ್ಲ ಎಂಬ ಕಂಪ್ಲೇಂಟು.

ಅವರ ಸಮಯಪ್ರಜ್ಞೆಗೆ ನಾನು ಸಂಪೂರ್ಣ ವಿರೋಧಿ. ಏಳು ಗಂಟೆಗೆ ಎಂದರೆ ನಾನು ಎಂಟೂವರೆಗೆ ಹೋಗುತ್ತಿದ್ದೆ. ಆಗೆಲ್ಲ ವೈಯೆನ್ಕೆ ಬೈಯುತ್ತಿದ್ದರು; ನೀವು ಎಲ್ಲಾದರಲ್ಲೂ ಲೇಟು, ಸಾಯೋದೂ ಲೇಟು. ಅದು ಬೈಗಳೋ ಆಶೀರ್ವಾದವೋ ಇವತ್ತಿಗೂ ಅರ್ಥವಾಗಿಲ್ಲ.

ಅವರನ್ನು ಅರ್ಥ ಮಾಡಿಕೊಳ್ಳುವುದು ಸುಲಭದ ಸಂಗತಿಯಾಗಿರಲಿಲ್ಲ. ಅವರು ಯಾವ ಮಾತನ್ನೂ ಪೂರ್ತಿಯಾಗಿ ಆಡಿದ್ದಿಲ್ಲ. ಮೊದಲ ಸಲ ಭೇಟಿಯಾದಾಗ ಅದನ್ನು ಅರ್ಥಮಾಡಿಕೊಳ್ಳುವುದಕ್ಕೆ ನನಗೆ ದುಭಾಷಿ ಬೇಕಾಯಿತು. ಅವರ ಮನೆಗೆ ನನ್ನನ್ನು ಕರೆದುಕೊಂಡು ಕೊಂಡ ಕೆ. ಸತ್ಯನಾರಾಯಣ ಅವರೇನು ಹೇಳಿದರು ಅನ್ನುವುದನ್ನು ಆಮೇಲೆ ಹೇಳಿದರು. ಆರೆಂಟು ಬಾರಿ ಅವರ ಮಾತು ಕೇಳಿದ ನಂತರ ನನ್ನ ಕಿವಿ ಒಂದು ಹದಕ್ಕೆ ಬಂತು. ಹಾಗಂತ ಅರ್ಥವಾಗಲಿಲ್ಲ ಎಂದು ಮತ್ತೊಮ್ಮೆ ಕೇಳಿದಿರೋ ಬೈಗಳು ಖಾತ್ರಿ. ಒಂದು ಸಲ ಹೇಳೋದಕ್ಕೆ ಅವರಿಗೇ ರೇಜಿಗೆ. ಅದನ್ನೇ ಮತ್ತೆ ಹೇಳಬೇಕು ಅಂದರೆ ಊಹಿಸಿ.

****

'ಸಂಸ್ಕಾರ' ಚಿತ್ರಕ್ಕೆ ಪೂರ್ವಸಂಸ್ಕಾರ ಆದದ್ದು ವೈಯೆನ್ಕೆ ಮನೆಯಲ್ಲಿ. ವಿಷ್ಣುವರ್ಧನ್ 'ವಂಶವೃಕ್ಷ'ದಲ್ಲಿ ನಟಿಸುವುದಕ್ಕೆ ವೈಯೆನ್ಕೆ ಕಾರಣ. ಲಂಕೇಶ್ ಒಂದು ಕವನಕ್ಕೆ ಧೈರ್ಯವಾಗಿ 'ದೇಶಭಕ್ತ ಸೂಳೇಮಗನ ಗದ್ಯಗೀತೆ' ಎಂದು ಹೆಸರಿಟ್ಟದ್ದಕ್ಕೆ ವೈಯೆನ್ಕೆ ಬೆಂಬಲ ಕಾರಣ. ನಿಸಾರರ ಸಂಕಲನಕ್ಕೆ 'ಮನಸು ಗಾಂಧೀಬಜಾರು' ಎಂದು ಶೀರ್ಷಿಕೆ ಕೊಟ್ಟದ್ದು ವೈಯೆನ್ಕೆ, ಶರ್ಮರ ಪದ್ಯವನ್ನು ಪ್ರೋತ್ಸಾಹಿಸಿದ್ದೂ ಅವರೇ. ಬಿವಿ ಕಾರಂತರ ರಂಗವಿಹಾರ ಆರಂಭವಾಗಿದ್ದು ವೈಯೆನ್ಕೆ ಮನೆಯಲ್ಲಿ

ಹೀಗೆ ಗಿರೀಶ್ ಕಾರ್ನಾಡ್, ಸಿಆರ್ ಸಿಂಹ, ಅನಂತಮೂರ್ತಿ, ಲಂಕೇಶ್, ರಾಘವ, ರಾಮಾನುಜನ್, ಶರ್ಮ, ಅಯ್ಯರ್, ನಾಡಿಗ–ಹೀಗೆ ಎಲ್ಲರೂ ವೈಯೆನ್ಕೆ ಪ್ರೀತಿಗೆ ಮತ್ತು ತುಂಟಾಟಕ್ಕೆ ತುತ್ತಾದವರೇ. ಒಮ್ಮೊಮ್ಮೆ ಇದ್ದಕ್ಕಿದ್ದ ಹಾಗೆ 'ನಡೀರಿ, ನಾಡಿಗರ ಮನೆಗೆ ಹೋಗೋಣ' ಅಂತ ಬೈಕು ಹತ್ತುತ್ತಿದ್ದರು. ಹೋಗುವಾಗ ನಾಡಿಗರ ಮೇಲೊಂದು ಹಾಡು ಬೇರೆ: 'ನಾಡಿಗಾ.. ನೀನು ಹೋಗುವುದು ಕಾಡಿಗಾ.. ಸುಡುಗಾಡಿಗಾ..' ಕಾರಂತರ 'ಸತ್ತವರ ನೆರಳು' ನೋಡಿದ ನಂತರದ ಕೆಲವು ದಿನ ಯಾರೇ ಫೋನ್ ಮಾಡಿದರೂ ವೈಯೆನ್ಕೆ 'ಹಲೋ' ಅನ್ನುತ್ತಿರಲಿಲ್ಲ. 'ಗೋವಿಂದ ವಿಠ್ಠಲಾ, ಹರಿಹರಿ ವಿಠ್ಠಾಲ' ಅನ್ನುತ್ತಿದ್ದರು.

ವೈಯೆನ್ಕೆಗೆ ಅವರದೇ ಆದ ಗೆಳೆಯರ ಬಳಗ ಅನ್ನೋದಿರಲಿಲ್ಲ. ಆ ರಾತ್ರಿಗೆ ಪಿಎಚ್ಡಿಗೆ ಯಾರು ಜೊತೆಯಾಗುತ್ತಿದ್ದರೋ ಅವರು ಅಂದಿನ ಗೆಳೆಯರು. ಗೆಳೆತನ ಎನ್ನುವುದು ಅವರಿಗೆ ಆ ಕ್ಷಣದ ಸತ್ಯ. ದ್ವೇಷ ಮಾತ್ರ ನಿತ್ಯಸತ್ಯ. ಕೆಲವೊಬ್ಬರನ್ನು ಅವರು ಯಾವತ್ತೂ ಹತ್ತಿರ ಬಿಟ್ಟುಕೊಂಡವರೇ ಅಲ್ಲ. ಅವರು ಸಹಿಸಿದ ಎರಡು ಸಂಗತಿಗಳೆಂದರೆ; ನೀಚತನ ಮತ್ತು ವಂಚನೆ. ಅವರನ್ನು ಕಂಡರೆ ಆಗದಿದ್ದವರು–ಗುಂಡು ಹಾಕದೇ ಇದ್ದರೆ ಅದು 'ನೀಚತನ', ಅವರಿಗೆ ಗುಂಡು ಕೊಡಿಸದೇ ಹೋದರೆ ಅದು 'ವಂಚನೆ' ಎಂದು ತಮಾಷೆಯಾಗಿ ಮಾತಾಡಿಕೊಳ್ಳುತ್ತಿದ್ದರು. ಅದು ವೈಯೆನ್ಕೆಗೆ ಗೊತ್ತಾದಾಗ ಅವರು 'ಹೇಳೋರ್ ಹೇಳ್ಕೊಳ್ಳಲಿ. ಡಿ ಕೆ ಬೋಸ್' ಅಂದಿದ್ದರು. ವೈಯೆನ್ಕೆಗೆ ಇಷ್ಟವಾದ ಬೈಗಳು ಅದು. ಡಿಕೆ ಬೋಸ್ ಅಂದರೆ ಬೋಸುಡೀಕೆ ಅಂತ ಕೆಲವರಿಗಷ್ಟೇ ಗೊತ್ತಿತ್ತು.

ಅವರ ಜೊತೆ ಅರ್ಧ ಗಂಟೆ ಕಳೆದರೆ ವಿಶ್ವ ಸುತ್ತಿ ಬಂದ ಅನುಭವವಾಗುತ್ತಿತ್ತು.

ನಾವೊಂದು ಹೇಳಿದರೆ, ಅವರು ಹತ್ತು ಹೇಳುತ್ತಿದ್ದರು. ಹೀಗೊಂದು ಕತೆ ಬರೆದಿದ್ದೇನೆ ಎಂದು ಶುರುಮಾಡುವ ಹೊತ್ತಿಗೆ 'ಹೆನ್ರಿ ಜೇಮ್ಸ್ ಓದಿದ್ದೀಯಾ, ನೈಪಾಲ್ ಕೆಟ್ಟ ರೈಟರ್, ಐರಿಶ್ ಬರ್ನಾಡ್ ಷಾ ಬೆಸ್ಟು, ಐಯ್ಯರಿಶ್ ಕೈಲಾಸಂ ಕೂಡ ಬೆಸ್ಟು, ಸಂಸ್ಕಾರ ಕಾದಂಬರಿ ಚೆನ್ನಾಗಿದೆ, ಕಮೂನ ಪ್ಲೇಗ್ಗಿಂತಲೂ ಚೆನ್ನಾಗಿದೆ' ಎಂದು ಹಲವರ ಬಗ್ಗೆ ತಿಳಿಸಿಕೊಡುತ್ತಿದ್ದರು. ಕವಿತೆಗಳೂ ನಾಟಕಗಳ ಸಾಲುಗಳೂ ಅವರಿಗೆ ಕಂಠಪಾಠ. ಫ್ರೆಂಚ್ ಪದ್ಯವೊಂದನ್ನು ಅವರು ಕಲಿತು ಹಾಡುತ್ತಿದ್ದರು.

ಜೇಮ್ಸ್ ಬಾಂಡ್ ಸಿನಿಮಾ, ಕಳ್ಳರ ಸಂತೆ, ಠಕ್ಕರ ತರಲೆ, ವಿಚಿತ್ರ ತಿರುವುಗಳಿರುವ ಕಾದಂಬರಿ, ಚಂದದ ದುಬಾರಿ ಕಾರು, ಇಂಗ್ಲಿಷ್ ಸುಂದರಿಯರು, ಪಾಪ್ ಸಂಗೀತ ಎಲ್ಲವನ್ನೂ ಮೆಚ್ಚುತ್ತಿದ್ದರು ವೈಯೆನ್ಕೆ. ಗಂಭೀರ ವಿಮರ್ಶೆಯ ವಿರೋಧಿ ಅವರು. ಗಂಭೀರ ಕಾವ್ಯವೆಂದರೂ ಅವರಿಗೆ ವೈಯಕ್ತಿಕವಾಗಿ ಅಷ್ಟಕ್ಕಷ್ಟೇ. ಆದರೆ ನವ್ಯಕಾವ್ಯ ಬಂದಾಗ ಅದನ್ನು ತೋರಣ ಕಟ್ಟಿ ಕೊಂಬು ಕಹಳೆಗಳೊಂದಿಗೆ ಸ್ವಾಗತಿಸಿದವರು ವೈಯೆನ್ಕೆ. ಅವರಿಗೆ ತುಂಬ ಮೆಚ್ಚುಗೆಯಾದವರು ಸುಬ್ಬಣ್ಣ ರಂಗನಾಥ ಎಕ್ಕುಂಡಿ. 'ಕುಳಿತರಿಲ್ಲಿ ಮತ್ಸ್ಯಗಂಧಿ, ಉಟ್ಟುಕೊಂಡು ಹರಕುಚಿಂದಿ' ಎಂಬ ಸಾಲನ್ನಂತೂ ಮತ್ತೆ ಮತ್ತೆ ಹೇಳುತ್ತಿದ್ದರು. ಹಡಗುಗಳ್ಳರ ಕತೆಗಳೆಂದರೆ ಅವರಿಗೆ ಪಂಚಪ್ರಾಣ. ಅಂಥ ಸಿನಿಮಾಗಳನ್ನು ನೋಡುತ್ತಿದ್ದರು. ಜ್ಯಾಕ್ ಲಂಡನ್ ಅವರ ಆದರ್ಶನಾಯಕ. ಖುಷಿಯಾದಾಗ ಗುನುಗುತ್ತಿದ್ದದ್ದು:

Oh my darling, Oh my darling, Oh my darling clementine.

Met a miner, Fortyniner, And his daughter clamentine ಎಂಬ ಹಾಡನ್ನು.

****

ವೈಯೆನ್ಕೆ ನವ್ಯಕಾವ್ಯಕ್ಕೇನು ಮಾಡಿದರು, ತಾನಿದ್ದ ಪತ್ರಿಕೆಯ ಜೊತೆ ಸೇರಿ ಹೇಗೆ ಹೊಸ ಕವಿಗಳಿಗೊಂದು ವೇದಿಕೆ ಕಲ್ಪಿಸಿಕೊಟ್ಟರು, ಲಂಕೇಶರ ಅಂಕಣ ಪ್ರಕಟಿಸಿದರು, ಸಿನಿಮಾ ವಿಮರ್ಶೆ ಬರೆಸಿದರು, ಸಿನಿಮಾ ಮಾಡಿಸಿದರು ಎಂಬುದೆಲ್ಲ ಬಹುತೇಕರಿಗೆ ಗೊತ್ತಿರುವ ಸಂಗತಿಗಳೇ. ಅವರ ಕುರಿತು ಬರೆದದ್ದನ್ನು ಓದುತ್ತಿದ್ದರೆ ಅವರೊಬ್ಬ ಹಾಸ್ಯಲೇಖಕ, ಹನಿಗವಿ ಎಂಬ ಭಾವನೆ ಉಕ್ಕುವಂಥ ಅನೇಕ ಲೇಖನಗಳು ಬಂದಿವೆ. ಅವರ ಪನ್–ಪಾಂಡಿತ್ಯವನ್ನೇ ಎಲ್ಲರೂ ಪ್ರಧಾನವಾಗಿಟ್ಟುಕೊಂಡು ಮಾತಾಡುತ್ತಾರೆ.

ಅವರ ವೈಯಕ್ತಿಕ ಜೀವನದ ಕುರಿತು ಅವರ ಆತ್ಮೀಯರಿಗೂ ಗೊತ್ತಿದ್ದಂತಿಲ್ಲ.

ಯಳಂದೂರಿನಲ್ಲಿ ಹುಟ್ಟಿದ ವೈಯೆನ್ಕೆ ಅವರನ್ನು ಪುಟ್ಟು ಅಂತ ಕರೆಯುತ್ತಿದ್ದರು. ಅವರ ಜೊತೆಗಿದ್ದವರು ಕಿಟ್ಟು. ಈ ಕಿಟ್ಟುಪುಟ್ಟು ಹೇಗೆ ಬೇರೆಯಾದರು? ವೈಯೆನ್ಕೆ ಯೌವನದ ದಿನಗಳಲ್ಲಿ ಯಾರನ್ನೋ ಪ್ರೀತಿಸಿದ್ದು ನಿಜವಾ? ಭಗ್ನಪ್ರೇಮ ಅವರ ಬ್ರಹ್ಮಚರ್ಯಕ್ಕೆ ಕಾರಣವಾ? ಇವನ್ನೆಲ್ಲ ಅವರ ಹತ್ತಿರ ಕೇಳುವ ಹಾಗೆಯೇ ಇರಲಿಲ್ಲ. ಹಾಗಂತ ಇಡೀ ದಿನ ಸಾಹಿತ್ಯದ ಕುರಿತು ಮಾತಾಡುತ್ತಾ ಕೂತರೂ ಅವರಿಗೆ ಸಿಟ್ಟು ಬರುತ್ತಿತ್ತು. 'ಸಾಹಿತ್ಯದ ಜೀವನದ ಐದು ಪರ್ಸೆಂಟ್ ಇರಬೇಕು ಅಷ್ಟೇ. ಅದನ್ನೇ ಇಡೀ ದಿನ ಹೇಳಿಕೊಂಡು ಓಡಾಡಬಾರದು' ಅನ್ನುತ್ತಿದ್ದರು. ಗಾಂಧೀಬಜಾರಿನಲ್ಲಿ ಸುಬ್ಬಮ್ಮನ ಅಂಗಡಿಯಲ್ಲಿ ಚಟ್ನಿಪುಡಿ ಚೆನ್ನಾಗಿ ಸಿಗುತ್ತೆ. ಕೋರಮಂಗಲದಲ್ಲಿ ಹತ್ತಿರ ಶರ್ಲಾಕ್ ಹೋಮ್ಸ್ ಅಂತ ಒಂದು ಬಾರಿದೆಯಂತೆ, ನಡೀರಿ ನೋಡ್ಕೊಂಡು ಬರೋಣ. ಯೂಜಿ ಕೃಷ್ಣಮೂರ್ತಿ ಬಂದಿದ್ದಾರೆ ಹೋಗೋಣ. ಅಂಬರೀಷ ವರ್ಮ ಅಂತ ಗುರು ಒಬ್ಬರಿದ್ದಾರೆ. ಅವರಿಗೆ ಮನೆಯ ಅವಶೇಷಗಳ ಅಡಿಯಲ್ಲಿ ಚಕ್ರ ಸಿಕ್ಕಿದೆಯಂತೆ. ಹೀಗೆ ಏನೇನೇನೋ ಆಸಕ್ತಿಗಳು. ಅವನ್ನೆಲ್ಲ ಎಲ್ಲರಿಗೂ ಹಂಚುವ ತವಕ.

ನಮ್ಮ ಗೆಳೆಯನೊಬ್ಬ ಆಗಷ್ಟೇ ಮದುವೆಯಾಗಿದ್ದ. ಒಂದು ರಾತ್ರಿ ಅವರ ಮನೆಯಲ್ಲಿ ಊಟ ಎಂದು ಗೊತ್ತಾಗಿತ್ತು. ಒಂದಷ್ಟು ಗೆಳೆಯರು, ವೈಯೆನ್ಕೆ; ಜೊತೆಗೆ ಬ್ಲೆಂಡರ್ಸ್ ಪ್ರೈಡ್'. ಪಿಎಚ್ಡಿ ಮುಗಿದ ನಂತರ ಊಟ. ದಕ್ಷಿಣ ಕನ್ನಡದ ಅಡುಗೆ ಮಾತ್ರ ಗೊತ್ತಿದ್ದ ಅವನ ಮನೆಯಾಕೆ, ಸಾರು, ಪಲ್ಯ, ಹುಳಿ, ಮೊಸರು ಮಾಡಿಟ್ಟಿದ್ದಳು. ಊಟ ಮಾಡುತ್ತಾ ವೈಯೆನ್ಕೆ 'ನೋ.. ನೋ ದ.ಕ.ದವರಿಗೆ ಸಾರು ಮಾಡೋಕೆ ಬರೋಲ್ಲ ಅಂದು ಹೇಗೆ ಸಾರು ಮಾಡಬೇಕು ಅಂತ ಪುಟ್ಟ ಭಾಷಣ ಕೊಟ್ಟರು. ಹುಳಿ ಮಾಡೋದು ಹೀಗಲ್ಲ, ನಾಳೆ ಮನೆಗೆ ಬನ್ನಿ ಶ್ರೀಪತಿ ಹೇಳಿಕೊಡ್ತಾನೆ ಅಂದರು. ಮೊಸರು ಮಾಡೋದು ಹೀಗಲ್ಲ. ಹಾಲು ತಂದು ಕೆನೆಗಟ್ಟುವಂತೆ ಕಾಯಿಸಬೇಕು. ನಂತರ ಅದನ್ನು ಮುಚ್ಚಳ ತೆಗೆದಿಟ್ಟು ಆರಲು ಬಿಡಬೇಕು. ಬಿಸಿಯಾರಿದ ನಂತರ ಎರಡು ಚಮಚ ಮಜ್ಜಿಗೆ ಹಾಕಿ ಒಂದು ಮಣೆಯ ಮೇಲಿಡಬೇಕು. ಅದಕ್ಕೊಂದು ಬಟ್ಟೆ ಸುತ್ತಬೇಕು. ಅದಾಗಿ ಏಳು ಗಂಟೆ ನಂತರ ಎತ್ತಿಕೊಂಡು ಹೋಗಿ ಫ್ರಿಜ್ನಲ್ಲಿಡಬೇಕು. ದಕದವರಿಗೆ ಗೊತ್ತಾಗಲ್ಲ' ಅಂದಿದ್ದರು. ನಾನು ನೀವೇ ಎಲ್ಲರಿಗಿಂತ ದೊಡ್ಡ ದ.ಕ.; ಸಂಪಾ–ದ.ಕ. ಅಂದಿದ್ದೆ.

ವೈಯೆನ್ಕೆಗೆ ಎಲ್ಲೆಲ್ಲೂ. ಎಲ್ಲೆಲ್ಲೋ ಗೆಳೆಯರಿದ್ದರು. ಗೆಳೆಯರು ಕಾರು ಕೊಂಡಾಗ, ಮನೆ ಕಟ್ಟಿದಾಗ ಅವರಿಗೆ ಖುಷಿ. ಎಲ್ಲ ಸಂಭ್ರಮಕ್ಕೂ ಒಂದು ಪಾರ್ಟಿ ಆಗಲೇಬೇಕು. ಚೌಕ ರೂಮು 'ಗುಂಡು' ರೂಮು ಆದಾಗಲೇ ಅವರಿಗೆ ತೃಪ್ತಿ. ಕುಡಿಯದೇ ಇದ್ದವರ ಬಗ್ಗೆ ಅವರಿಗೆ ಅಲರ್ಜಿಯೇನೂ ಇರಲಿಲ್ಲ. ಆದರೆ ಅಂಥವರ ಸಂಗ ಅವರಿಗೆ ಇಷ್ಟವಾಗುತ್ತಿರಲಿಲ್ಲ.

ನನ್ನನ್ನು ಕತೆ ಬರೆಯುವಂತೆ, ಅಂಕಣ ಬರೆಯುವಂತೆ ಪ್ರೇರೇಪಿಸಿದ್ದೇ ಅವರು. ನಾನು ಬೆಂಗಳೂರಿಗೆ ಕಾಲಿಟ್ಟ ದಿನಗಳಲ್ಲಿ ವೈಯೆನ್ಕೆ ಹೆಸರು ಸಾಹಿತ್ಯಜಗತ್ತಿಗೆ ಪಾಸ್ಪೋರ್ಟ್ ಮತ್ತು ಪರ್ಮನೆಂಟ್ ವೀಸಾ. ಇಡೀ ದಿನವನ್ನು ಪುಸ್ತಕ, ಸಿನಿಮಾ, ನಾಟಕ, ಗೆಳೆಯರು, ರೇಸು, ಮದ್ಯ ಮತ್ತು ನಿಗೂಢ ಸಂಗತಿಗಳ ಕುರಿತ ವಂಡರ್ನೊಂದಿಗೆ ಕಳೆಯುತ್ತಿದ್ದವರು ಅವರು. ಬೆಳಗ್ಗೆ ಹೋದರೆ ಶೇವ್ ಮಾಡಿಕೊಳ್ಳುತ್ತಲೇ ಇಂಗ್ಲಿಷ್ ಪತ್ರಿಕೆಯ ಕ್ರಾಸ್ವರ್ಡ್ ತುಂಬುತ್ತಾ, ಮಧ್ಯಾಹ್ನ ಹೋದರೆ ಯಾವುದೋ ಪುಸ್ತಕ ಓದುತ್ತಾ, ರಾತ್ರಿ ಹೋದರೆ 'ಬ್ರಾಹ್ಮಿನ್ಸ್ ಬೇಕರಿ'ಯ ಕಾಂಗ್ರೆಸ್ ಕಡ್ಲೆಬೀಜ ಮತ್ತು ಚೀಸ್ನೊಂದಿಗೆ 'ಡಿಂಪಲ್' ಎಂಬ ಸೊಗಸಾದ ಬಾಟಲಿಯಲ್ಲಿರುವ ವಿಸ್ಕಿ ಹೀರುತ್ತಾ ಕೂತಿರುತ್ತಿದ್ದ ವೈಯೆನ್ಕೆ ಮನೆ ನಮ್ಮ ಅನೇಕರ ಪಾಲಿಗೆ ಜಗತ್ತಿನೊಂದು ಕಿಟಕಿಯಾಗಿತ್ತು.

ವೈಯೆನ್ಕೆ ಹುಟ್ಟಿದ್ದು ಮೇ 16. ಅವರನ್ನು ಕೇಳಿದರೆ May or May not ಅನ್ನುತ್ತಿದ್ದರು. ಆದರೆ ಮನೆ ಮುಂದೆ ಮೇ ಫ್ಲವರ್ ಗಿಡ ನೆಟ್ಟಿದ್ದರು. ಅವರ ಮನೆಯ ಹೊರಗಿರುವ ನಾಮಫಲಕದಲ್ಲಿ ವೈ ಎನ್ ಕೃಷ್ಣಮೂರ್ತಿ ಅಂತಿತ್ತು. ಅದರ ಕೆಳಗೆ ಇನ್ ಮತ್ತು out ಅಂತಲೂ ಅದನ್ನು ಅತ್ತಿತ್ತ ಸರಿಸುವುದಕ್ಕೊಂದು ಹಲಗೆಯೂ ಇತ್ತು. ವೈಯೆನ್ಕೆ ಸದಾ ಅದನ್ನು ಇನ್ ಮತ್ತು ಔಟ್‌ಗಳ ಮಧ್ಯೆ ಇಟ್ಟಿರುತ್ತಿದ್ದರು. ಕೇಳಿದರೆ 'ಗುಂಡು ಇನ್ ಆಗುತ್ತೆ, ನಾನು ಔಟ್ ಆಗಲ್ಲ' ಅಂತ ತಮಾಷೆ ಮಾಡುತ್ತಿದ್ದರು.

(ವೈಯನ್ಕೆ 16.05.1926 – 16.10.1999)

***

**ದುಶ್ಯಂತನ ಬರವಣಿಗೆ ಆ(Male)ಮೇಲಿನ ಮೆರವಣಿಗೆ**

**ಕಾದು ನಿಂತಳೆ ಚಡಪಡಿಸುತ ಕುಂತಳೆ**

**ಶಕುಂತಳೆ**

■